ಮಂಗಳವಾರ, ನವೆಂಬರ್ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 306 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿದೇಶ ವಿದ್ಯಮಾನ
ಅಮೆರಿಕ ಚುನಾವಣೆ ಕೌತುಕ

ತಯಾರಿಕಾ ವಲಯ: ಪ್ರಗತಿ ಏರಿಕೆ 12

ಪ್ರಚಾರದಲ್ಲಿ ಡಿಕೆಶಿ–ಎಚ್‌ಡಿಕೆ ವಾಕ್ಸಮರ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,782	23,995	₹82,910 (ಬೆಂಗಳೂರು)	₹1 ಲಕ್ಷ (ಬೆಂಗಳೂರು)	84.11

ಕ್ಷೇಮ ಕುಶಲ
ಆಹಾರವನ್ನು ಸೇವಿಸುವುದಕ್ಕೂ ಒಂದು ಕ್ರಮವಿದೆ. ಅದನ್ನು ಪಾಲಿಸುವುದು ಅತ್ಯಗತ್ಯ.



ವಿಳಂಬದಿಂದಾಗಿ ಸರ್ಕಾರಕ್ಕೆ ಹಿನ್ನಡೆ : ಸುಪ್ರೀಂ ಕೋರ್ಟ್‌ಗೆ ಎಸ್‌ಎಲ್‌ಪಿ

ಭೂ ವ್ಯಾಜ್ಯ: 981 ಮೇಲ್ಮನವಿ ವಜಾ

● ರಾಜೇಶ್ ರೈ ಚಟ್ಲ

ಬೆಂಗಳೂರು: ಭೂ ಸ್ವಾಧೀನಕ್ಕೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರಿ ವಕೀಲರು ಮೇಲ್ಮನವಿ ಸಲ್ಲಿಸಲು ವಿಳಂಬ ಮಾಡಿದ ಕಾರಣಕ್ಕೆ 981 ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಭೂ ಸ್ವಾಧೀನ ವಿವಾದಗಳಿಗೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯಗಳಲ್ಲಿ ಸುಮಾರು 20 ಸಾವಿರ ಮತ್ತು ಹೈಕೋರ್ಟ್‌ನಲ್ಲಿ 2 ಸಾವಿರ ಪ್ರಕರಣಗಳು ಬಾಕಿ ಇವೆ. ಮೇಲ್ಮನವಿಯ ವಿಳಂಬದಿಂದಾಗಿ, ಇಷ್ಟು ಬೃಹತ್ ಸಂಖ್ಯೆಯ ಜಮೀನು ವ್ಯಾಜ್ಯಗಳಲ್ಲಿ ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಹೈಕೋರ್ಟ್‌ನಿಂದ ವಜಾಗೊಂಡಿರುವ ಮೇಲ್ಮನವಿ ಅರ್ಜಿಗಳ ಪೈಕಿ 139 ಪ್ರಕರಣಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿವೆ. ಉಳಿದ ಹೆಚ್ಚಿನ ಪ್ರಕರಣಗಳು ಜಲಸಂಪನ್ಮೂಲ ಇಲಾಖೆಗೆ ಸೇರಿದವುಗಳಾಗಿದ್ದು, ಅದರಲ್ಲೂ 730 ಪ್ರಕರಣಗಳು ಕರ್ನಾಟಕ ನೀರಾವರಿ ನಿಗಮ (ಕೆಎನ್‌ಎನ್‌ಎಲ್), 65 ಪ್ರಕರಣಗಳು ಕೃಷ್ಣ ಭಾಗ್ಯ ಜಲ ನಿಗಮಕ್ಕೆ (ಕೆಬಿಜೆಎನ್‌ಎಲ್) ಸಂಬಂಧಿಸಿವೆ.

ವಜಾ ಆಗಿರುವ ಮೇಲ್ಮನವಿ ಅರ್ಜಿಗಳಿಗೆ ಸಂಬಂಧಿಸಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಅ. 28ರಂದು ಆರ್ಥಿಕ, ಜಲಸಂಪನ್ಮೂಲ, ಲೋಕೋಪಯೋಗಿ, ಕಂದಾಯ, ಕಾನೂನು, ಸಣ್ಣ ನೀರಾವರಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗಳ ಮುಖ್ಯಸ್ಥರ ಜೊತೆ ವಿಡಿಯೊ ಸಂವಾದದ ಮೂಲಕ ಸಭೆ ನಡೆಸಿದ್ದಾರೆ. ಅಲ್ಲದೆ, ಅರ್ಜಿ ವಜಾಗೊಂಡಿರುವುದನ್ನು ಗಂಭೀರವಾಗಿ ಪರಿಗಣಿಸುವಂತೆ ನಿರ್ದೇಶನ ನೀಡಿದ್ದಾರೆ.

‘ಹೈಕೋರ್ಟ್ ಮೇಲ್ಮನವಿ ವಜಾಗೊಳಿಸಿದ ಎಲ್ಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ (ಎಸ್‌ಎಲ್‌ಪಿ) ದಾಖಲಿಸಲು ಒಂದು ವಾರದ ಒಳಗೆ ಎಲ್ಲ ಇಲಾಖೆಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಎಲ್ಲ ಇಲಾಖೆಗಳ ಜೊತೆ ಸಮನ್ವಯ ಮಾಡಿ, ಕ್ರೋಡೀಕೃತ ಮಾಹಿತಿಯನ್ನು ಮುಖ್ಯ ಕಾರ್ಯದರ್ಶಿಯ ಕಚೇರಿಗೆ ಕಂದಾಯ ಇಲಾಖೆಯ ಆಯುಕ್ತರು ಒದಗಿಸಬೇಕು ಎಂದು ಈ ಸಂವಾದದ ಸಂದರ್ಭದಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಜಿಲ್ಲಾ ನ್ಯಾಯಾಲಯ ಮತ್ತು ಹೈಕೋರ್ಟ್ ಸೇರಿ ಬಾಕಿ ಸುಮಾರು 22 ಸಾವಿರ ಭೂ ಸ್ವಾಧೀನ ಪ್ರಕರಣಗಳಲ್ಲಿ ಕೆಎನ್‌ಎನ್‌ಎಲ್ ಮತ್ತು ಕೆಬಿಜೆಎನ್‌ಎಲ್ ಅನ್ನು ಪ್ರತಿವಾದಿಯಾಗಿ ಸೇರಿಸಲು ಜಲ ಸಂಪನ್ಮೂಲ ಇಲಾಖೆ ಕ್ರಮ ವಹಿಸಬೇಕು. ಅಲ್ಲದೆ, ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ಸಮರ್ಪಕ ವಾದ ಮಂಡಿಸುವ ಸಲುವಾಗಿ ಪ್ರತ್ಯೇಕ ವಕೀಲರ ತಂಡವನ್ನು ರಚಿಸಬೇಕು. ಜೊತೆಗೆ, ಸರ್ಕಾರಿ ವಕೀಲರು ವಿಳಂಬ ಮಾಡುತ್ತಿರುವ ಬಗ್ಗೆ ಅಡ್ವೊಕೇಟ್ ಜನರಲ್ ಅವರೇ ನಿಗಾ ವಹಿಸುವಂತೆ ಇಲಾಖೆ ಮನವಿ ಮಾಡಬೇಕು. ಮೇಲ್ಮನವಿ ಸಲ್ಲಿಸಲು ಅಗತ್ಯವಾದ ಆದೇಶದ ಪ್ರತಿಗಳನ್ನು ಪಡೆಯಲು ಆಗುವ ವಿಳಂಬದ ಬಗ್ಗೆ ಸಂಬಂಧಿಸಿದ ಇಲಾಖೆಗಳ ಜೊತೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಮನ್ವಯ ಮಾಡಬೇಕು ಎಂದೂ ತೀರ್ಮಾನಿಸಲಾಗಿದೆ.

‘ಕೆಲವು ಪ್ರಕರಣಗಳಲ್ಲಿ ನಿಗದಿತ ಅವಧಿಯ ಒಳಗೆ ಮೇಲ್ಮನವಿ ಸಲ್ಲಿಸಲು ಆದೇಶ ಹೊರಡಿಸಲಾಗಿತ್ತು. ಆದರೆ, ಅಡ್ವೊಕೇಟ್ ಜನರಲ್ ಅವರ ಕಚೇರಿಯಿಂದ ವಿಳಂಬವಾಗಿದೆ’ ಎಂದು ಕಂದಾಯ ಆಯುಕ್ತರು ವಿವರಣೆ ನೀಡಿದ್ದಾರೆ. ಮೇಲ್ಮನವಿ ಸಲ್ಲಿಸುವ ಪ್ರಕರಣಗಳಲ್ಲಿ ಅಡ್ವೊಕೇಟ್ ಜನರಲ್ ಕಚೇರಿಯಿಂದ ಕೇಳಿದ ಮಾಹಿತಿಯನ್ನು ಒದಗಿಸಲು ಎಲ್ಲ ಇಲಾಖೆಗಳಿಗೆ ಕಾಲಮಿತಿ ನಿಗದಿಪಡಿಸುವುದು ಒಳ್ಳೆಯದು ಎಂಬ ಸಲಹೆಯನ್ನು ಕಂದಾಯ ಇಲಾಖೆಯ ಕಾರ್ಯದರ್ಶಿ ನೀಡಿದ್ದಾರೆ.

5ನೇ ಪುಟ ನೋಡಿ

‘ಪ್ರತ್ಯೇಕ ಕೋಶ ರಚಿಸಲು ಸಲಹೆ’

‘ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ (ಯುಕೆಪಿ) ಭೂಸ್ವಾಧೀನ ಪ್ರಕರಣಗಳಲ್ಲಿ ಪುನರ್ವಸತಿ ಮತ್ತು ಭೂಸ್ವಾಧೀನ ಆಯುಕ್ತರು ವ್ಯಾಜ್ಯ ನಿರ್ವಹಣಾ ಅಧಿಕಾರಿಯಾಗಿದ್ದಾರೆ. ಕೆಲವು ಪ್ರಕರಣಗಳಲ್ಲಿ ಸರ್ಕಾರಿ ವಕೀಲರ ಅಸಹಕಾರದಿಂದ ಮೇಲ್ಮನವಿ ಸಲ್ಲಿಸಲು ವಿಳಂಬವಾಗಿದೆ. ಅಲ್ಲದೆ, ಸರ್ಕಾರದ ವಾದವನ್ನು ಸರಿಯಾಗಿ ಮಂಡಿಸದೇ ಇರುವುದರಿಂದ ಸರ್ಕಾರದ ವಿರುದ್ಧವಾಗಿ ಹೈಕೋರ್ಟ್ ಆದೇಶ ಮಾಡುತ್ತಿದೆ’ ಎಂದು ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರು ವಿವರಣೆ ನೀಡಿದ್ದಾರೆ.

ಜಿಲ್ಲಾ ನ್ಯಾಯಾಲಯಗಳು ಮತ್ತು ಹೈಕೋರ್ಟ್‌ನಲ್ಲಿ ಬಾಕಿ ಇರುವ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಕೋಶ ರಚಿಸಬೇಕು ಮತ್ತು ಐವರು ಸರ್ಕಾರಿ ವಕೀಲರನ್ನು ಒಳಗೊಂಡ ತಂಡವನ್ನು ರಚಿಸುವಂತೆ ಅಡ್ವೊಕೇಟ್ ಜನರಲ್ ಅವರಿಗೆ ಮನವಿ ಮಾಡಬೇಕು ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಅದಕ್ಕೆ, ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ, ‘ಕೆಲವು ಪ್ರಕರಣಗಳಲ್ಲಿ ಕೃಷ್ಣ ಭಾಗ್ಯ ಜಲ ನಿಗಮವು ಮೇಲ್ಮನವಿಯನ್ನೇ ಸಲ್ಲಿಸಿಲ್ಲ. ಅಂತಹ ಪ್ರಕರಣಗಳಲ್ಲಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಜೆ.ಎಂ. ಗಂಗಾಂಧರ್ ಸೂಕ್ತ ಸಹಕಾರ ನೀಡುತ್ತಿದ್ದಾರೆ’ ಎಂದು ಸಮಜಾಯಿಷಿ ನೀಡಿದ್ದಾರೆ.

ಯಾವ ಇಲಾಖೆಯ ಎಷ್ಟು ಪ್ರಕರಣ ವಜಾ?

730 ಕರ್ನಾಟಕ ನೀರಾವರಿ ನಿಗಮ

139 ಕಂದಾಯ ಇಲಾಖೆ

65 ಕೃಷ್ಣ ಭಾಗ್ಯ ಜಲ ನಿಗಮ

ಮೇಲ್ಮನವಿ ವಜಾ ಇಲಾಖೆಗಳ ವಾದವೇನು?

- ಸರ್ಕಾರಿ ವಕೀಲರ ಅಸಹಕಾರ
- ಅಡ್ವೊಕೇಟ್ ಜನರಲ್ ಕಚೇರಿಯಿಂದ ವಿಳಂಬ
- ಸರ್ಕಾರದ ವಾದ ಸರಿಯಾಗಿ ಮಂಡಿಸದೇ ಇರುವುದು

ಸಿದ್ದರಾಮಯ್ಯಗೆ ಲೋಕಾಯುಕ್ತ ಸಮನ್ಸ್; ನಾಳೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದ ಪ್ರಕರಣದಲ್ಲಿ ಬುಧವಾರ (ಇದೇ 6) ವಿಚಾರಣೆಗೆ ಹಾಜರಾಗುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಲ್ಲಿನ ಲೋಕಾಯುಕ್ತ ಪೊಲೀಸರು ಸಮನ್ಸ್ ನೀಡಿದ್ದಾರೆ.

‘ಅಂದು ಬೆಳಿಗ್ಗೆ ಮೈಸೂರಿನ ಕಚೇರಿಯಲ್ಲಿ ವಿಚಾರಣೆಗೆ ಬರುವಂತೆ ಸಮನ್ಸ್ ನೀಡಲಾಗಿದೆ’ ಎಂದು ಲೋಕಾಯುಕ್ತ ಎಸ್‌.ಪಿ. ಟಿ.ಜೆ. ಉದೇಶ್ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

> **ಮುಡಾ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ನಡೆಯುವ ವಿಚಾರಣೆಗೆ ಹಾಜರಾಗುವೆ**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಕರಣದ ಮೊದಲ ಆರೋಪಿ ಆಗಿದ್ದಾರೆ. ಉಳಿದ ಮೂವರು ಆರೋಪಿಗಳಾದ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ, ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನಿನ ಮಾಲೀಕ ದೇವರಾಜು ಅವರ ವಿಚಾರಣೆಯು ಈಗಾಗಲೇ ಮುಗಿದಿದೆ.

ಸಿಬಿಐ ತನಿಖೆಗೆ ಕೋರಿದ ಅರ್ಜಿ: ಇಂದು ವಿಚಾರಣೆ

‘ಮುಡಾ ಪ್ರಕರಣಕ್ಕೆ ಸಂಬಂಧಿಸಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮಂಗಳವಾರಕ್ಕೆ (ನ.5) ನಿಗದಿಗೊಳಿಸಿದೆ.

ಅಮೆರಿಕ ಚುನಾವಣೆ: ಟ್ರಂಪ್, ಕಮಲಾ ನಡುವೆ ಜಿದ್ದಾಜಿದ್ದಿ

ವಾಷಿಂಗ್ಟನ್ (ಪಿಟಿಐ, ಎಪಿ, ಎಫ್‌ಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಮಂಗಳವಾರ (ನ.5) ಮತದಾನ ನಡೆಯಲಿದೆ. ಕಣದಲ್ಲಿ ಐವರು ಅಭ್ಯರ್ಥಿಗಳಿದ್ದರೂ ಹಾಲಿ ಉಪಾಧ್ಯಕ್ಷೆ ಮತ್ತು ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ಮತ್ತು ಮಾಜಿ ಅಧ್ಯಕ್ಷ, ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ನಡುವೆ ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟಿದೆ.



ಕಮಲಾ ಟ್ರಂಪ್

ಅಮೆರಿಕದ ಜನಗಣತಿ ಬ್ಯೂರೊ ಪ್ರಕಾರ, 15.5 ಕೋಟಿ ಅಮೆರಿಕನ್ನರು ಮತದಾನ ಮಾಡಲು ಅರ್ಹರಾಗಿದ್ದಾರೆ. ನವೆಂಬರ್ 2ರವರೆಗೆ 7.5 ಕೋಟಿಗೂ ಹೆಚ್ಚು ಮಂದಿ ಆನ್‌ಲೈನ್ (ಮೇಲ್-ಇನ್ ವೋಟಿಂಗ್) ಮೂಲಕ ತಮ್ಮ ಹಕ್ಕು ಚಲಾಯಿಸಿದ್ದಾರೆ ಎಂದು ಫ್ಲಾರಿಡಾ ವಿ.ವಿ ನೀಡಿರುವ ಅಂಕಿ ಅಂಶಗಳು ಹೇಳಿವೆ.

ಚುನಾವಣಾ ಪೂರ್ವ ಸಮೀಕ್ಷೆಗಳು ಟ್ರಂಪ್ ಮತ್ತು ಕಮಲಾ ಹ್ಯಾರಿಸ್ ನಡುವೆ ಸಮಬಲದ ಹೋರಾಟ ನಡೆಯಲಿದೆ ಎಂದು ಭವಿಷ್ಯ ನುಡಿದಿವೆ. ಕೆಲವು ಸಮೀಕ್ಷೆಗಳಲ್ಲಿ ಟ್ರಂಪ್ ಕೊಂಚ ಮುನ್ನಡೆ ಅನುಭವಿಸಿದ್ದರೆ, ಇನ್ನೂ ಕೆಲವು ಸಮೀಕ್ಷೆಗಳ ಪ್ರಕಾರ ಕಮಲಾ ಮುಂದಿದ್ದಾರೆ.

‘ನಿರ್ಣಾಯಕ ರಾಜ್ಯ’ಗಳು ಎಂದು ಕರೆಯಲಾಗುತ್ತಿರುವ ಏಳು ರಾಜ್ಯಗಳು (ಪೆನ್ಸಿಲ್ವೇನಿಯಾ, ಮಿಷಿಗನ್, ವಿಸ್ಕಾನ್‌ಸಿನ್, ನೆವಾಡ, ಅರಿಜೋನಾ, ಜಾರ್ಜಿಯಾ ಮತ್ತು ಉತ್ತರ ಕೆರೊಲಿನಾ) ಈ ಚುನಾವಣೆಯಲ್ಲಿ ನಿರ್ಣಾಯಕವಾಗಿದ್ದು, ಇಬ್ಬರೂ ಅಭ್ಯರ್ಥಿಗಳು ಈ ರಾಜ್ಯಗಳಲ್ಲಿ ಮತಯಾಚನೆ ಮಾಡುವುದರ ಮೂಲಕ ಕೊನೆ ಹಂತದಲ್ಲಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಿದ್ದಾರೆ.

ಕಂದಕಕ್ಕೆ ಉರುಳಿದ ಖಾಸಗಿ ಬಸ್: 36 ಮಂದಿ ಸಾವು

ಮರ್ಚುಲಾ (ಪಿಟಿಐ): ಉತ್ತರಾಖಂಡದ ಅಲ್ಮೋಡಾ ಜಿಲ್ಲೆಯ ಮರ್ಚುಲಾದಲ್ಲಿ ಸೋಮವಾರ ಖಾಸಗಿ ಬಸ್‌ವೊಂದು 200 ಮೀಟರ್ ಆಳದ ಕಂದಕಕ್ಕೆ ಉರುಳಿದ ಪರಿಣಾಮ 10 ಮಂದಿ ಮಹಿಳೆಯರು ಸೇರಿ ಒಟ್ಟು 36 ಪ್ರಯಾಣಿಕರು ಮೃತಪಟ್ಟಿದ್ದು, 24 ಮಂದಿಗೆ ಗಾಯಗಳಾಗಿವೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಂಭವವಿದೆ. 9

‘ಡಬ್ಬದಡಿ ಪಟಾಕಿ ಇಟ್ಟು, ಜೀವ ತೆಗೆದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸುವಾಗ ಸ್ನೇಹಿತರ ಸವಾಲು ಸ್ವೀಕರಿಸಲು ಹೋಗಿ ವ್ಯಕ್ತಿಯೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಗೊಟ್ಟಿಗೆರೆ ಸಮೀಪದ ವೀವರ್ಸ್ ಕಾಲೊನಿ ನಿವಾಸಿ ಶಬರಿ (32) ಮೃತಪಟ್ಟವರು.

ಮೃತ ವ್ಯಕ್ತಿಯ ತಾಯಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಕೋಣನಕುಂಟೆ ಠಾಣೆ ಪೊಲೀಸರು, ವೀವರ್ಸ್ ಕಾಲೊನಿ ನಿವಾಸಿಗಳಾದ ನವೀನ್ ಕುಮಾರ್, ದಿನಕರ್, ಸತ್ಯವೇಲು, ಕಾರ್ತಿಕ್, ಸತೀಶ್ ಹಾಗೂ ಸಂತೋಷ್ ಕುಮಾರ್ ಅವರನ್ನು ಬಂಧಿಸಿದ್ದಾರೆ.

ಶಬರಿ ಮತ್ತು ಆರೋಪಿಗಳು ಸ್ನೇಹಿತರು. ಒಂದೇ ಬಡಾವಣೆಯಲ್ಲಿ ನೆಲಸಿದ್ದು, ಗಾರೆ ಕೆಲಸ ಮಾಡಿಕೊಂಡಿದ್ದರು. ಅ. 31ರಂದು ರಾತ್ರಿ ಶಬರಿ ಅವರು ಮದ್ಯ ಕುಡಿದು ವೀವರ್ಸ್ ಕಾಲೊನಿಯ ಮೂರನೇ ಅಡ್ಡರಸ್ತೆಯ ಅಂಥೋನಿ ಅವರ ಅಂಗಡಿಗೆ ಹೋಗಿದ್ದರು. ಅದೇ ವೇಳೆ ಅಂಗಡಿ ಎದುರಿನ ರಸ್ತೆಯಲ್ಲಿ ಆರೋಪಿಗಳು ಪಟಾಕಿ ಸಿಡಿಸುತ್ತಿದ್ದರು.

3ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಗರದ ಹೆದ್ದಾರಿ, ಸರ್ವಿಸ್ ರಸ್ತೆಗಳಲ್ಲಿ ಸಾಲುಗಟ್ಟಿ ನಿಂತ ವಾಹನಗಳು, ಪ್ರಯಾಣಿಕರ ಪರದಾಟ

ರಸ್ತೆ, ಮೆಟ್ರೊ ನಿಲ್ದಾಣಗಳಲ್ಲಿ 'ದಟ್ಟಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆದ್ದಾರಿ, ಸರ್ವಿಸ್ ರಸ್ತೆಗಳಲ್ಲಿ ತೆವಳುತ್ತಾ ಸಾಗುತ್ತಿದ್ದ ವಾಹನಗಳು, ಪಕ್ಕದ ದಾರಿಯಲ್ಲಿ ಮೆಟ್ರೊ ರೈಲಿಗಾಗಿ ಕಿ.ಮೀ. ದೂರದವರೆಗೆ ಸರತಿಯಲ್ಲಿ ನಿಂತು ಹೆಜ್ಜೆ ಮೇಲೆ ಹೆಜ್ಜೆ ಹಾಕುತ್ತಿದ್ದ ಪ್ರಯಾಣಿಕರು, ದಟ್ಟಣೆಯಲ್ಲೇ ಸಿಲುಕಿದ; ಶಾಲಾ–ಕಾಲೇಜಿಗೆ ಮಕ್ಕಳನ್ನು ಬಿಡಲು ಹೊರಟವರು, ರಸ್ತೆಗಳಲ್ಲಿ–ಮೆಟ್ರೊ ನಿಲ್ದಾಣದ ಆವರಣದಲ್ಲಿ ಎಲ್ಲೆಲ್ಲೂ ಜನದಟ್ಟಣೆ...

ಇದು ಸೋಮವಾರ ಬೆಳಿಗ್ಗೆ ಸುಮಾರು ಏಳು ಗಂಟೆಯಿಂದ ಮಧ್ಯಾಹ್ನದವರೆಗಿನ ನಾಗಸಂದ್ರ ಮೆಟ್ರೊ ನಿಲ್ದಾಣದ ಸುತ್ತಮುತ್ತ ಕಂಡುಬಂದ ದೃಶ್ಯಗಳು.

ಹಬ್ಬದ ಸರಣಿ ರಜೆಗಳನ್ನು ಮುಗಿಸಿಕೊಂಡು ಬಸ್‌ಗಳಲ್ಲಿ ಬೆಂಗಳೂರು ತಲುಪಿದ ಬಹುತೇಕರು, ಮುಂದೆ ಸಂಚಾರ ದಟ್ಟಣೆಯನ್ನು ಅರಿತು, ನಾಗಸಂದ್ರದಲ್ಲೇ ಇಳಿದು ಮೆಟ್ರೊ ರೈಲು ಹತ್ತಲು ಮುಂದಾದರು. ಏಕಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರಿಂದ ನಿಲ್ದಾಣದ ಎರಡೂ ಪ್ರವೇಶ ದ್ವಾರಗಳಲ್ಲಿ ಸರತಿ ಸಾಲು ಕಿ.ಮೀ. ಉದ್ದವಿತ್ತು. 'ಐಕಿಯಾ' ಭಾಗದ ಪ್ರವೇಶ ದ್ವಾರದಲ್ಲಿ ಕೆನ್ನಮೆಟಲ್ ಕಂಪನಿವರೆಗೂ ಸರತಿ ಸಾಲಿತ್ತು. ಮತ್ತೊಂದು ಪ್ರವೇಶ ದ್ವಾರದಲ್ಲಿ ಸುರುಳಿ ಸುತ್ತಿಕೊಂಡಂತೆ ನಿಂತ ಸರತಿ ಸಾಲು, ವಿಡಿಯಾ ಪೂರ್ಣಪ್ರಜ್ಞ ಶಾಲೆ ರಸ್ತೆಯ ಅರ್ಧ ಭಾಗದವರಗೂ ಮುಂದುವರಿದಿತ್ತು.



ತುಮಕೂರು ರಸ್ತೆಯ ಪೀಣ್ಯ ಮೆಟ್ರೊ ನಿಲ್ದಾಣದ ಬಳಿಯಲ್ಲಿ ಸಂಚಾರ ದಟ್ಟಣೆಯ ದೃಶ್ಯ ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ್

ಮುಖ್ಯಾಂಶಗಳು

- ನಾಗಸಂದ್ರ ಮೆಟ್ರೊದಲ್ಲಿ ಕಿಲೋಮೀಟರ್ ಉದ್ದದ ಸರತಿ ಸಾಲು
- ಸರ್ವಿಸ್ ರಸ್ತೆಗಳಲ್ಲೂ ಸಂಚಾರ ದಟ್ಟಣೆ
- ವಿಸ್ತರಿಸಿದ ಮಾರ್ಗ ಬೇಗ ಆರಂಭಿಸಲು ಒತ್ತಾಯ

ಈ ಪ್ರಯಾಣಿಕರ ಜೊತೆಗೆ, ನಿತ್ಯವೂ ಶಾಲಾ–ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು, ಕಚೇರಿಗೆ ತೆರಳುವ ಉದ್ಯೋಗಿಗಳು ಇದೇ ಸಮಯಕ್ಕೆ ಮೆಟ್ರೊ ರೈಲಿಗಾಗಿ ನಿಲ್ದಾಣಕ್ಕೆ ಬಂದಿದ್ದರಿಂದ, ದಟ್ಟಣೆ ಹೆಚ್ಚುತ್ತಾ ಹೋಯಿತು.

'ಇದೇನೂ ಹೊಸದಲ್ಲ. ಪ್ರತಿ ಬಾರಿ ಸರಣಿ ರಜೆಗಳು, ಹಬ್ಬಗಳ ರಜೆ ಆರಂಭಕ್ಕೆ ಮುನ್ನ ಮತ್ತು ರಜೆ ಮುಗಿದ ನಂತರ, ಇಲ್ಲಿ ವಾಹನ ದಟ್ಟಣೆ, ಜನದಟ್ಟಣೆ ಸಾಮಾನ್ಯವಾಗಿದೆ. ಈ ಬಾರಿ, ಸ್ವಲ್ಪ ಹೆಚ್ಚಾಗಿ ಟ್ರಾಫಿಕ್ ಜಾಮ್ ಆಗಿದೆ' ಎಂದು ವಾಹನ ಸವಾರರೊಬ್ಬರು ಬೇಸರದಿಂದ ಹೇಳಿದರು.

ಮೆಟ್ರೊ ನಿಲ್ದಾಣದ ಎದುರಿನ ಸರತಿ ಸಾಲಿನ ಚಿತ್ರವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ನಾಗರಿಕರೊಬ್ಬರು, 'ಬೆಂಗಳೂರು ಸಂಚಾರ ನಿಯಂತ್ರಣದ ವಿಚಾರದಲ್ಲಿ ಹಿಂದೆ ಉಳಿದಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ. ಮತ್ತೊಬ್ಬರು, 'ತುಮಕೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ನಾಗಸಂದ್ರ–ಮಾದಾವರ ಹೊಸ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ರೈಲು ಸೇವೆಯನ್ನು ಕೂಡಲೇ ಆರಂಭಿಸಬೇಕು' ಎಂದು ಒತ್ತಾಯಿಸಿದ್ದಾರೆ.

ತುಮಕೂರು ರಸ್ತೆ, ಮೈಸೂರು ರಸ್ತೆ, ಹೊಸೂರು ರಸ್ತೆಯಲ್ಲಿ ವಾಹನ ದಟ್ಟಣೆಯಲ್ಲಿ ಪ್ರಯಾಣಿಕರು ಸಿಲುಕಿ ಪರದಾಡಿದರು. ಊರಿಗೆ ಹೋದವರು ಭಾನುವಾರ ಸಂಜೆಯಿಂದಲೇ ನಗರದತ್ತ ಬರಲು ಆರಂಭಿಸಿದರು. ಇದರಿಂದ ನೆಲಮಂಗಲದ ಬಳಿ ವಾಹನಗಳು ಸಾಲು ಗಟ್ಟಿ ನಿಂತಿದ್ದವು. ಹೆಬ್ಬಾಳ ಮೇಲ್ಸೇತುವೆಯಲ್ಲೂ ಇದೇ ಸಮಸ್ಯೆ ಇತ್ತು.

ಉಳಿದೆಡೆಯೂ ಇದೇ ವ್ಯಥೆ

ಹಳೇ ಮದ್ರಾಸ್ ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ಗೊರಗುಂಟೆಪಾಳ್ಯದ ಹೊರ ವರ್ತುಲ ರಸ್ತೆ, ರಾಜ್‌ಕುಮಾರ್ ರಸ್ತೆ ಹಾಗೂ ಮೆಜೆಸ್ಟಿಕ್ ಸುತ್ತಮುತ್ತ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ರೈಲು, ಬಸ್ಸು, ಮೆಟ್ರೊ ತುಂಬಿ ತುಳುಕಿದ್ದು ಕಂಡುಬಂತು.

ಯಶವಂತಪುರ ಮೆಟ್ರೊ ನಿಲ್ದಾಣದಲ್ಲೂ ದಟ್ಟಣೆ ಹೆಚ್ಚಾಗಿತ್ತು. ದೂರದೂರುಗಳಿಂದ ಬಂದು ರೈಲು ನಿಲ್ದಾಣದಲ್ಲಿ ಇಳಿದವರು ಮನೆಗೆ, ಕಚೇರಿಗೆ ಹೋಗಲು ಪರದಾಡಿದರು.

ಅಧಿಕ ಪ್ರಯಾಣಿಕರು

ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಸಾಮಾನ್ಯ ದಿನಗಳಲ್ಲಿ ಬೆಳಿಗ್ಗೆ 6 ರಿಂದ 11 ಗಂಟೆಯ ಅವಧಿಯಲ್ಲಿ ಸರಾಸರಿ 11000 ಜನರು ಪ್ರಯಾಣಿಸುತ್ತಿದ್ದರು. ಸೋಮವಾರ ಈ ಅವಧಿಯಲ್ಲಿ 15,800 ಪ್ರಯಾಣಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಾಗಸಂದ್ರ ಮೆಟ್ರೊ ನಿಲ್ದಾಣದಲ್ಲಿ ಪ್ರಯಾಣಿಕರ ಸರತಿ ಸಾಲು



ಕೆ.ಆರ್.ಪುರಂನ ಹಳೇ ಮದ್ರಾಸ್ ರಸ್ತೆಯ ಐಟಿಐ ಸಮೀಪದಲ್ಲಿ ಸೋಮವಾರ ಕಂಡುಬಂದ ಸಂಚಾರ ದಟ್ಟಣೆ ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಸುದ್ದಿ 2 ನಿಮಿಷ

ಶ್ರೀಲಂಕಾದಲ್ಲಿ 'ವಿಜ್ಞಾನ ಮತ್ತು ತಂತ್ರಜ್ಞಾನ ಪ್ರದರ್ಶನ'

ಬೆಂಗಳೂರು: 'ಕೃಷಿಯಲ್ಲಿ ರಾಜ್ಯದ ರೈತರು ಅಳವಡಿಸಿಕೊಂಡಿರುವ ಕೌಶಲಗಳನ್ನು ಪ್ರದರ್ಶಿಸಲು ಶ್ರೀಲಂಕಾದಲ್ಲಿ 'ವಿಜ್ಞಾನ ಮತ್ತು ತಂತ್ರಜ್ಞಾನ ಪ್ರದರ್ಶನ'ವನ್ನು ಆಯೋಜಿಸಲಾಗಿದೆ ಎಂದು ಪಾರ್ಟೆಕ್ಸ್ ಟ್ರೇಡ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಂಚು ತಿಳಿಸಿದರು.

'ಶ್ರೀಲಂಕಾದ ಪೋರ್ಟ್ ಸಿಟಿ ಕೊಲಂಬೊದಲ್ಲಿ (ಪಿಪಿಸಿ) ಡಿಸೆಂಬರ್ 20ರಿಂದ 22ರವರೆಗೆ ಆಯೋಜಿಸಲಾಗಿರುವ ಪ್ರದರ್ಶನದಲ್ಲಿ ರಾಜ್ಯದ 500 ಮಳಿಗೆಗಳು ಇರಲಿವೆ. ಸ್ಥಳೀಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸಲು ಈ ವೇದಿಕೆ ಸಹಾಯಕವಾಗಲಿದೆ' ಎಂದು ಸೋಮವಾರ ನಡೆದ 'ವಿಜ್ಞಾನ ಮತ್ತು ತಂತ್ರಜ್ಞಾನ ಜಾಗೃತಿ ಪ್ರದರ್ಶನ'ದಲ್ಲಿ ಅವರು ಮಾಹಿತಿ ನೀಡಿದರು.

'ರಾಜ್ಯದ ಕೃಷಿ, ತೋಟಗಾರಿಕೆ, ಡೇರಿ, ಪೌಲ್ಟ್ರಿ ಮತ್ತು ಆಹಾರ ಸಂಸ್ಕರಣೆಯಲ್ಲಿನ ಆವಿಷ್ಕಾರಗಳನ್ನು ಪ್ರದರ್ಶಿಸಲಾಗುತ್ತದೆ. ಅಲ್ಲದೆ, ಇಲ್ಲಿನ ಉತ್ಪನ್ನಗಳಿಗೆ ಶ್ರೀಲಂಕಾದ ಮೂಲಕ 'ಭಾರತ್ ಸೂಪರ್ ಮಾರ್ಕೆಟ್' ಹಾಗೂ https://export2day.com/ ನಿಂದ ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲಾಗುತ್ತದೆ' ಎಂದು ತಿಳಿಸಿದರು.

'ನಮ್ಮ ದೇಶದ ತಂತ್ರಜ್ಞಾನಗಳನ್ನು ಶ್ರೀಲಂಕಾದೊಂದಿಗೆ ಹಂಚಿಕೊಳ್ಳುವುದರ ಜೊತೆಗೆ ಅಲ್ಲಿನ ಇ–ಕಾಮರ್ಸ್, ಕೃಷಿ ಮಾರುಕಟ್ಟೆ, ಉತ್ಪನ್ನಗಳ ದಾಸ್ತಾನು ಪ್ರಕ್ರಿಯೆಗಳು ನಮಗೆ ಸಹಾಯಕವಾಗಲಿವೆ' ಎಂದು ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ್ ಎಸ್. ಆಲೂರು ಹೇಳಿದರು.



200 ಅಕ್ರಮ ಕಟ್ಟಡ ತೆರವು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಸುಮಾರು 200 ಕಟ್ಟಡಗಳು ನಿಯಮಗಳನ್ನು ಉಲ್ಲಂಘಿಸಿದ್ದು, ಅವುಗಳನ್ನು ಶೀಘ್ರ ತೆರವು ಮಾಡಲಾಗುತ್ತದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಕಿರಿಯ ಹಾಗೂ ಸಹಾಯಕ ಎಂಜಿನಿಯರ್‌ಗಳು ಸೇರಿದಂತೆ ಹೊರ ಗುತ್ತಿಗೆ ಆಧಾರದಲ್ಲಿ 70 ಸಿಬ್ಬಂದಿಯನ್ನು ನೇಮಿಸಿಕೊಂಡು ಅಕ್ರಮ ಕಟ್ಟಡಗಳ ಸಮೀಕ್ಷೆ ನಡೆಸಲಾಗುತ್ತಿದೆ. ಮಹದೇವಪುರದಲ್ಲಿ 65 ಹಾಗೂ ಪಶ್ಚಿಮ ವಲಯದಲ್ಲಿ 27 ಕಟ್ಟಡಗಳು ಅಕ್ರಮವಾಗಿ ನಿರ್ಮಾಣವಾಗುತ್ತವೆ ಎಂಬ ವರದಿ ಬಂದಿದೆ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

ಎಲ್ಲ ವಲಯದ ಮಾಹಿತಿಯ ವರದಿ ಮಂಗಳವಾರ ದವರೆಗೆ ಬರಲಿದೆ. ಸುಮಾರು 200 ಕಟ್ಟಡಗಳು ನಿಯಮ ಉಲ್ಲಂಘಿಸಿವೆ ಎಂದು ಅಂದಾಜಿಸಲಾಗಿದೆ ಎಂದು ತಿಳಿಸಿದರು.

ವಕ್ಫ್: ರಾಜ್ಯದ ಹಲವೆಡೆ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರಿಗೆ ವಕ್ಫ್ ನೋಟಿಸ್ ನೀಡಿರುವುದು ಮತ್ತು ರೈತರ ಪಹಣಿಯಲ್ಲಿ ವಕ್ಫ್ ಹೆಸರು ನಮೂದಿಸಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ರಾಜ್ಯ ವ್ಯಾಪಿ ಪ್ರತಿಭಟನೆಯನ್ನು ಸೋಮವಾರ ನಡೆಸಿದರು.

ವಿಜಯಪುರ, ಬೆಳಗಾವಿ, ಬಳ್ಳಾರಿ, ಧಾರವಾಡ, ಹೊಸಪೇಟೆ, ಶಿವಮೊಗ್ಗ, ದಾವಣಗೆರೆ, ಮಂಗಳೂರು, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಸೇರಿ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದೆ.

ವಿಜಯಪುರ ನಗರದಲ್ಲಿ ಶ್ರೀಸಿದ್ದೇಶ್ವರ ಗುಡಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಮೆರವಣಿಗೆ ನಡೆಯಿತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ರಮೇಶ ಜಿಗಜಿಣಗಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ಕೊಲ್ಹಾಪುರ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ವಿಜಯಪುರ ಜ್ಞಾನ ಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೋಲಾರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಪ್ರತಿಭಟನೆಯ ನೇತೃತ್ವವನ್ನು ವಿರೋಧ ಪಕ್ಷದ ನಾಯಕ ಆರ್. ಅಶೋಕ ವಹಿಸಿದ್ದರು. ಬಳ್ಳಾರಿಯಲ್ಲಿ ನಡೆದ ಪ್ರತಿಭಟನೆ ನೇತೃತ್ವವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಹಿಸಿದ್ದರು.

ಬೆಳಗಾವಿಯಲ್ಲಿ ರಾಣಿ ಚನ್ನಮ್ಮ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿದ ಬಿಜೆಪಿ ನಾಯಕರು, ಕಾರ್ಯಕರ್ತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.



ರೈತರ ಪಹಣಿಯಲ್ಲಿ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಾಗಿರುವುದನ್ನು ಕೈಬಿಡಬೇಕು ಎಂದು ಆಗ್ರಹಿಸಿ ಬೀದರ್‌ನ ತಹಶೀಲ್ದಾರ್ ಕಚೇರಿ ಎದುರು ಬಿಜೆಪಿ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ: ಲೋಕೇಶ ವಿ. ಬಿರಾದಾರ

'ಬಿಜೆಪಿ ಅವಧಿಯಲ್ಲೂ ನೋಟಿಸ್'



ಸಿದ್ದರಾಮಯ್ಯ


ಶಿಗ್ಗಾವಿ/ಹುಬ್ಬಳ್ಳಿ: 'ಬಿಜೆಪಿಯವರು ಸುಳ್ಳು ಹೇಳುತ್ತಾರೆ. ನನ್ನ ವಿರುದ್ಧವೇ ಸುಳ್ಳು ಆರೋಪ ಮಾಡಿ ಕಳಂಕ ತರಲು ಯತ್ನಿಸಿದರು. ಅವರ ಅಧಿಕಾರ ಅವಧಿಯಲ್ಲಿ ವಕ್ಫ್ ಆಸ್ತಿ ವಿಷಯದಲ್ಲಿ ಜನರಿಗೆ ನೋಟಿಸ್ ನೀಡಿದ್ದರು. ಈಗ ಅವರೇ ವಕ್ಫ್ ಆಸ್ತಿ ಸಂಬಂಧ ಚಳವಳಿ ನಡೆಸಿದ್ದಾರೆ. ಅವರಿಗೆ ಮಾನ–ಮರ್ಯಾದೆ ಇದೆಯೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

'ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ಸದಾನಂದಗೌಡ, ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗಲೂ ವಕ್ಫ್ ಆಸ್ತಿ ವಿಷಯದಲ್ಲಿ ರೈತರಿಗೆ ನೋಟಿಸ್ ನೀಡಲಾಗಿದೆ' ಎಂದರು.

ಇದಕ್ಕೂ ಮುನ್ನ ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಕ್ಫ್ ಆಸ್ತಿ ಅತಿಕ್ರಮಣ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ವೇಳೆ ಅಧಿಕಾರಿಗಳಿಗೆ ಸೂಚಿಸಿದ್ದರು. ಈಗ ಅವರೇ, ವಕ್ಫ್ ಆಸ್ತಿ ನೋಟಿಸ್ ಬಗ್ಗೆ ಚಳವಳಿ ನಡೆಸಿದ್ದಾರೆ' ಎಂದರು.

'ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಒತ್ತುವರಿಯಾದ ಇಂಚಿಂಚೂ ವಕ್ಫ್ ಆಸ್ತಿಯನ್ನು ಕಾಪಾಡುವುದಾಗಿ ಹೇಳಿದ್ದರು. ಈಗ ರಾಜಕೀಯ ಕಾರಣಕ್ಕಾಗಿ ವಿರುದ್ಧವಾಗಿ ಮಾತನಾಡುತ್ತಾರೆ. ಅವರೇ ಹೇಳಿದ್ದ ಮಾತುಗಳಿಗೆ ರಾಜಕೀಯ ಕಾರಣಕ್ಕಾಗಿ ಉಲ್ಟಾ ಹೊಡೆದಿದ್ದಾರೆ' ಎಂದರು.

'ಅಲ್ಪಸಂಖ್ಯಾತರ ಓಲೈಕೆಗಾಗಿ ಲ್ಯಾಂಡ್ ಜಿಹಾದ್'



ಆರ್.ಅಶೋಕ

ಕೆ.ಆರ್.ಪುರ: 'ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನು ಓಲೈಸುವುದಕ್ಕಾಗಿ ಸರ್ಕಾರ ಲ್ಯಾಂಡ್ ಜಿಹಾದ್ ಹೆಸರಿನಲ್ಲಿ ನಮ್ಮ ಅನ್ನದಾತರ ಜಮೀನು ಕಬಳಿಸಲು ಮುಂದಾಗಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

'ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಈ ವಿವಾದಕ್ಕೆ ಮೂಲ ಕಾರಣರಾದ ಸಚಿವ ಜಮೀರ್ ಅಹಮ್ಮದ್ ಅವರೂ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

ಕೆ.ಆರ್.ಪುರದಲ್ಲಿ ಹಮ್ಮಿಕೊಂಡಿದ್ದ ವಕ್ಫ್ ಮಂಡಳಿ ವಿರುದ್ಧ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾಲ್ನಡಿಗೆ ಜಾಥಾ, ಪ್ರತಿಭಟನೆ

ಯಲಹಂಕ: ರಾಜ್ಯದಲ್ಲಿ ರೈತರು, ದೇವಸ್ಥಾನಗಳು, ಮಠಗಳು ಹಾಗೂ ಶಾಲೆಗಳ ಆಸ್ತಿಗಳನ್ನು ವಕ್ಫ್ ಆಸ್ತಿ ಎಂದು ನಮೂದಿಸಿರುವುದನ್ನು ವಿರೋಧಿಸಿ ಯಲಹಂಕ, ದಾಸರಹಳ್ಳಿ ಹಾಗೂ ಬ್ಯಾಟರಾಯನಪುರ ಕ್ಷೇತ್ರಗಳ ಬಿಜೆಪಿ ಕಾರ್ಯಕರ್ತರು ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಉಪನಗರದ ಶೇಷಾದ್ರಿಪುರ ಕಾಲೇಜಿನಿಂದ ಕಾಲ್ನಡಿಗೆ ಜಾಥಾದ ಮೂಲಕ ಆಗಮಿಸಿದ ನೂರಾರು ಕಾರ್ಯಕರ್ತರು, ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಜಮಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸ್ಮಶಾನ ಮತ್ತು ಮಸೀದಿ ಜಾಗದಲ್ಲಿ ಅತಿಕ್ರಮ ಪ್ರವೇಶ ಮಾಡಬಾರದೆಂದು ಕಾಯ್ದಿರಿಸಿಕೊಳ್ಳಲು ಜಾರಿಗೆ ಬಂದ ವಕ್ಫ್ ಮಂಡಳಿಯು, ಇಂದು ರೈತರ ಭೂಮಿಗಳಿಗೆ ಬೇಲಿ ಹಾಕುವ ಕೆಲಸಕ್ಕೆ ಕೈಹಾಕಿದೆ. ಇದಕ್ಕೆ ಕಾಂಗ್ರೆಸ್ ಸರ್ಕಾರವೇ ನೇರ ಕಾರಣ' ಎಂದು ದೂರಿದರು.

'ಮಾದಿಗ ಸಮುದಾಯದ ಜಾಗ ಉಳಿಸಿ'



ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ

ಬೆಂಗಳೂರು: ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯಲ್ಲಿ ಖಬರಸ್ಥಾನದ ಪಕ್ಕದಲ್ಲೇ ಇರುವ ಚರ್ಮ ಕೈಗಾರಿಕಾ ಪ್ರದೇಶ, ಚರ್ಮದ ಮಂಡಿ ಮತ್ತು ಮಾದಿಗ ಸಮುದಾಯಕ್ಕೆ ಸೇರಿದ ಸಮುದಾಯ ಭವನವನ್ನು ವಕ್ಫ್ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಸ್ಥಳೀಯ ಜಾಮಿಯಾ ಮಸೀದಿ ವಕ್ಫ್ ಮಂಡಳಿಗೆ ಪತ್ರ ಬರೆದಿರುವುದಕ್ಕೆ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, '1959ರಲ್ಲಿ ರಾಜ್ಯ ಸರ್ಕಾರ ಮಾದಿಗ ಸಮುದಾಯದವರಿಗೆ ಚರ್ಮದ ಗುಡಿ ಕೈಗಾರಿಕೆ ನಡೆಸಲು ಖಬರಸ್ಥಾನದ ಪಕ್ಕದಲ್ಲೇ ಜಮೀನು ನೀಡಿತ್ತು. ಆಗ ನಮ್ಮ ಸಮುದಾಯವರು ಸಣ್ಣಪುಟ್ಟ ವ್ಯಾಪಾರ ಮಳಿಗೆಗಳಿಗೂ ಅವಕಾಶ ನೀಡಿದ್ದರು. ಆದರೆ ಜಾಮೀಯ ಮಸೀದಿಯವರು, ಆ ಜಾಗ ತಮ್ಮದೆಂದು ಹೇಳಿಕೊಳ್ಳುತ್ತಿದ್ದಾರೆ. ಸರ್ಕಾರ ಇದಕ್ಕೆ ಅವಕಾಶ ನೀಡಬಾರದು' ಎಂದಿದ್ದಾರೆ.

'ಇದು ತಪ್ಪು ಮಾಹಿತಿ, ಸದರಿ ಜಾಗವನ್ನು ಸರ್ಕಾರ ಮಾದಿಗ ಸಮುದಾಯಕ್ಕೆ ನೀಡಿದೆ. ಈ ಜಾಗವನ್ನು ಉಳಿಸಿಕೊಡಬೇಕು. ವಕ್ಫ್ ಮಂಡಳಿಗೆ ನೀಡಬಾರದು' ಎಂದು ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದ್ದಾರೆ.

'ವಕ್ಫ್ ಹೆಸರು ತೆಗೆಯದಿದ್ದರೆ ಪ್ರತಿಭಟನೆ'

ಪ್ರಜಾವಾಣಿ ವಾರ್ತೆ



ಕೋಡಿಹಳ್ಳಿ ಚಂದ್ರಶೇಖರ

ಬೆಂಗಳೂರು: 'ರೈತರ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರಿಸಿದ್ದನ್ನು ಈ ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಎಚ್ಚರಿಕೆ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ವಕ್ಫ್ ಮಂಡಳಿಗೆ ಸಂಬಂಧಿಸಿದಂತೆ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ ವಿವಾದ ಸೃಷ್ಟಿಸುತ್ತಿವೆ. ಈ ಎರಡೂ ಪಕ್ಷಗಳು ಪರಸ್ಪರ ಕೆಸರೆರಚಾಟ ಬಿಟ್ಟು ರೈತರ ಹಿತರಕ್ಷಣೆಗೆ ಆದ್ಯತೆ ನೀಡಬೇಕು. ವಕ್ಫ್ ಮಂಡಳಿಗೆ ಸೇರಿದ ಭೂಮಿ ಎಂಬ ದಾಖಲೆಗಳಿದ್ದರೆ ಸರ್ಕಾರ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿದರು.

'ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ನಿರ್ದೇಶನದ ಮೇರೆಗೆ ಜಿಲ್ಲಾಧಿಕಾರಿಗಳು ರೈತರ ಜಮೀನುಗಳ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರಿಸಿದ್ದಾರೆ. ರೈತರನ್ನು ಒಕ್ಕಲೆಬ್ಬಿಸುವ ವಕ್ಫ್ ವಿವಾದವನ್ನು ಕೂಡಲೇ ನಿವಾರಿಸಬೇಕು. ವಕ್ಫ್ ಮಂಡಳಿಗೆ ನೀಡಿರುವ ಅಧಿಕಾರವನ್ನು ಹಿಂಪಡೆಯಬೇಕು. ಸರ್ಕಾರಕ್ಕೆ ಧಮ್ ಇದ್ದರೆ ಮಂದಿರ, ಮಸೀದಿ ಹಾಗೂ ಚರ್ಚ್‌ಗಳಿಗೆ ಸೇರಿದ ಆಸ್ತಿಯನ್ನು ರಾಷ್ಟ್ರೀಕರಣ ಮಾಡಬೇಕು' ಎಂದು ಸವಾಲು ಹಾಕಿದರು.

ಒಂದೇ ದಿನ ಬುಕ್ಕಿಂಗ್ ಮಾಡಿದ 85 ಸಾವಿರಕ್ಕೂ ಅಧಿಕ ಪ್ರಯಾಣಿಕರು

ಆನ್‌ಲೈನ್ ಟಿಕೆಟ್: 'ಅವತಾರ್' ದಾಖಲೆ

● ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ಕೆಎಸ್‌ಆರ್‌ಟಿಸಿಯ 'ಅವತಾರ್' ಆನ್‌ಲೈನ್ ಟಿಕೆಟ್ ಬುಕ್ಕಿಂಗ್‌ನಲ್ಲಿ ಭಾನುವಾರ ಒಂದೇ ದಿನ 85 ಸಾವಿರ ಪ್ರಯಾಣಿಕರು ಟಿಕೆಟ್ ಕಾಯ್ದಿರಿಸಿರುವುದು ದಾಖಲೆಯಾಗಿದೆ.

'ಅವತಾರ್'ನಲ್ಲಿ ದಿನಕ್ಕೆ ಟಿಕೆಟ್ ಕಾಯ್ದಿರಿಸುವವರ ಪ್ರಮಾಣ 25 ಸಾವಿರದಿಂದ 30 ಸಾವಿರವರೆಗೆ ಇರುತ್ತಿತ್ತು. ದೀಪಾವಳಿಯ ಹಿಂದಿನ ದಿನ ಅಂದರೆ ಅ.30ರಂದು ಒಂದೇ ದಿನ ಈ ಪ್ರಮಾಣ ದುಪ್ಪಟ್ಟಾಗಿತ್ತು. ಅಂದು 67 ಸಾವಿರ ಪ್ರಯಾಣಿಕರು ಟಿಕೆಟ್ ಕಾಯ್ದಿರಿಸಿದ್ದರು. ಬೆಂಗಳೂರಿನಿಂದ ಹೋಗುವ ಪ್ರಯಾಣಿಕರ ಪಾಲೇ ಅಧಿಕವಾಗಿತ್ತು. ಭಾನುವಾರ ಈ ದಾಖಲೆಯನ್ನೂ 'ಅವತಾರ್' ಮುರಿದಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅವತಾರ್ ಮುಂಗಡ ಟಿಕೆಟ್ ಕಾಯ್ದಿರಿಸಲು ಬಸ್‌ನಿಲ್ದಾಣಗಳಲ್ಲಿ ಜನರು ಸರದಿಯಲ್ಲಿ ನಿಲ್ಲುವುದನ್ನು ತಪ್ಪಿಸುವುದಕ್ಕಾಗಿ ಕೆಎಸ್‌ಆರ್‌ಟಿಸಿ 2006ರಲ್ಲಿ 'ಅವತಾರ್'ವನ್ನು ಪರಿಚಯಿಸಿತ್ತು. ನಿಧಾನಕ್ಕೆ ಆನ್‌ಲೈನ್‌ನಲ್ಲಿ ಕಾಯ್ದಿರಿಸುವವರ ಸಂಖ್ಯೆ ಹೆಚ್ಚಾಗಿತ್ತು. ಜನರು ತಾವಿದ್ದಲ್ಲಿಂದಲೇ ಮೊಬೈಲ್‌ಗಳಲ್ಲಿ ಟಿಕೆಟ್ ಕಾಯ್ದಿರಿಸಲು ಆರಂಭಿಸಿದ್ದರು.

ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಮುಂಗಡ ಕಾಯ್ದಿರಿಸುವುದನ್ನು ಇನ್ನಷ್ಟು ಸುಲಭಗೊಳಿಸಲು ಈ ವರ್ಷ ಜೂನ್‌ನಲ್ಲಿ 'ಅವತಾರ್-4.0' ಪರಿಚಯಿಸಿದ್ದರು. ಈ ಪ್ಲಾಟ್‌ಫಾರ್ಮ್ ಅನ್ನು ಅಮ್ನೆಕ್ಸ್ ಇನ್ಫೋ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮ್ಯಾಂಟಿಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಟೆಕ್-ಕನ್ಸೋರ್ಟಿಯಂ ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿದೆ.

ಸಣ್ಣ ಅಡಚಣೆಯೂ ಇಲ್ಲ: ನಿತ್ಯ ಪ್ರಯಾಣಿಸುವ ಬಸ್‌ಗಳ ಜೊತೆಗೆ ಹಬ್ಬದ ಸಮಯದಲ್ಲಿ ಹೆಚ್ಚುವರಿಯಾಗಿ 2000 ಬಸ್‌ಗಳನ್ನು ರಸ್ತೆಗೆ ಇಳಿಸಲಾಗಿತ್ತು. ಯಾವುದೇ ಸಣ್ಣ ಅಡಚಣೆಯೂ ಇಲ್ಲದಂತೆ ಯಶಸ್ವಿಯಾಗಿ ಬಸ್‌ಗಳು ಕಾರ್ಯಾಚರಿಸಿವೆ. ಬೆಂಗಳೂರು, ದಾವಣಗೆರೆ, ಮೈಸೂರು, ಹುಬ್ಬಳ್ಳಿ, ತಿರುಪತಿ, ಶಿವಮೊಗ್ಗ, ಕಲಬುರಗಿ, ಬೆಳಗಾವಿ, ಕುಕ್ಕೆ ಸುಬ್ರಹ್ಮಣ್ಯ, ಹೊಸಪೇಟೆ, ಮಂಗಳೂರು, ಬಳ್ಳಾರಿ, ವಿಜಯಪುರ, ಹಾಸನ, ಚಿತ್ರದುರ್ಗ, ಧರ್ಮಸ್ಥಳ, ಹೈದರಾಬಾದ್, ಚಿಕ್ಕಮಗಳೂರು, ಕೊಯಮತ್ತೂರುಗಳಲ್ಲಿ ಮುಂಗಡ ಕಾಯ್ದಿರಿಸಿಕೊಂಡವರ ಸಂಖ್ಯೆ ಅಧಿಕವಾಗಿತ್ತು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಎಲ್ಲರೂ ದೀಪಾವಳಿ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಿದ್ದರೆ ನಮ್ಮ ನೌಕರರು ಹಬ್ಬಕ್ಕೂ ರಜೆ ಮಾಡದೇ ಪ್ರಯಾಣಿಕರನ್ನು ತಮ್ಮ ಗಮ್ಯಕ್ಕೆ ತಲುಪಿಸುವ ಕೆಲಸ ಮಾಡಿದ್ದಾರೆ. ಚಾಲಕರು, ನಿರ್ವಾಹಕರು ಸೇರಿದಂತೆ ನಮ್ಮ ಸಿಬ್ಬಂದಿಯ ಕರ್ತವ್ಯ ಪ್ರಜ್ಞೆಯಿಂದಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ವಿವರಿಸಿದರು.

ಅಂಕಿ ಅಂಶಗಳು

67,033 ಅಕ್ಟೋಬರ್ 30ರಂದು ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರ ಸಂಖ್ಯೆ

₹4.63 ಕೋಟಿ ಅದರಿಂದ ಬಂದ ವರಮಾನ

85,462 ನ.3ರಂದು ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರ ಸಂಖ್ಯೆ

₹5.58 ಕೋಟಿ ಅಂದು ಕೆಎಸ್‌ಆರ್‌ಟಿಸಿಗೆ ಬಂದ ವರಮಾನ

46.6% ಶಕ್ತಿ ಯೋಜನೆಯಡಿ ಪ್ರಯಾಣಿಸಿದ ಮಹಿಳೆಯರ ಪ್ರಮಾಣ



ಐರಾವತ ಕ್ಲಬ್ ಕ್ಲಾಸ್ 2.0 ಸಹಿತ ಅನೇಕ ಹೊಸ ಬಸ್‌ಗಳನ್ನು ಪರಿಚಯಿಸಲಾಗಿದೆ. ಹಾಗಾಗಿ ಜನರು ದೀರ್ಘ ಪ್ರಯಾಣಕ್ಕೆ ಕೆಎಸ್‌ಆರ್‌ಟಿಯ ಬಸ್‌ಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ



ಪ್ರಯಾಣಿಕರು ಬಯಸುವ ಸೌಲಭ್ಯಗಳನ್ನು ಕೆಎಸ್‌ಆರ್‌ಟಿಸಿ ಒದಗಿಸುತ್ತಾ ಬಂದಿದೆ. ಅದಕ್ಕೆ ಸರಿಯಾಗಿ ಜನರೂ ಸಂಸ್ಥೆಯ ಮೇಲೆ ನಂಬಿಕೆ ಇಟ್ಟಿದ್ದಾರೆ

ವಿ. ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

ಮಕ್ಕಳ ಅಸಹಜ ಸಾವು: ಕ್ರಮಕ್ಕೆ ಎಐಎಂಎಸ್‌ಎಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಮಕ್ಕಳ ಅಸಹಜ ಸಾವುಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದು ಹಾಗೂ ಈಗಾಗಲೇ ಸಂಭವಿಸಿದ ಮಕ್ಕಳ ಅಸಹಜ ಸಾವುಗಳ ತನಿಖೆಗೆ ಒತ್ತಾಯಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಸದಸ್ಯರು ಸೋಮವಾರ ನಗರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

'ರಾಜ್ಯದಲ್ಲಿ ಮೂರು ವರ್ಷಗಳಲ್ಲಿ 5,880 ಮಕ್ಕಳು ಅಸಹಜವಾಗಿ ಮೃತಪಟ್ಟಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಬೆಂಗಳೂರು ನಗರದಲ್ಲೇ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಬೆಳಗಾವಿ ಜಿಲ್ಲಾ ಆಸ್ಪತ್ರೆಯ ಶಿಶುಗಳ ಆರೈಕೆ ವಿಭಾಗಕ್ಕೆ ಆಮ್ಲಜನಕ ಪೂರೈಕೆಯಾಗದೇ ಆರು ತಿಂಗಳಲ್ಲಿ 111 ನವಜಾತು ಶಿಶುಗಳು ಮೃತಪಟ್ಟಿವೆ. ಇದು ನಮ್ಮ ಹದಗೆಟ್ಟ ಆರೋಗ್ಯ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ' ಎಂದು ಮನವಿಯಲ್ಲಿ ದೂರಿದ್ದಾರೆ.

'ಬೆಳಗಾವಿಯ ಪ್ರಕರಣದ ಬಗ್ಗೆ ತಕ್ಷಣವೇ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳ ಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯಕ್ಕೆ ಅನುಗುಣವಾಗಿ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ನೇಮಕ ಮಾಡಬೇಕು. ಸಮರ್ಪಕವಾಗಿ ಮೂಲ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾಡಳಿತ ಕಚೇರಿಯ ಅಧಿಕಾರಿ ಪ್ರಶಾಂತ್ ಖಾನಗೌಡ ಪಾಟೀಲ ಅವರ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಲಾಯಿತು.

ಏಕಬಳಕೆ ಪ್ಲಾಸ್ಟಿಕ್: ₹1.40 ಲಕ್ಷ ದಂಡ

ಬಟ್ಟೆ ಬ್ಯಾಗ್ ಬಳಸುವಂತೆ ನಾಗರಿಕರಿಗೆ ಬಿಎಸ್‌ಡಬ್ಲ್ಯುಎಂಎಲ್‌ನಿಂದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಂದು ಗೋದಾಮು ಹಾಗೂ 12 ಮಳಿಗೆಗಳ ಮೇಲೆ ದಾಳಿ ನಡೆಸಿರುವ ಬಿಬಿಎಂಪಿ ಸಿಬ್ಬಂದಿ, 2,200 ಕೆ.ಜಿ ಏಕ ಬಳಕೆಯ ಪ್ಲಾಸ್ಟಿಕ್ ವಶಪಡಿಸಿಕೊಂಡು ₹1.40 ಲಕ್ಷ ದಂಡ ವಿಧಿಸಿದ್ದಾರೆ.

ಪ್ಲಾಸ್ಟಿಕ್ ಬಳಕೆ ಮಾಡುವ ಗೋದಾಮು ಹಾಗೂ ಮಳಿಗೆಗಳ ಮೇಲೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಕಬಾಡೆ ನೇತೃತ್ವದಲ್ಲಿ ಅಧಿಕಾರಿಗಳು ಪದ್ಮನಾಭನಗರ ವ್ಯಾಪ್ತಿಯಲ್ಲಿ ರಾಜಲಕ್ಷ್ಮೀ ಪ್ಯಾಕೇಜಿಂಗ್ ಗೋದಾಮು ಪರಿಶೀಲಿಸಿ, ಗಿಫ್ಟ್ ಪ್ಯಾಕಿಂಗ್ ರ‍್ಯಾಪರ್, ಹ್ಯಾಂಡ್ ಕವರ್, ಪ್ಲಾಸ್ಟಿಕ್ ಗ್ಲಾಸ್, ಸಿಲ್ವರ್ ಲೇಪಿತ ಪ್ಲೇಟ್, ಸಿಲ್ವರ್ ಕವರ್ ಮತ್ತು ಪ್ಲಾಸ್ಟಿಕ್ ರೋಲ್ ಸೇರಿದಂತೆ ಇನ್ನಿತರೆ 600 ಕೆ.ಜಿ ಪ್ಲಾಸ್ಟಿಕ್ ಅನ್ನು ವಶಪಡಿಸಿಕೊಂಡು ₹50 ಸಾವಿರ ದಂಡ ವಿಧಿಸಿದರು.



ಏಕ ಬಳಕೆ ಪ್ಲಾಸ್ಟಿಕ್ ದಾಸ್ತಾನು ಹೊಂದಿದ್ದ ಮಳಿಗೆಗಳ ಮಾಲೀಕರಿಗೆ ಬಿಎಸ್‌ಡಬ್ಲ್ಯುಎಂಎಲ್ ಸಿಬ್ಬಂದಿ ದಂಡ ವಿಧಿಸಿ, ರಸೀದಿ ನೀಡಿದರು

ಕೆ.ಆರ್.ಮಾರುಕಟ್ಟೆ ಮತ್ತು ಅವೆನ್ಯೂ ರಸ್ತೆಯಲ್ಲಿರುವ ಲಿಯೋ ಪ್ಯಾಕಿಂಗ್, ಮನು ಮಾರ್ಕೆಟಿಂಗ್, ಪವನ್ ಪ್ಯಾಕೇಜಿಂಗ್, ಕೇವ ರಾಮ ಪ್ಯಾಕೇಜಿಂಗ್, ಲಕ್ಷ್ಮಿ ಮಾರ್ಕೆಟಿಂಗ್, ಎಸ್.ಎಂ ಜೈನ್ ಪ್ಯಾಕೇಜಿಂಗ್, ಮಹಾವೀರ್ ಪ್ಯಾಕೇಜಿಂಗ್, ಲಬ್ದಿ ಪ್ಯಾಕೇಜಿಂಗ್, ಬಾಲಾಜಿ ಪ್ಲಾಸ್ಟಿಕ್, ಕೃಷ್ಣ ಪಾಲಿಮರ್, ಪರಾಸ್ ಪಾಲಿಮರ್ ವ್ಯಾಪಾರ ಮಳಿಗೆಗಳಿಂದ 1,500 ಕೆ.ಜಿ ಪ್ಲಾಸ್ಟಿಕ್ ಅನ್ನು ವಶಪಡಿಸಿಕೊಂಡು ₹800 ದಂಡ ವಿಧಿಸಲಾಯಿತು.

ಮೈಸೂರು ರಸ್ತೆಯಲ್ಲಿ ಮಳಿಗೆಯಿಂದ 100 ಕೆ.ಜಿ ಪ್ಲಾಸ್ಟಿಕ್ ವಶಪಡಿಸಿಕೊಂಡು ₹10 ಸಾವಿರ ದಂಡ ವಿಧಿಸಲಾಗಿದೆ. ಏಕಬಳಕೆ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸದಂತೆ ಪಾಲಿಕೆ ಹಾಗೂ ಬಿಎಸ್‌ಡಬ್ಲ್ಯುಎಂಎಲ್‌ನಿಂದ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ಮೇಲ್ವಿಚಾರಕರು ಹಾಗೂ ಮಾರ್ಷಲ್‌ಗಳ ತಂಡವು ಮಳಿಗೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಏಕ ಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು ದಂಡ ವಿಧಿಸಲಾಗುತ್ತಿದೆ ಎಂದು ಬಸವರಾಜ ಕಬಾಡೆ ತಿಳಿಸಿದರು.

32 ಮಳಿಗೆಗಳಿಗೆ ಬೀಗಮುದ್ರೆ: ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಯಶವಂತಪುರ ಆರ್‌ಟಿಒ ರಸ್ತೆಯಲ್ಲಿರುವ ಮಾರುಕಟ್ಟೆ ಪ್ರದೇಶದಲ್ಲಿರುವ 32 ಮಳಿಗೆಗಳಿಗೆ ಬಿಬಿಎಂಪಿ ಸಿಬ್ಬಂದಿ ಸೋಮವಾರ ಬೀಗಮುದ್ರೆ ಹಾಕಿದರು.

ಮೊಹಮ್ಮದ್ ಷರೀಫ್ ಎಜುಕೇಷನ್ ಟ್ರಸ್ಟ್ ಸಂಸ್ಥೆಗೆ ಸೇರಿದ ಸ್ವತ್ತುಗಳಿಗೆ (32 ವಸತಿಯೇತರ ಮಳಿಗೆಗಳು) ಬೀಗಮುದ್ರೆ ಹಾಕಲಾಗಿದೆ. ಈ ಸದರಿ ಸ್ವತ್ತುಗಳಿಗೆ ಸ್ವಯಂ ಘೋಷಣಾ ಆಸ್ತಿತೆರಿಗೆ ಪದ್ಧತಿ ಅಡಿಯಲ್ಲಿ ಘೋಷಿಸಿಕೊಂಡಿದ್ದ ಸ್ವತ್ತಿನ ವಿವರಗಳನ್ನು ಪರಿಶೀಲಿಸಿ ವ್ಯತ್ಯಾಸ ಕಂಡುಬಂದ ಕಾರಣ 2016-17ರಿಂದ 2023-24 ಸಾಲುಗಳಿಗೆ ಆಸ್ತಿತೆರಿಗೆ ಪರಿಷ್ಕರಿಸಿ ಜನವರಿ 2024ರಲ್ಲಿ ನೋಟಿಸ್ ನೀಡಲಾಗಿತ್ತು. ಒಟ್ಟು ₹1.51 ಕೋಟಿ ಪಾವತಿಸಬೇಕಿದೆ ಎಂದು ಮಾಹಿತಿ ನೀಡಿದ್ದಾರೆ.

ಚಿನ್ನಾಭರಣ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಮನೆ ಹಾಗೂ ಅಂಗಡಿಗಳಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿ ಆಗುತ್ತಿದ್ದ ಕಳ್ಳನನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ರಾಮು(37) ಬಂಧಿತ ಆರೋಪಿ. ಆರೋಪಿಯಿಂದ ₹8 ಲಕ್ಷ ಮೌಲ್ಯದ 103 ಗ್ರಾಂ ಚಿನ್ನಾಭರಣ, ₹10 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಿನ್ನಿಮಿಲ್‌ನ ಪಾರ್ಕ್‌ವೆಸ್ಟ್ ಅಪಾರ್ಟ್‌ಮೆಂಟ್‌ನ ನಿವಾಸಿ ರಿತೇಶ್ ಬಗರೇಚ ಅವರಿಗೆ ಸೇರಿದ ಅಂಗಡಿ ಕಲಾಸಿಪಾಳ್ಯ ಎಂಟಿಐ ರಸ್ತೆಯಲ್ಲಿ ಇದೆ. ಮಾಲೀಕರು ಇತ್ತೀಚೆಗೆ ಮಧ್ಯಾಹ್ನದ ವೇಳೆ ಅಂಗಡಿಗೆ ಬೀಗ ಹಾಕಿ ವಿಶ್ರಾಂತಿಗಾಗಿ ಮನೆಗೆ ತೆರಳಿದ್ದರು. ಅದೇ ವೇಳೆ ಆರೋಪಿ ಶೆಟರ್ ಅನ್ನು ಒಡೆದು ನಗದು ಕಳವು ಮಾಡಿ ಪರಾರಿಯಾಗಿದ್ದ. ಈ ಸಂಬಂಧ ದೂರು ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ಬಂಧನದಿಂದ ಕಲಾಸಿಪಾಳ್ಯದಲ್ಲಿ ದಾಖಲಾದ ಐದು ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಿದರು.

ಡಿಜಿಟಲ್ ದಿಗ್ಬಂಧನ ಹಾಕಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಐ ಅಧಿಕಾರಿಯೆಂದು ಹೇಳಿಕೊಂಡು ವೃದ್ಧೆಗೆ ವಿಡಿಯೊ ಕರೆ ಮಾಡಿ ₹10.21 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ಸೆಂಟ್ರಲ್ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

76 ವರ್ಷದ ವೃದ್ಧೆ ಹಣ ಕಳೆದುಕೊಂಡಿದ್ದಾರೆ.

'ಕನ್ನಿಂಗ್‌ಹ್ಯಾಮ್ ರಸ್ತೆಯ ಜಿಪಿಒನಲ್ಲಿ ನೆಲಸಿರುವ ವೃದ್ಧೆಗೆ ವೊಡಾಫೋನ್‌ನಿಂದ ಕರೆ ಮಾಡುತ್ತಿರುವುದಾಗಿ ವ್ಯಕ್ತಿಯೊಬ್ಬ ತಿಳಿಸಿದ್ದ. ನೀವು ಅಪರಾಧ ಮಾಡಿದ್ದೀರಿ. ನಿಮ್ಮ ಫೋನ್ ಸಂಪರ್ಕ ಕಡಿತ ಮಾಡಲಾಗುವುದು ಎಂದು ಬೆದರಿಕೆ ಹಾಕಿದ್ದ. ಅಲ್ಲದೇ ಸಿಬಿಐ ಅಧಿಕಾರಿಗಳಿಗೆ ಕರೆಗಳ ವಿವರ ನೀಡುವುದಾಗಿ ಬೆದರಿಸಿದ್ದ. ಕೆಲವು ದಿನಗಳ ಬಳಿಕ ಸಿಬಿಐ ಅಧಿಕಾರಿ ಎಂದು ಹೇಳಿಕೊಂಡು ಮತ್ತೊಬ್ಬ ವ್ಯಕ್ತಿ ಕರೆ ಮಾಡಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾಗಿ ಆಗಿರುವುದಾಗಿ ವೃದ್ಧೆಗೆ ಹೆದರಿಸಿದ್ದ' ಎಂದು ಪೊಲೀಸರು ಹೇಳಿದರು.

'ವಾರಂಟ್ ಜಾರಿ ಆಗಿದ್ದು, ಬಂಧಿಸಲಾಗುವುದು. ತನಿಖೆಗೆ ಸಹಕಾರ ನೀಡಿದರೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದಕ್ಕಾಗಿ ಹಣ ವರ್ಗಾವಣೆ ಮಾಡಬೇಕು. ಅಲ್ಲದೇ ವಿಡಿಯೊ ಕರೆ ಕಡಿತ ಮಾಡದೆ ಮನೆಯ ಕೊಠಡಿಯಲ್ಲೇ ಇರಬೇಕು. ಈ ವಿಷಯವನ್ನೂ ಯಾರಿಗೂ ತಿಳಿಸಬಾರದು. ಇದರಿಂದ ಭೀತಿಗೆ ಒಳಗಾದ ವೃದ್ಧೆ, ಎರಡು ಖಾತೆಗಳಿಂದ ₹6.80 ಹಾಗೂ ₹3.41 ಲಕ್ಷ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ಮತ್ತೆ ₹2 ಲಕ್ಷ ವರ್ಗಾವಣೆ ಮಾಡುವಂತೆ ವ್ಯಕ್ತಿ ಹೇಳಿದ್ದ. ಆಗ ಅನುಮಾನಗೊಂಡ ವೃದ್ಧೆ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕರೆಗಳ ವಿವರ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಮದ್ಯ ಸೇವಿಸಿ ಅತಿ ವೇಗವಾಗಿ ವಾಹನ ಚಾಲನೆ; ಆರೋಪ

394 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅತಿ ವೇಗವಾಗಿ ಹಾಗೂ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವ ವಾಹನ ಸವಾರರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಂಚಾರ ವಿಭಾಗದ ಪೊಲೀಸರು 394 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಅ.28ರಿಂದ ನ.3ರ ತನಕ ನಗರದ 50 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆ ವೇಳೆ ಮದ್ಯ ಸೇವಿಸಿ ವಾಹನ ಚಾಲನೆ ಹಾಗೂ ಅತಿವೇಗವಾಗಿ ವಾಹನ ಚಾಲನೆ ಮಾಡುತ್ತಿರುವುದು ಪತ್ತೆಯಾಗಿದೆ. ವಿವಿಧ ಮಾದರಿಯ ಒಟ್ಟು 18,502 ವಾಹನಗಳನ್ನು ಪರಿಶೀಲನೆ ನಡೆಸಿ ಸಂಚಾರ ನಿಯಮ ಉಲ್ಲಂಘಿಸಿದ್ದ 394 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ಅತಿವೇಗವಾಗಿ ವಾಹನ ಚಲಾಯಿಸುವವರ ವಿರುದ್ಧ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 128 ಪ್ರಕರಣ ದಾಖಲು ಮಾಡಿಕೊಳ್ಳಲಾಯಿತು. ₹1.29 ಲಕ್ಷ ದಂಡ ಸಂಗ್ರಹಿಸಲಾಯಿತು.

'ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆ ಮುಂದುವರಿಸಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದರು. ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಸಂಚಾರ ಪೂರ್ವ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ, 1,196 ಮಂದಿ ಎಫ್‌ಐಆರ್ ದಾಖಲಿಸಿದ್ದಾರೆ.

ನಿರ್ಬಂಧಿತ ರಸ್ತೆಯಲ್ಲಿ ವಾಹನ ಸಂಚಾರ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದವರ ವಿರುದ್ಧ ₹5.98 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ಡಬ್ಬದಡಿ ಪಟಾಕಿ ಇಟ್ಟು, ಜೀವ ತೆಗೆದರು'

ಒಂದನೇ ಪುಟದಿಂದ..

ಆಟೊ ಕೊಡಿಸುವ ಆಮಿಷ: 'ಪಟಾಕಿ ಹಚ್ಚುವಾಗ ಡಬ್ಬದ ಮೇಲೆ ಕುಳಿತರೆ ಆಟೊ ಕೊಡಿಸುವುದಾಗಿ ಆರೋಪಿಗಳು ಆಮಿಷವೊಡ್ಡಿದ್ದರು. ಮದ್ಯದ ಅಮಲಿನಲ್ಲಿದ್ದ ಶಬರಿ ಆರೋಪಿಗಳ ಸವಾಲು ಸ್ವೀಕರಿಸಿದ್ದರು. ಬಳಿಕ ಆರೋಪಿಗಳು ಭಾರಿ ಸ್ಫೋಟದ ಪಟಾಕಿಗಳನ್ನು ತಂದು ರಸ್ತೆಯಲ್ಲಿ ಇಟ್ಟು ಅದರ ಮೇಲೆ ತಲೆಕೆಳಗಾಗಿ ಡಬ್ಬವನ್ನು ಮುಚ್ಚಿ ಅದರ ಮೇಲೆ ಶಬರಿ ಅವರನ್ನು ಕೂರಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಪಟಾಕಿಯ ಬತ್ತಿಗೆ ಬೆಂಕಿ ಹಚ್ಚಿ ಆರೋಪಿಗಳು ದೂರಕ್ಕೆ ಓಡಿದ್ದರು. ಶಬರಿ ಅವರು ಡಬ್ಬದ ಮೇಲೆಯೇ ಕುಳಿತಿದ್ದರು. ಆಗ ಪಟಾಕಿಗಳು ಸಿಡಿದು ಗಾಯಗೊಂಡಿದ್ದರು. ಸ್ಥಳೀಯರು ಶಬರಿ ಅವರನ್ನು ಆಂಬುಲೆನ್ಸ್‌ನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರು ಶನಿವಾರ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಗುರುಪ್ರಸಾದ್ ಆತ್ಮಹತ್ಯೆ ಪ್ರಕರಣ ಎಲೆಕ್ಟ್ರಾನಿಕ್ ಉಪಕರಣ ವಶ

ಪ್ರಜಾವಾಣಿ ವಾರ್ತೆ



ಗುರುಪ್ರಸಾದ್

ಬೆಂಗಳೂರು: ನಟ, ನಿರ್ದೇಶಕ ಗುರುಪ್ರಸಾದ್ ಅವರ ಸಾವಿಗೆ ನಿಖರ ಕಾರಣ ಪತ್ತೆಗಾಗಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

'ಗುರುಪ್ರಸಾದ್ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಅವರ ಎರಡನೇ ಪತ್ನಿ ಸುಮಿತ್ರಾ ದೂರು ನೀಡಿದ್ಧಾರೆ. ಅದನ್ನು ಆಧರಿಸಿ ಅಸಹಜ ಸಾವು ದಾಖಲಿಸಿಕೊಂಡಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರು, ಪ್ರಕರಣದ ಸಂಬಂಧ ಸೋಮವಾರ ಕೆಲಮಾಹಿತಿ ಕಲೆಹಾಕಿದರು.

'ಗುರುಪ್ರಸಾದ್ ಅವರು ಎಷ್ಟು ಸಾಲ ಮಾಡಿಕೊಂಡಿದ್ದರು ಎಂಬುದರ ಕುರಿತು ಮಾಹಿತಿ ಕಲೆಹಾಕಲಾಗುತ್ತಿದೆ. ಪಟ್ಟಿ ಸಿದ್ಧಪಡಿಸಿ ಸಾಲ ನೀಡಿದವರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು. ಸಾಲ ಮರು ಪಾವತಿಸುವಂತೆ ಏನಾದರೂ ಕಿರುಕುಳ ಕೊಡಲಾಗಿತ್ತೇ ಎಂಬುದರ ಬಗ್ಗೆಯೂ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

'ಗುರುಪ್ರಸಾದ್ ಅವರ ಮೃತದೇಹ ದೊರೆತ ಫ್ಲ್ಯಾಟ್ ಅನ್ನು ಪರಿಶೀಲಿಸಲಾಗಿದೆ. ಯಾವುದೇ ಮರಣಪತ್ರ ದೊರೆತಿಲ್ಲ. ಫ್ಲ್ಯಾಟ್‌ನಲ್ಲಿದ್ದ ಮೂರು ಮೊಬೈಲ್‌ಗಳು, ಎರಡು ಟ್ಯಾಬ್‌ಗಳು ಹಾಗೂ ಒಂದು ಲ್ಯಾಪ್‌ಟಾಪ್ ಜಪ್ತಿ ಮಾಡಿಕೊಳ್ಳಲಾಗಿದೆ. ಇವುಗಳಲ್ಲಿ ಚಾರ್ಜ್ ಇರಲಿಲ್ಲ. ಚಾರ್ಜ್ ಮಾಡಿ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಹೆಚ್ಚಿನ ಮಾಹಿತಿ ಕಲೆಹಾಕಲು ಜಪ್ತಿ ಮಾಡಿಕೊಂಡಿರುವ ಎಲೆಕ್ಟ್ರಾನಿಕ್ ಉಪಕರಣಗಳನ್ನೂ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗುವುದು' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು


'ಕರ್ನಾಟಕ ಮತ್ತು ಉದ್ಯೋಗ ನೀತಿ', 'ಕರ್ನಾಟಕ ಮತ್ತು ಶಿಕ್ಷಣ ವ್ಯವಸ್ಥೆ' ವಿಚಾರಗೋಷ್ಠಿ: ಕಿರಣ್ ಗಾಜನೂರು, ಶ್ರೀಪಾದ ಭಟ್, ಅಧ್ಯಕ್ಷತೆ: ಎ.ಬಿ. ರಾಮಚಂದ್ರಪ್ಪ, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

ಶುಭದಾ ಎಚ್.ಎನ್., ಅವರ 'ದೇವಿ ಕುರುಬತಿ' ಪುಸ್ತಕ ಬಿಡುಗಡೆ: ಅತಿಥಿಗಳು: ಎಚ್.ಎಂ. ರೇವಣ್ಣ, ಅಡಗೂರು ಎಚ್. ವಿಶ್ವನಾಥ್, ವಸುಧೇಂದ್ರ, ಕೆ. ನಲ್ಲತಂಬಿ, ಆಯೋಜನೆ: ಸೃಷ್ಟಿ ಪಬ್ಲಿಕೇಷನ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಸವನಗುಡಿ, ಸಂಜೆ 5.30



ವಸುಧೇಂದ್ರ

'ಸಾಹಿತ್ಯರತ್ನ' ಅನ್ನದಾನಯ್ಯ ಪುರಾಣಿಕ ಸ್ಮಾರಕ ದತ್ತಿ ಉಪನ್ಯಾಸ: 'ವಚನ ಸಾಹಿತ್ಯ ಮತ್ತು ಉಪನಿಷತ್ತುಗಳು': ಟಿ.ಎನ್. ವಾಸುದೇವ ಮೂರ್ತಿ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಚಂದ್ರಿಕಾ ಪುರಾಣಿಕ, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜಿನ ಸಭಾಂಗಣ, ಸಂಜೆ 6



ಮಲ್ಲೇಪುರಂ ಜಿ. ವೆಂಕಟೇಶ್

* * *

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ರೈಲು ಬರುವ ಹೊತ್ತಿನಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವುದು ತಪ್ಪಲಿದೆ • ಬಿಎಸ್‌ಆರ್‌ಪಿಯಿಂದಲೂ ಎಲ್‌ಸಿ ತೆರವು ಕಾಮಗಾರಿ

ನಗರದಲ್ಲಿ ತೆರವಾಗಲಿದೆ ರೈಲ್ವೆ ಕ್ರಾಸಿಂಗ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಲೆವೆಲ್ ಕ್ರಾಸ್‌ಗಳಲ್ಲಿ (ಎಲ್‌ಸಿ) ವಾಹನ ದಟ್ಟಣೆ ಉಂಟಾಗುವುದನ್ನು ತಪ್ಪಿಸಲು ನೈರುತ್ಯ ರೈಲ್ವೆ ಯೋಜನೆಯೊಂದನ್ನು ರೂಪಿಸಿದೆ. ನಗರದಲ್ಲಿ ಎಲ್‌ಸಿಗಳೇ ಇಲ್ಲದಂತೆ ಮಾಡಲು ಮುಂದಾಗಿದೆ.

ಎಲ್ಲ ಕಡೆಗಳಲ್ಲಿ ರೈಲು ಹಳಿಯ ಕೆಳಗೆ ಸೇತುವೆ (ಆರ್‌ಯುಬಿ) ಮತ್ತು ಹಳಿಯ ಮೇಲೆ ಸೇತುವೆ (ಆರ್‌ಒಬಿ) ನಿರ್ಮಿಸುವ ಯೋಜನೆ ಆರಂಭಿಸಿದೆ. ಜೊತೆಗೆ ಬಿಎಸ್‌ಆರ್‌ಪಿ ಕಾರಿಡಾರ್‌ಗಳು ಹೋಗುವಲ್ಲಿ ಹಳಿ ಎತ್ತರಿಸುವ ಯೋಜನೆಯೂ ಜಾರಿಯಲ್ಲಿದೆ.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗವು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈಗಾಗಲೇ ಆರ್‌ಯುಬಿ/ಆರ್‌ಒಬಿ ನಿರ್ಮಿಸಿ, ಏಳು ಲೆವೆಲ್ ಕ್ರಾಸಿಂಗ್‌ಗಳನ್ನು (ಎಲ್‌ಸಿ) ಮುಚ್ಚಿದೆ. ಮುಂದಿನ ಮಾರ್ಚ್ ಒಳಗೆ ಮತ್ತೆ ನಾಲ್ಕು ಕಡೆಗಳಲ್ಲಿ ನಾಲ್ಕು ಎಲ್‌ಸಿಗಳನ್ನು ತೆಗೆದು ಹಾಕಲಿದೆ. ಇದಲ್ಲದೇ ಇನ್ನೂ ಮೂರು ಎಲ್‌ಸಿಗಳನ್ನು ತೆಗೆಯುವ ಕಾಮಗಾರಿ ಮಂಜೂರಾಗಿದೆ.

ಹಳಿಯನ್ನೇ ಎತ್ತರಿಸುವ ಯೋಜನೆ: ಲೆವೆಲ್ ಕ್ರಾಸಿಂಗ್ ತಪ್ಪಿಸಲು ಆರ್‌ಯುಬಿ ಅಥವಾ ಆರ್‌ಒಬಿ ನಿರ್ಮಿಸುವ ಪದ್ಧತಿಯನ್ನು ಬಿಟ್ಟು ಹಳಿಯನ್ನೇ ಎತ್ತರಿಸಿ ಲೆವೆಲ್ ಕ್ರಾಸಿಂಗ್ ಇಲ್ಲದಂತೆ ಮಾಡುವ ಯೋಜನೆಯನ್ನು ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಅನುಷ್ಠಾನಗೊಳಿಸುತ್ತಿದೆ.

ಬೆಂಗಳೂರು ಉಪನಗರ ರೈಲ್ವೆ ಯೋಜನೆಯಲ್ಲಿ (ಬಿಎಸ್‌ಆರ್‌ಪಿ) ನಾಲ್ಕು ಕಾರಿಡಾರ್‌ಗಳಿವೆ. ಒಟ್ಟು 149 ಕಿಲೋಮೀಟರ್ ಉದ್ದದ ಈ ಯೋಜನೆಯನ್ನು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆ-ರೈಡ್) ಜಾರಿಗೆ ತರುತ್ತಿದೆ. ಅದರಲ್ಲಿ ಈಗಾಗಲೇ ಬೈಯಪ್ಪನಹಳ್ಳಿ-ಚಿಕ್ಕಬಾಣಾವರ ನಡುವೆ (ಕಾರಿಡಾರ್-2) ಕಾಮಗಾರಿ ಚಾಲ್ತಿಯಲ್ಲಿದೆ. ಈ ಕಾರಿಡಾರ್‌ನಲ್ಲಿ ಪ್ರಮುಖ ಏಳು ಲೆವೆಲ್ ಕ್ರಾಸಿಂಗ್ ತೆರವಿಗೆ ಯೋಜನೆ ರೂಪಿಸಲಾಗಿದೆ. ಅದಕ್ಕಾಗಿ ಹೆಬ್ಬಾಳ-ಬಾಣಸವಾಡಿ ನಡುವೆ 6 ಕಿಲೋಮೀಟರ್‌ನಷ್ಟು ರೈಲ್ವೆ ಹಳಿಯನ್ನು 10 ಅಡಿಯಷ್ಟು ಎತ್ತರಿಸಲಾಗುತ್ತಿದೆ.


ಕಾರಿಡಾರ್-1 ಬೆಂಗಳೂರು ನಗರ-ದೇವನಹಳ್ಳಿ ಮಾರ್ಗದಲ್ಲಿ 6, ಕಾರಿಡಾರ್-3 ಹೀಲಲಿಗೆ-ರಾಜಾನುಕುಂಟೆ ಮಾರ್ಗದಲ್ಲಿ 2 ಮತ್ತು ಕಾರಿಡಾರ್-4 ಕೆಂಗೇರಿ-ವೈಟ್‌ಫೀಲ್ಡ್ ಮಾರ್ಗದಲ್ಲಿ 11 ಸೇರಿದಂತೆ ನಾಲ್ಕು ಕಾರಿಡಾರ್‌ಗಳಲ್ಲಿ 26 ಲೆವೆಲ್ ಕ್ರಾಸಿಂಗ್‌ಗಳನ್ನು ಬಿಎಸ್‌ಆರ್‌ಪಿ ತೆಗೆದು ಹಾಕಲಿದೆ ಎಂದು ಕೆ-ರೈಡ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಮುಖ ಎಲ್‌ಸಿಗಳನ್ನು ಗುರುತಿಸಿದ್ದರೂ, ಅವುಗಳಲ್ಲದೇ ಇದೇ ಮಾರ್ಗಗಳಲ್ಲಿ ಸಣ್ಣ ಸಣ್ಣ ರಸ್ತೆಗಳ ಕ್ರಾಸಿಂಗ್ ಕೂಡ ಇವೆ. ಹಳಿ ಎತ್ತರಿಸುವುದರಿಂದ ಎಲ್ಲದಕ್ಕೂ ಪರಿಹಾರ ಸಿಗಲಿದೆ. ರಸ್ತೆಗಳು ಹಾಗೇ ಉಳಿಯಲಿದ್ದು, ರೈಲು ಮಾತ್ರ ಮೇಲಿನಿಂದ ಸಾಗಲಿದೆ. ನಾಲ್ಕು ಕಾರಿಡಾರ್‌ಗಳ ಕಾಮಗಾರಿಗಳು ಪೂರ್ಣಗೊಂಡಾಗ ಬೆಂಗಳೂರು 'ಲೆವೆಲ್ ಕ್ರಾಸಿಂಗ್‌ರಹಿತ' ನಗರವಾಗಿ ಗುರುತಿಸಿಕೊಳ್ಳಲಿದೆ.

ಆರ್‌ಒಬಿ, ಆರ್‌ಯುಬಿ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡಬೇಕಾಗುತ್ತದೆ. ಆದರೆ, ಹಳಿ ಎತ್ತರಿಸುವ ವಿಧಾನ ಅಳವಡಿಸುವಾಗ ಭೂಸ್ವಾಧೀನದ ಅಗತ್ಯವಿಲ್ಲ. ಏಕೆಂದರೆ, ಈಗಾಗಲೇ ಇರುವ ರೈಲು ಹಳಿಯ ಪಕ್ಕದಲ್ಲೇ ಕಾರಿಡಾರ್‌ಗಳು ನಿರ್ಮಾಣಗೊಳ್ಳುತ್ತಿವೆ. ಹಾಗಾಗಿ ಭೂಸ್ವಾಧೀನದ ಕಷ್ಟವೂ ತಪ್ಪಲಿದೆ. ಮೊದಲು ಬಿಎಸ್‌ಆರ್‌ಪಿ ಹಳಿಗಳನ್ನು ಎತ್ತರಿಸಿ ಅಳವಡಿಸಲಾಗುತ್ತದೆ.

ರೈಲು ಸಂಚಾರವನ್ನು ಈ ಹಳಿಗಳಿಗೆ ಬದಲಾಯಿಸಿದ ಬಳಿಕ ಈಗಾಗಲೇ ಇರುವ ಹಳಿಗಳನ್ನು ಎತ್ತರಿಸಲಾಗುತ್ತದೆ. ನಾಲ್ಕು ಪಥಗಳು ನಿರ್ಮಾಣಗೊಂಡ ಬಳಿಕವಷ್ಟೇ ಬಿಎಸ್‌ಆರ್‌ಪಿ ರೈಲು ಸಂಚಾರ ಆರಂಭಗೊಳ್ಳಲಿದೆ. ಹಾಗಾಗಿ ಹಳಿಗಳನ್ನು ಎತ್ತರಿಸುವ ಕಾಮಗಾರಿ ನಡೆಯುವ ಸಮಯದಲ್ಲಿ ರೈಲು ಸಂಚಾರಕ್ಕೆ ತೊಡಕಾಗುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಇಲ್ಲವಾಗುವ ಎಲ್‌ಸಿಗಳು: ಕೊಡಿಗೇಹಳ್ಳಿ, ಯಲಹಂಕ ಏರ್‌ಫೋರ್ಸ್ ಸ್ಟೇಷನ್ ಹಿಂಭಾಗ, ದೊಡ್ಡಜಾಲ, ಕೆಐಎಡಿಬಿ, ದೇವನಹಳ್ಳಿಯಲ್ಲಿ 2, ಬಾಣಸವಾಡಿ, ಕಾವೇರಿನಗರ, ನಾಗವಾರ, ಕನಕನಗರದಲ್ಲಿ 2, ಜ್ಞಾನಭಾರತಿ, ಆರ್.ವಿ. ಕಾಲೇಜು, ಸಿಂಗ್ರನ ಅಗ್ರಹಾರ, ಹುಸ್ಕೂರಿನಲ್ಲಿ 2, ಅಂಬೇಡ್ಕರ್ ನಗರ, ಮಾರತ್‌ಹಳ್ಳಿ, ಕಗ್ಗದಾಸಪುರ, ಜಕ್ಕೂರು, ಕೆಪಿಸಿಎಲ್ ಗ್ಯಾಸ್ ಪವರ್ ಪ್ಲಾಂಟ್, ಮುದ್ದನಹಳ್ಳಿ, ದೊಡ್ಡಬಳ್ಳಾಪುರ ರಸ್ತೆ, ರಾಜಾನುಕುಂಟೆಗಳಲ್ಲಿ ಒಟ್ಟು 26 ಎಲ್‌ಸಿಗಳನ್ನು ಬಿಎಸ್‌ಆರ್‌ಪಿ ತೆಗೆದುಹಾಕಲಿದೆ.



ರೈಲ್ವೆಯ ಒಂದು ಹಳಿಯನ್ನು ಎತ್ತರಿಸಿ ದ್ವಿಪಥ ಹಳಿಯನ್ನಾಗಿ ಮಾಡುವ ಮತ್ತು ಪಕ್ಕದಲ್ಲಿಯೇ ಉಪನಗರ ರೈಲು ಯೋಜನೆಯ ದ್ವಿಪಥ ಹಳಿ ನಿರ್ಮಿಸುವ ಯೋಜನೆಯ ನಕ್ಷೆ

185 ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿರುವ ರೈಲ್ವೆ ಕ್ರಾಸಿಂಗ್‌ಗಳು

52 ತೆರವಾಗಲಿರುವ ಒಟ್ಟು ರೈಲ್ವೆ ಕ್ರಾಸಿಂಗ್‌ಗಳು

26 ಬೆಂಗಳೂರು ಉಪನಗರ ಯೋಜನೆಯ ಕಾರಿಡಾರ್ ಸಾಗುವ ಮಾರ್ಗದಲ್ಲಿ ತೆರವುಗೊಳ್ಳಲಿರುವ ರೈಲ್ವೆ ಕ್ರಾಸಿಂಗ್‌ಗಳು

ವಾಹನದಟ್ಟಣೆ ಕಡಿಮೆ ಮಾಡಲು ರೈಲ್ವೆ ಬದ್ಧ



ರೈಲು ಬರುವ 4-5 ನಿಮಿಷ ಮೊದಲೇ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಗೇಟ್ ಹಾಕಲಾಗುತ್ತದೆ. ರೈಲು ಹೋದಮೇಲೆ ಗೇಟ್ ತೆರೆಯುತ್ತಿದ್ದಂತೆ ರಸ್ತೆಯ ಎರಡೂ ಕಡೆಗಳಿಂದ ವಾಹನಗಳು ಒಮ್ಮೆಲೇ ನುಗ್ಗಿ ದಟ್ಟಣೆ ಉಂಟಾಗುತ್ತದೆ. ಇದರಿಂದಾಗಿ ರೈಲ್ವೆ ಕ್ರಾಸಿಂಗ್ ದಾಟಲು ಮತ್ತಷ್ಟು ಸಮಯ ಬೇಕಾಗುತ್ತದೆ. ಇಂಥ ಸಮಸ್ಯೆ ತಪ್ಪಿಸಲು ಭಾರತೀಯ ರೈಲ್ವೆಯು ಎಲ್‌ಸಿ ತೆಗೆದುಹಾಕಲು ಯೋಜನೆ ರೂಪಿಸಿದೆ. ಆ ಜಾಗದಲ್ಲಿ ಆರ್‌ಒಬಿ ಅಥವಾ ಆರ್‌ಯುಬಿಗಳನ್ನು ನಿರ್ಮಿಸಲಿದೆ. ಹಲವೆಡೆ ಈ ಕಾಮಗಾರಿಗಳು ಚಾಲನೆಯಲ್ಲಿವೆ.

ತ್ರಿನೇತ್ರ ಕೆ.ಆರ್., ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ



ಬೆಂಗಳೂರಿನ ಚಿನ್ನಪ್ಪನಹಳ್ಳಿ ರೈಲ್ವೆ ಕ್ರಾಸಿಂಗ್‌ನಲ್ಲಿ ರೈಲು ಹೋದ ಬಳಿಕ ಉಂಟಾಗಿರುವ ವಾಹನ ದಟ್ಟಣೆ
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.



ಕನಕನಗರದಲ್ಲಿ ಬಿಎಸ್‌ಆರ್‌ಪಿ ಕಾರಿಡಾರ್–2 ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ರೈಲ್ವೆ ಕ್ರಾಸಿಂಗ್ ತೆರವಾಗಲಿದೆ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಜನರು ಏನಂತಾರೆ?


ಸಮಯ, ಇಂಧನ ಉಳಿತಾಯ



ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆಯುವ ಮೂಲಕ ವಾಹನಗಳು ಸರಾಗವಾಗಿ ಸಂಚರಿಸುವಂತೆ ಮಾಡುವುದರಿಂದ ಸವಾರರ ಸಮಯ ಉಳಿಯುತ್ತದೆ. ಇಂಧನವೂ ಉಳಿತಾಯವಾಗುತ್ತದೆ. ರೈಲು ಹೋದಮೇಲೆ ವಾಹನಗಳು ಸಾಗುವಾಗ ಮಾಡುವ ಹಾರ್ನ್‌ಗಳ ಸದ್ದು ತಲೆಚಿಟ್ಟು ಹಿಡಿಸುತ್ತದೆ. ಎಲ್‌ಸಿ ತೆರವಿನಿಂದ ಈ ಸಮಸ್ಯೆಯೂ ಇರುವುದಿಲ್ಲ. ಕೆ-ರೈಡ್‌ನವರು ಬಿಎಸ್‌ಆರ್‌ಪಿ ಕಾರಿಡಾರ್‌ಗಳ ಮಾರ್ಗಗಳಲ್ಲಿ ನಿರ್ಮಿಸುತ್ತಿರುವ ಹಳಿ ಎತ್ತರಿಸುವ ಯೋಜನೆಯಿಂದ ಭೂಸ್ವಾಧೀನ ಉಳಿತಾಯವಲ್ಲದೇ, ಕಾಮಗಾರಿ ವೇಳೆ ಆರು ತಿಂಗಳಿಂದ ಒಂದು ವರ್ಷದವರೆಗೆ ರಸ್ತೆ ಮುಚ್ಚುವ ಅಗತ್ಯವಿರುವುದಿಲ್ಲ. ಬ್ಲಾಕ್‌ಗಳನ್ನು ತಂದು ಕೂರಿಸುವಾಗ ಮಾತ್ರ ಸಂಚಾರ ಸ್ಥಗಿತಗೊಳಿಸಿದರೆ ಸಾಕಾಗುತ್ತದೆ.

ರಾಜ್‌ಕುಮಾರ್ ದುಗರ್
ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಸ್ಥಾಪಕ

ತಪ್ಪಲಿದೆ ಅಪಾಯ



ವಾಹನದಟ್ಟಣೆಯ ಸಾಂದ್ರತೆಗೆ ಅನುಗುಣವಾಗಿ ಲೆವೆಲ್ ಕ್ರಾಸಿಂಗ್‌ಗಳನ್ನು ಎ,ಬಿ,ಸಿ,ಡಿ,ಇ ಎಂದು ವಿಭಾಗಿಸಿ, ಅಧಿಕ ವಾಹನ ದಟ್ಟಣೆ ಉಂಟಾಗುವ ಸ್ಥಳಗಳಲ್ಲಿನ ಎಲ್‌ಸಿಗಳನ್ನು ಮೊದಲು ತೆರವುಗೊಳಿಸುತ್ತಿದ್ದಾರೆ. ಇದು ರಾಜ್ಯದಾದ್ಯಂತ ನಡೆಯುತ್ತಿದೆ. ಲೆವೆಲ್ ಕ್ರಾಸಿಂಗ್‌ಗಳಲ್ಲಿ ರೈಲು ಬರುವ ಹೊತ್ತಿಗೆ ಗೇಟ್ ಹಾಕಿದರೂ ಕೆಲವು ಕಡೆಗಳಲ್ಲಿ ಸೈಕಲ್, ಬೈಕ್ ಸವಾರರು ಗೇಟ್‌ನ ಸಂದಿಯಲ್ಲಿ ನುಗ್ಗಿ ದಾಟುತ್ತಾರೆ. ಪಾದಚಾರಿಗಳು ಕೂಡ ಇದೇ ಅಪಾಯದ ಕೆಲಸ ಮಾಡುತ್ತಾರೆ. ಎಲ್‌ಸಿ ತೆರವುಗೊಳಿಸುವುದರಿಂದ ಈ ಅಪಾಯ ತಪ್ಪಲಿದೆ. ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರ ಮೇಲೆ ಒತ್ತಡ ತಂದು ಎಲ್ಲ ಎಲ್‌ಸಿಗಳನ್ನು ತೆರವುಗೊಳಿಸುವಂತೆ ಮಾಡಬೇಕು.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ವಿಳಂಬ ಬೇಡ



ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆಯುವ ಕೆಲಸ ತ್ವರಿತಗತಿಯಲ್ಲಿ ನಡೆಯಬೇಕು. ಮಳೆ ಬಂದರೆ ಕೆಳ ಸೇತುವೆಗಳಲ್ಲಿ ನೀರು ನಿಲ್ಲುತ್ತಿದೆ. ವಾಹನ ಸಂಚಾರಕ್ಕೆ ತೊಡಕಾಗುತ್ತಿದೆ. ಇಂಥ ಸಮಸ್ಯೆಗಳನ್ನು ತಪ್ಪಿಸಲು ಹಳಿ ಎತ್ತರಿಸುವ ಯೋಜನೆ ಇದೆಯಾದರೂ ಉಪನಗರ ರೈಲು ಯೋಜನೆಯ ಕಾಮಗಾರಿಗಳು ಬಹಳ ನಿಧಾನವಾಗಿ ನಡೆಯುತ್ತಿವೆ. ಇವೆಲ್ಲ ವೇಗ ಪಡೆದುಕೊಳ್ಳಬೇಕು.

ಸೃಜನ್ ಪಿ., ಖಾಸಗಿ ಕಂಪನಿ ಉದ್ಯೋಗಿ

'ಚದುರಂಗ ಆಡಿದವರು ಮುಳುಗಿ ಹೋಗಿದ್ದಾರೆ'

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: 'ಚದುರಂಗ ಆಡಿದವರೆಲ್ಲಾ ಮುಳುಗಿ ಹೋಗಿದ್ದಾರೆ. ಜನರಿಗೆ ಏನು ಲಾಭವಾಗಿದೆ, ಯಾರ್‍ಯಾರು ಏನೇನು ಕೆಲಸ ಮಾಡಿದ್ದಾರೆ ಎನ್ನುವುದರ ಆಧಾರದಲ್ಲಿ ಜನ ಈ ಬಾರಿಯ ಚುನಾವಣೆ ತೀರ್ಮಾನ ಮಾಡಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಚನ್ನಪಟ್ಟಣ ಕ್ಷೇತ್ರಕ್ಕೆ ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್, ಸಿ.ಪಿ. ಯೋಗೇಶ್ವರ್ ಮತ್ತು ಕುಮಾರಸ್ವಾಮಿ ಏನು ಕೊಡುಗೆ ಕೊಟ್ಟಿದ್ದಾರೆ ಎನ್ನುವುದನ್ನು ಜನರು ಪಟ್ಟಿ ಮಾಡುತ್ತಾರೆ. ಅದಕ್ಕೆ ಅವರೇ ಅಂಕ ನೀಡುತ್ತಾರೆ. ಅದರ ಹೊರತಾಗಿ ಯಾವ ರಣರಂಗವೂ ಇಲ್ಲ, ಯಾವುದೂ ಇಲ್ಲ' ಎಂದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಯಕನಾದವನು ತನ್ನ ಜನರಿಗೆ ಯಾವ ರೀತಿ ಸಹಾಯ ಮಾಡುತ್ತಾನೆ. ಏನು ಅನುಕೂಲ ಕಲ್ಪಿಸಿ ಕೊಡುತ್ತಾನೆ. ಅವರ ಬದುಕನ್ನು ಯಾವ ರೀತಿ ಬದಲಾವಣೆ ಮಾಡುತ್ತಾನೆ ಎನ್ನುವುದು ಮುಖ್ಯ' ಎಂದರು.

ರಾಜಸ್ವ ಸಂಗ್ರಹ: ಎಚ್‌ಎಸ್‌ಆರ್ ಲೇಔಟ್ ಆರ್‌ಟಿಒಗೆ ಮೊದಲ ಸ್ಥಾನ

ಬೆಂಗಳೂರು: ರಾಜಸ್ವ ಸಂಗ್ರಹಣೆಯಲ್ಲಿ ಎಚ್‌ಎಸ್‌ಆರ್ ಲೇಔಟ್ ಪ್ರಾದೇಶಿಕ ಕಚೇರಿ ರಾಜ್ಯದಲ್ಲಿ ಪ್ರಥಮ ಸ್ಥಾನ ಹಾಗೂ ದೇಶದಲ್ಲಿ ಎರಡನೇ ಸ್ಥಾನ ಪಡೆದಿದೆ.

ರಾಜ್ಯ ಸರ್ಕಾರಕ್ಕೆ ಅತಿ ಹೆಚ್ಚು ರಾಜಸ್ವ ಸಂಗ್ರಹಣೆ ಮಾಡುವ ಇಲಾಖೆಗಳಲ್ಲಿ ಸಾರಿಗೆ ಇಲಾಖೆಯೂ ಒಂದಾಗಿದೆ. ಅದರ ಅಧೀನದಲ್ಲಿರುವ ಎಚ್‌ಎಸ್‌ಆರ್ ಪ್ರಾದೇಶಿಕ ಕಚೇರಿಯಲ್ಲಿ 2023-24ನೇ ಸಾಲಿನ ಆಗಸ್ಟ್‌ನಲ್ಲಿ ₹109.98 ಕೋಟಿ ಸಂಗ್ರಹಿಸಿದ್ದು, ಅತಿ ಹೆಚ್ಚಿನ ಸಂಗ್ರಹದ ದಾಖಲೆಯಾಗಿತ್ತು. ಈ ವರ್ಷ ಅಕ್ಟೋಬರ್‌ನಲ್ಲಿ ₹136 ಕೋಟಿ ಸಂಗ್ರಹಿಸುವ ಮೂಲಕ ಹಿಂದಿನ ದಾಖಲೆ ಮುರಿದಿದೆ. ದೇಶದಲ್ಲಿ ಪುಣೆ ಪ್ರಾದೇಶಿಕ ಸಾರಿಗೆ ಕಚೇರಿ ಮೊದಲ ಸ್ಥಾನದಲ್ಲಿದ್ದರೆ ಎಚ್‌ಎಸ್‌ಆರ್ ಲೇಔಟ್ ಎರಡನೇ ಸ್ಥಾನ ಪಡೆದಿದೆ.

ವಾಹನ್-4 ಮತ್ತು ಸಾರಥಿ-4 ತಂತ್ರಾಂಶದಲ್ಲಿ ಬರುವ ಆನ್‌ಲೈನ್ ಸೇವೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ಹೊಸದಾಗಿ ನೋಂದಣಿಯಾಗುವ ಲಘು ಮೋಟರು ವಾಹನ, ದ್ವಿಚಕ್ರ ವಾಹನಗಳಿಂದ ಬಂದ ಶುಲ್ಕಗಳು, ರಸ್ತೆ ತೆರಿಗೆ ಬಾಕಿ ಉಳಿಸಿ ಕೊಂಡಿರುವ ಬಸ್‌ಗಳ ಮಾಲೀಕರಿಂದ, ಸರಕು ಸಾಗಣೆ ವಾಹನಗಳಿಂದ ತೆರಿಗೆ ವಸೂಲಾತಿ, ಚಾಲನಾ ಪರವಾನಗಿ ಶುಲ್ಕಗಳು, ವಾಹನ ಪರವಾನಗಿ ಶುಲ್ಕ, ನಿಯಮ ಉಲ್ಲಂಘನೆ ಪ್ರಕರಣದಲ್ಲಿ ದಂಡ ಸಂಗ್ರಹಗಳಿಂದ ರಾಜಸ್ವ ಹೆಚ್ಚಾಗಿದೆ.



ಕರ್ನಾಟಕ ಸೀನಿಯರ್ ಎಂಜಿನಿಯರ್ಸ್ ಫೋರಂ ಹಾಗೂ ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ ಸಹಯೋಗದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ 'ಕೃಷ್ಣ ಜಲಾನಯನಕ್ಕೆ ಸಂಬಂಧಿಸಿದ ರಾಜ್ಯಗಳಿಗೆ ನೀರು ಹಂಚಿಕೆಯ ನ್ಯಾಯಾಧೀಕರಣದ ಜಲವಿವಾದ ತೀರ್ಪು–2ರ ಪರಿಣಾಮಗಳು ಮತ್ತು ಸವಾಲುಗಳ' ಬಗ್ಗೆ ಕರ್ನಾಟಕ ಸೀನಿಯರ್ ಎಂಜಿನಿಯರ್ಸ್ ಫೋರಂನ ಅಧ್ಯಕ್ಷ ಕ್ಯಾಪ್ಟನ್ ಎಸ್.ರಾಜಾರಾವ್ ಉಪನ್ಯಾಸ ನೀಡಿದರು

ಬಿಬಿಎಂಪಿ ಗುತ್ತಿಗೆದಾರರ ಸಂಘದ ಹೋರಾಟಕ್ಕೆ ಸರ್ಕಾರದ ಮನ್ನಣೆ

ಶೇ 25ರಷ್ಟು ಬಾಕಿ ಬಿಲ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸುಮಾರು ₹1,650 ಕೋಟಿ ಬಾಕಿ
- ಸೆಪ್ಟೆಂಬರ್‌ನಲ್ಲಿ ಗುತ್ತಿಗೆದಾರರಿಂದ ಪ್ರತಿಭಟನೆ
- ಡಿಸಿಎಂ ಶಿವಕುಮಾರ್ ಭರವಸೆ ಈಡೇರಿಕೆ

ಬೆಂಗಳೂರು: ಬಿಬಿಎಂಪಿ ಗುತ್ತಿಗೆದಾರರಿಗೆ ಪಾವತಿಸಿರುವ ಬಿಲ್ ಮೊತ್ತದಲ್ಲಿ ಬಾಕಿ ಉಳಿದಿರುವ ಶೇಕಡ 25ರಷ್ಟನ್ನು ಬಿಡುಗಡೆ ಮಾಡಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗದ ಅಂತಿಮ ವರದಿಯ ತೀರ್ಮಾನಕ್ಕೆ ಒಳಪಟ್ಟು, ಶೇ 100ರಷ್ಟು ಬಿಲ್ ಪಾವತಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ಸಲ್ಲಿಸಿದ್ದ ಪ್ರಸ್ತಾವಕ್ಕೆ ಸಮ್ಮತಿ ನೀಡಲಾಗಿದೆ.

ಲೋಕೋಪಯೋಗಿ, ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಇತರೆ ಮಹಾನಗರ ಪಾಲಿಕೆಗಳೂ ಸೇರಿದಂತೆ ಇತರೆ ಇಲಾಖೆಗಳಲ್ಲಿಯೂ ಕಾಮಗಾರಿಗಳ ತನಿಖೆಯನ್ನು ಆಯೋಗ ನಡೆಸುತ್ತಿದ್ದರೂ, ಶೇ 100ರಷ್ಟು ಬಿಲ್ ಪಾವತಿ ಮಾಡಲಾಗಿದೆ. ಎಲ್ಲ ಇಲಾಖೆಗಳಲ್ಲಿ ಬಿಲ್ ಪಾವತಿಯಲ್ಲಿ ಏಕರೂಪತೆ ಕಾಯ್ದುಕೊಳ್ಳಲು ಹಾಗೂ ಬಿಬಿಎಂಪಿ ಗುತ್ತಿಗೆದಾರರ ಸಂಘದ ಮನವಿಯಂತೆ ಬಿಬಿಎಂಪಿಯಲ್ಲೂ ಶೇ 100ರಷ್ಟು ಬಿಲ್ ಪಾವತಿಸಲು ಸರ್ಕಾರ ತೀರ್ಮಾನಿಸಿ ಆದೇಶಿಸಿದೆ.

ಕಾಮಗಾರಿ ಮುಗಿದ ನಂತರದ ಒಂದು ವರ್ಷ ಕಾರ್ಯದಕ್ಷತೆ ಖಾತರಿಗಾಗಿ ಶೇ 5ರಷ್ಟು ಮೊತ್ತವನ್ನು ಠೇವಣಿಯಾಗಿರಿಸಿಕೊಳ್ಳಲಾಗುತ್ತದೆ. ಈ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಿದ್ದರೆ ಅದರ ಜೊತೆಗೆ, ಆಯೋಗದ ಅಂತಿಮ ವರದಿಯಲ್ಲಿ ಯಾವುದಾದರೂ ದೋಷ ಕಂಡುಬಂದರೆ ಕ್ರಮ ಕೈಗೊಳ್ಳಲು ಶೇ 5ರಷ್ಟನ್ನು ಉಳಿಸಿಕೊಳ್ಳಬೇಕು. ಹೀಗಾಗಿ, ಕಾಮಗಾರಿ ಮೊತ್ತದಲ್ಲಿ ಶೇ 10ರಷ್ಟನ್ನು 'ಬ್ಯಾಂಕ್ ಗ್ಯಾರಂಟಿ' ಪಡೆದುಕೊಂಡು ಸಂಪೂರ್ಣ ಬಿಲ್ ಪಾವತಿಸಲು ಸೂಚಿಸಲಾಗಿದೆ.

2021ರ ಏಪ್ರಿಲ್‌ನಿಂದ ಪಾವತಿಸಲಾಗಿರುವ ಬಿಲ್‌ಗಳಲ್ಲಿ ಶೇ 25ರಷ್ಟನ್ನು ತಡೆಹಿಡಿಯಲಾಗಿದೆ. ಈ ಬಾಬ್ತಿನಲ್ಲಿ, ಸರ್ಕಾರದ ಅನುದಾನದಿಂದ ಪೂರ್ಣಗೊಳಿಸಲಾಗಿರುವ ಕಾಮಗಾರಿಗಳ ಬಿಲ್‌ಗಳಲ್ಲಿ ಸುಮಾರು ₹1 ಸಾವಿರ ಕೋಟಿ ಬಾಕಿ ಉಳಿದಿದೆ. ಬಿಬಿಎಂಪಿ ಅನುದಾನದ ಕಾಮಗಾರಿಗಳ ಬಿಲ್‌ಗಳಿಗೆ ₹650 ಕೋಟಿ ಪಾವತಿಸಬೇಕಾಗಿದೆ.

ಮನ್ನಣೆ: 'ಬಿಲ್ ಮೊತ್ತದಲ್ಲಿ ಬಾಕಿ ಉಳಿದಿರುವ ಶೇ 25ರಷ್ಟನ್ನು ಪಾವತಿಸಬೇಕು ಎಂದು ಕಾಮಗಾರಿ ಸ್ಥಗಿತಗೊಳಿಸಿ ಸೆಪ್ಟೆಂಬರ್ 2ರಂದು ಪ್ರತಿಭಟನೆ, ಸತ್ಯಾಗ್ರಹ ನಡೆಸಿದ್ದೆವು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶೀಘ್ರ ಬಿಡುಗಡೆಯ ಭರವಸೆ ನೀಡಿದ್ದರು. ಇದೀಗ ಸರ್ಕಾರದಿಂದ ಆದೇಶವಾಗಿದ್ದು, ಸಂಘದ ಎಲ್ಲ ಗುತ್ತಿಗೆದಾರರ ಪರವಾಗಿ ಡಿ.ಕೆ. ಶಿವಕುಮಾರ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

'ಇತರೆ ಇಲಾಖೆಗಳಲ್ಲಿ ಶೇ 100ರಷ್ಟು ಬಿಲ್ ಪಾವತಿ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದು, ಹೋರಾಟ ಮಾಡಲಾಗಿತ್ತು. ಇದನ್ನು ಸರ್ಕಾರ ಮನ್ನಿಸಿರುವುದು, ಆರ್ಥಿಕ ಸಂಕಷ್ಟದಲ್ಲಿದ್ದ ಗುತ್ತಿಗೆದಾರರಿಗೆ ಸಮಾಧಾನ ತಂದಿದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಚೇತನ್‌ಕುಮಾರ್ ಹಾಗೂ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿದರು.

ವಿಮಾನದಲ್ಲಿ ಇಂಟರ್‌ನೆಟ್ ಸೇವೆ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ವಾಯುಪ್ರದೇಶದಲ್ಲಿ 3,000 ಮೀಟರ್ ಎತ್ತರವನ್ನು ತಲುಪಿದ ಬಳಿಕವೂ ವಿಮಾನದಲ್ಲಿ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಲು ಅನುಮತಿ ದೊರೆತರೆ ಪ್ರಯಾಣಿಕರು ವೈ-ಫೈ ಮೂಲಕ ಇಂಟರ್‌ನೆಟ್ ಸೇವೆ ಗಳನ್ನು ಬಳಸಬಹುದು ಎಂದು ಕೇಂದ್ರ ಸರ್ಕಾರ ಸೋಮವಾರ ಸ್ಪಷ್ಟಪಡಿಸಿದೆ.

ಉಪ ನಿಯಮ-1ರಲ್ಲಿ ಉಲ್ಲೇಖಿಸಲಾದ ಭಾರತೀಯ ವಾಯುಪ್ರದೇಶದ ಕನಿಷ್ಠ ಎತ್ತರದ ಹೊರತಾಗಿಯೂ ವಿಮಾನದಲ್ಲಿ ವೈ-ಫೈ ಮೂಲಕ ಇಂಟರ್‌ನೆಟ್ ಸೇವೆಗಳು ಲಭ್ಯವಾಗುವಂತೆ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಈ ಕುರಿತು ಹೊಸದಾಗಿ ಅಧಿಸೂಚಿಸಲಾದ ನಿಯಮವನ್ನು ವಿಮಾನ ಮತ್ತು ನೌಕಾ ಸಂಪರ್ಕ (ತಿದ್ದುಪಡಿ) ನಿಯಮಗಳು-2024 ಎಂದು ಕರೆಯಲಾಗುತ್ತದೆ.

ವಿಮಾನ ಮತ್ತು ನೌಕಾ ಸಂಪರ್ಕ (ತಿದ್ದುಪಡಿ) ನಿಯಮಗಳು-2018ರ ಪ್ರಕಾರ, ಭಾರತೀಯ ವಾಯುಪ್ರದೇಶದಲ್ಲಿ ಕನಿಷ್ಠ 3,000 ಮೀಟರ್ ಎತ್ತರದಲ್ಲಿ ವಿಮಾನ ಮತ್ತು ನೌಕಾ ಸಂಪರ್ಕ ಸೇವಾ ಪೂರೈಕೆದಾರರು ಮೊಬೈಲ್ ಸಂವಹನ ಸೇವೆಗಳನ್ನು ಒದಗಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿತ್ತು. ಈಗ ಅದಕ್ಕಿಂತ ಎತ್ತರದಲ್ಲಿ ವಿಮಾನ ಹಾರಾಟ ನಡೆಸುವಾಗಲೂ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಇಂಟರ್‌ನೆಟ್ ಸೌಲಭ್ಯ ಒದಗಿಸಬಹುದಾಗಿದೆ.

ನಿಧನ ವಾರ್ತೆ

ಸಿದ್ದಣ್ಣ ಧೋತ್ರೆ



ಬೆಂಗಳೂರು: ನಗರದ ವರ್ತೂರು ಹೋಬಳಿಯ ಬಳಗೆರೆಯ ಶ್ರೀಕೃಷ್ಣ ಅಪಾರ್ಟ್‌ಮೆಂಟ್‌ನ ನಿವಾಸಿ ಸಿದ್ದಣ್ಣ ಧೋತ್ರೆ (70) ಸೋಮವಾರ ನಿಧನರಾದರು. ಇವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಪಣತ್ತೂರು ವಿದ್ಯುತ್ ಚಿತಾಗಾರದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಕಾನ್ಪುರ: ಶುಶ್ರೂಷಕಿ ಮೇಲೆ ಅತ್ಯಾಚಾರ

ಕಾನ್ಪುರ (ಪಿಟಿಐ): ಇಪ್ಪತ್ತೆರಡು ವರ್ಷ ವಯಸ್ಸಿನ ಶುಶ್ರೂಷಕಿಯ ಮೇಲೆ ಇಲ್ಲಿನ ಖಾಸಗಿ ಆಸ್ಪತ್ರೆಯ ನಿರ್ದೇಶಕ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಶುಶ್ರೂಷಕಿಗೆ ಮತ್ತು ಬರಿಸುವ ವಸ್ತು ಬೆರೆಸಿದ ತಂಪು ಪಾನೀಯ ನೀಡಿ, ಆನಂತರ ಅತ್ಯಾಚಾರ ಎಸಗಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಎಫ್‌ಐಆರ್ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಕಲ್ಯಾಣಪುರದ ಖಾಸಗಿ ಆಸ್ಪತ್ರೆಯ ನಿರ್ದೇಶಕ ಆಸ್ಪತ್ರೆಯಲ್ಲಿ ಭಾನುವಾರ ರಾತ್ರಿ ಆಯೋಜಿಸಿದ್ದ ಔತಣ ಕೂಟದಲ್ಲಿ ಶುಶ್ರೂಷಕಿ ಭಾಗಿಯಾಗಿದ್ದರು. ಆನಂತರ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವಂತೆ ಆಕೆಗೆ ನಿರ್ದೇಶಕ ಸೂಚಿಸಿದ್ದರು. ತನ್ನ ಕೋಣೆಗೆ ನಡುರಾತ್ರಿಯಲ್ಲಿ ಕರೆಸಿಕೊಂಡು ಕೃತ್ಯ ಎಸಗಿದ್ದಾರೆಂದು ಆರೋಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ಸಚಿವಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು

ರಾಜಕೀಯ ಬಿಡಲು ನಾನು ಸಿದ್ಧ, ಜೋಶಿ ಸಿದ್ಧರೇ?

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಹುಬ್ಬಳ್ಳಿ: 'ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಇದನ್ನು ಸರಿದೂಗಿಸಲು ರಾಜ್ಯಕ್ಕೆ ₹11,495 ಕೋಟಿ ವಿಶೇಷ ಅನುದಾನ ನೀಡುವಂತೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದರೂ ಕೇಂದ್ರ ಸರ್ಕಾರ ಕೊಟ್ಟಿಲ್ಲ. ಇದನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕೇಳಬೇಕಲ್ಲವೇ? ಕೇಂದ್ರ ಸರ್ಕಾರ ಅನುದಾನ ಕೊಟ್ಟಿದ್ದರೆ ನಾನು ರಾಜಕೀಯ ಕ್ಷೇತ್ರ ಬಿಡುವೆ. ಕೊಟ್ಟಿರದಿದ್ದರೆ ಜೋಶಿ ರಾಜಕೀಯ ಕ್ಷೇತ್ರ ಬಿಡುವರೇ, ರಾಜೀನಾಮೆ ಕೊಡುವರೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಇಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, '15ನೇ ಹಣಕಾಸು ಆಯೋಗವು ಕೆಲ ಶಿಫಾರಸುಗಳಡಿ ₹ 5,495 ಕೋಟಿ ವಿಶೇಷ ಅನುದಾನ, ಪೆರಿಫೆರಲ್ ರಿಂಗ್ ರಸ್ತೆಗೆ ₹3 ಸಾವಿರ ಕೋಟಿ, ಕೆರೆ ಅಭಿವೃದ್ಧಿಗೆ ₹3 ಸಾವಿರ ಕೋಟಿ ಸೇರಿ ಒಟ್ಟು ₹11,495 ಕೋಟಿ ಕೊಡಲು ಹೇಳಿತ್ತು. ಈ ಹಣ ಈವರೆಗೆ ರಾಜ್ಯಕ್ಕೆ ಬಂದಿಲ್ಲ' ಎಂದರು.

'ಈ ಅನ್ಯಾಯದ ಬಗ್ಗೆ ಬಿಜೆಪಿಯವರು ಮಾತನಾಡಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದರಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಯಾವತ್ತಾದರೂ ಮಾತನಾಡಿದ್ದಾರಾ? ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ ಎಂದರೆ, ಅದು ರಾಜಕೀಯ ಹೇಗಾಗುತ್ತದೆ? ಇದು ರಾಜಕೀಯವಲ್ಲ, ನ್ಯಾಯಕ್ಕಾಗಿ ಹೋರಾಟ. ಕೇಂದ್ರ ಸರ್ಕಾರಕ್ಕೆ ₹4.50 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ನೀಡುತ್ತೇವೆ. ಕೇವಲ ₹ 60 ಸಾವಿರ ಕೋಟಿ ಬರುತ್ತದೆ. ಇದು ಅನ್ಯಾಯವಲ್ಲವೇ' ಎಂದರು.

ಬಿಜೆಪಿ ಬಡವರ ವಿರೋಧಿ: 'ಗ್ಯಾರಂಟಿ ಯೋಜನೆಗಳ ಮೂಲಕ ಎಲ್ಲ ಜಾತಿ- ಧರ್ಮದ ಬಡವರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬುತ್ತಿದ್ದೇವೆ. ಅವರೂ ಮುಖ್ಯವಾಹಿನಿಗೆ ಬರಬೇಕು ಎಂಬುದು ನಮ್ಮ ಉದ್ದೇಶ. ಆದರೆ, ಬಿಜೆಪಿಯವರಿಗೆ ಇದು ಬೇಕಿಲ್ಲ. ಜನ ಬಡವರು ಆಗಿರಬೇಕು ಮತ್ತು ಅಸಮಾನತೆ ಇರಬೇಕು ಎಂಬ ಬಯಕೆ ಅವರದ್ದು. ಅದಕ್ಕೆ ಅವರು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಾರೆ. ಅವರ ಬಡವರ ವಿರೋಧಿಗಳು' ಎಂದರು.

ಪ್ರತಾಪ್ ಸಿಂಹ ಮಹಾನ್ ಕೋಮುವಾದಿ: 'ಸಿದ್ದರಾಮಯ್ಯ ಸಂಪೂರ್ಣ ಮುಸ್ಲಿಂ ಆಗಿದ್ದಾರೆ' ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, 'ಪ್ರತಾಪ್ ಸಿಂಹ ಮಹಾನ್ ಕೋಮುವಾದಿ. ಕೋಮುವಾದಿಗಳಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಅವರಿಗೆ ಸಂವಿಧಾನ, ಪ್ರಜಾಪ್ರಭುತ್ವದ ಬಗ್ಗೆ ಗೌರವವಿಲ್ಲ. ಕೋಮುವಾದ ಮಾಡುವುದೇ ಅವರ ಕಸುಬು. ಸಮಾಜವನ್ನು ಜಾತಿ, ಧರ್ಮದ ಹೆಸರಿನಲ್ಲಿ ಒಡೆಯುವುದೇ ಅವರ ರಾಜಕಾರಣ' ಎಂದರು.

ರಾಜಕೀಯವಲ್ಲ, ಸಿಎಂ ಸ್ಥಾನ ಬಿಡಿ: ಪ್ರಲ್ಹಾದ ಜೋಶಿ



ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ಬರಬೇಕಿದ್ದ ಎಲ್ಲ ಅನುದಾನವೂ ಬಂದಿದೆ. ಇದರ ಅಂಕಿ ಸಂಖ್ಯೆಗಳ ಸಮೇತ ಈ ಹಿಂದೆ ಹಲವಾರು ಬಾರಿ ಹೇಳಿದ್ದೇನೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

'ತೆರಿಗೆ ಪಾಲಿನ ಅನುದಾನವನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿದ್ದರೆ ರಾಜಕೀಯ ಕ್ಷೇತ್ರ ಬಿಡುವೆ. ನೀಡಿರದಿದ್ದರೆ ನೀವು (ಪ್ರಲ್ಹಾದ ಜೋಶಿ) ರಾಜಕೀಯ ಬಿಡ್ತೀರಾ, ರಾಜೀನಾಮೆ ಕೊಡ್ತಿರಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದ ಸವಾಲಿಗೆ ಪ್ರಲ್ಹಾದ ಜೋಶಿ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹೀಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

'ವಾಲ್ಮೀಕಿ ನಿಗಮ ಹಗರಣ, ಮುಡಾ ಹಗರಣ, ಭ್ರಷ್ಟಾಚಾರ, ರೈತರ ಆತ್ಮಹತ್ಯೆ, ರೈತರ ಜಮೀನು ವಕ್ಫ್‌ಗೆ, ಕಾನೂನು ಸುವ್ಯವಸ್ಥೆ ಕುಸಿ, ಹಾಲು ಪೆಟ್ರೋಲ್ ಡೀಸೆಲ್ ದರ ಏರಿಕೆ, ವಿದ್ಯುತ್ ದರ ಏರಿಕೆ, ಒಂದೇ ಎರಡೇ ನಿಮ್ಮ ಅದಕ್ಷ ಆಡಳಿತದ ಸಮಾಲೆ... ಗಮನ ಬೇರೆಡೆ ಸೆಳೆಯುವ ಹೇಳಿದ್ದ ಹೇಳೋ ಕಿಸಬಾಯಿ ದಾಸ ಅನ್ನೋ ತರಹ ಆಗಿದೆ ನಿಮ್ಮ ಆಪಾದನೆ' ಎಂದು ವ್ಯಂಗ್ಯವಾಡಿದ್ದಾರೆ.

'ನೀವು ರಾಜಕೀಯ ಬಿಡುವ ಅವಶ್ಯಕತೆಯಿಲ್ಲ. ಸದ್ಯಕ್ಕೆ ಮೊದಲು ಮುಖ್ಯಮಂತ್ರಿ ಸ್ಥಾನ ಬಿಡಿ, ನಿಷ್ಪಕ್ಷಪಾತ ತನಿಖೆಗೆ ಅನುವು ಮಾಡಿಕೊಡಿ' ಎಂದು ತಿಳಿಸಿದ್ದಾರೆ.

ನೀಲೇಶ್ವರ ಪಟಾಕಿ ಸ್ಫೋಟ ನಾಲ್ಕಕ್ಕೇರಿದ ಸಾವಿನ ಸಂಖ್ಯೆ

ಪ್ರಜಾವಾಣಿ ವಾರ್ತೆ



ಬಿಜು



ರತೀಶ್



ಶಿಬಿನ್

ನೀಲೇಶ್ವರ (ಕಾಸರಗೋಡು): ಇಲ್ಲಿನ ಅಂಞೂಟ್ಟಂಬಲಂ ವೀರರ್‌ಕಾವ್ ದೈವಸ್ಥಾನದಲ್ಲಿ ಅ.28ರ ಮಧ್ಯರಾತ್ರಿ ಸಂಭವಿಸಿದ ಪಟಾಕಿ ಸ್ಫೋಟದಲ್ಲಿ ಸಾವಿಗೀಡಾದವರ ಸಂಖ್ಯೆ ನಾಲ್ಕಕ್ಕೇರಿದೆ.

ಕಾಸರಗೋಡು ಜಿಲ್ಲೆ ಚೆರುವತ್ತೂರು ತುರ್ತಿಯ ಓರ್ಕುಳಂ ನಿವಾಸಿ ಶಿಬಿನ್ ರಾಜ್ (19), ಕರಿಂದಳಂ ಕೊಲ್ಲಂಪಾರ ಮಂಞಳಂಕೋಟ ನಿವಾಸಿ ಬಿಜು ಮತ್ತು ಕಿಣಾವೂರು ನಿವಾಸಿ ರತೀಶ್ ಭಾನುವಾರ ಸಾವಿಗೀಡಾಗಿದ್ದಾರೆ. ಈ ಮೂವರೂ ಕೋಯಿಕ್ಕೋಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಕಾಸರಗೋಡು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

ಕಣ್ಣೂರು ಬೇಬಿ ಸ್ಮಾರಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚೊಯ್ಯಂಕೋಟ ಕಿಣಾವೂರ್ ನಿವಾಸಿ ಆಟೊ ಚಾಲಕ ಸಿ.ಸಂದೀಪ್ (38) ನ.2ರಂದು ರಾತ್ರಿ ಸಾವಿಗೀಡಾಗಿದ್ದರು.

ರತೀಶ್, ಬಿಜು ಮತ್ತು ಸಂದೀಪ್ ಗೆಳೆಯರಾಗಿದ್ದರು. ಕಯ್ಯೂರಿನಲ್ಲಿ ಕ್ಷೌರಿಕ ವೃತ್ತಿ ಮಾಡುತ್ತಿದ್ದ ಅವರಿಗೆ ರತೀಶ್‌ಗೆ ನೀಲೇಶ್ವರದ ಆಹಾರ ನಿಗಮದ ಗೋಡೌನ್‌ನಲ್ಲಿ ಕೆಲಸ ಸಿಕ್ಕಿತ್ತು. ತಾಯಿ ಮತ್ತು ಇಬ್ಬರು ಸಹೋದರಿಯರು ಇದ್ದಾರೆ. ಕೊಲ್ಲಂಪಾರದಲ್ಲಿ ವ್ಯಾನ್ ಚಾಲಕರಾಗಿದ್ದ ಬಿಜು ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಶಿಬಿನ್ ರಾಜ್‌ಗೆ ತಂದೆ, ತಾಯಿ ಮತ್ತು ಸಹೋದರಿ ಇದ್ದಾರೆ.

ಐದು ದೈವಗಳು ನೆಲೆಯಾಗಿರುವ 'ಸ್ಥಾನ'ದಲ್ಲಿ ಅ.29ರಂದು ಮೂವಾಳಂಕುಳಿ ಚಾಮುಂಡಿಯ ತೆಯ್ಯಂ ನಡೆಯಬೇಕಾಗಿತ್ತು. ಇದರ ಅಂಗವಾಗಿ ಹಿಂದಿನ ರಾತ್ರಿ 'ವೆಳ್ಳಾಟ್ಟಂ' ಆರಂಭವಾಗುತ್ತಿದ್ದಂತೆ ಪಟಾಕಿ ಸಿಡಿಸಲಾಗಿತ್ತು. ಅದರ ಕಿಡಿಯೊಂದು ಚಾವಣಿ ಇಲ್ಲದ ಶೆಡ್‌ನಲ್ಲಿ ಇರಿಸಿದ್ದ ಪಟಾಕಿ ಮೇಲೆ ಬಿದ್ದಿತ್ತು. ತಕ್ಷಣ ಸ್ಫೋಟವಾಗಿತ್ತು. ಗಾಯಗೊಂಡ 158 ಮಂದಿಯನ್ನು ಮಂಗಳೂರಿನ ಮೂರು ಆಸ್ಪತ್ರೆ, ಕಾಸರಗೋಡು, ಕಾಞಂಗಾಡ್, ಕಣ್ಣೂರು ಮತ್ತು ಕೋಯಿಕ್ಕೋಡ್‌ನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಸದ್ಯ ಚಿಕಿತ್ಸೆಯಲ್ಲಿರುವ 25 ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಾಸನಾಂಬೆ ದರ್ಶನ: ದಾಖಲೆಯ ₹12.63 ಕೋಟಿ ಆದಾಯ

ಹಾಸನ: 'ಹಾಸನಾಂಬೆ ಜಾತ್ರಾ ಮಹೋತ್ಸವದ ವಿಶೇಷ ಟಿಕೆಟ್ ಮಾರಾಟ ಹಾಗೂ ಕಾಣಿಕೆಯಿಂದ ಈ ಬಾರಿ ದಾಖಲೆಯ ₹12.63 ಕೋಟಿ ಆದಾಯ ಸಂಗ್ರಹವಾಗಿದೆ' ಎಂದು ದೇವಸ್ಥಾನ ಆಡಳಿತಾಧಿಕಾರಿ ಮಾರುತಿ ತಿಳಿಸಿದರು.

ಹುಂಡಿ ಎಣಿಕೆ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, 'ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಬಂದಿದ್ದು, ಭಕ್ತರ ಸಂಖ್ಯೆಯೂ ಹೆಚ್ಚಾಗಿತ್ತು' ಎಂದರು.

'ಅ.24ರಿಂದ ನ.3ರವರೆಗೆ ನಡೆದ ಹಾಸನಾಂಬೆ ಜಾತ್ರಾ ಮಹೋತ್ಸವ ವೇಳೆ ದರ್ಶನದ ಟಿಕೆಟ್ ಹಾಗೂ ಲಾಡು ಮಾರಾಟದಿಂದ ₹9.67 ಕೋಟಿ ಸಂಗ್ರಹವಾಗಿದೆ. ಹಾಸನಾಂಬೆ ಹಾಗೂ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಇಟ್ಟಿದ್ದ 20 ಕಾಣಿಕೆ ಹುಂಡಿಯಲ್ಲಿ ₹2.55 ಕೋಟಿ ಸಂಗ್ರಹವಾಗಿದೆ. ಭಕ್ತರು ತಮ್ಮ ಕೋರಿಕೆಗಳನ್ನು ಚೀಟಿಯಲ್ಲಿ ಬರೆದು ಹುಂಡಿಗೆ ಹಾಕಿದ್ದು, ಅವುಗಳನ್ನು ಬಹಿರಂಗಪಡಿಸುವುದಿಲ್ಲ' ಎಂದು ಹೇಳಿದರು.

ಭೂ ವ್ಯಾಜ್ಯ: 981 ಮೇಲ್ಮನವಿ ವಜಾ

ಒಂದನೇ ಪುಟದಿಂದ...

'ನಮ್ಮ ಇಲಾಖೆಯಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದ ಆರು ಪ್ರಕರಣಗಳು ಬಾಕಿ ಇವೆ. ಒಂದು ಪ್ರಕರಣದಲ್ಲಿ ಕಾನೂನು ಕೋಶವು ಅಭಿಪ್ರಾಯ ನೀಡಲು ತಿರಸ್ಕರಿಸಿದೆ' ಎಂಬ ಅಂಶವನ್ನು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಹಂಚಿಕೊಂಡಿದ್ದಾರೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ, 'ತಮ್ಮ ಇಲಾಖೆಯಲ್ಲಿ 29 ಪ್ರಕರಣಗಳು ಬಾಕಿ ಇವೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಕಾರಿಯಿಂದ ಮಾಹಿತಿ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ. ತಮ್ಮ ಇಲಾಖೆಯಲ್ಲಿ 20 ಪ್ರಕರಣಗಳು ಬಾಕಿ ಇದ್ದು, ತಕ್ಷಣ ಮಾಹಿತಿ ಒದಗಿಸಲಾಗುವುದು ಎಂದು ಮುಖ್ಯಕಾರ್ಯದರ್ಶಿ ಇಂಧನ ಇಲಾಖೆಯ ಕಾರ್ಯದರ್ಶಿ ವಿವರಣೆ ನೀಡಿದ್ದಾರೆ.

ಕ್ಷೇಮ ಕುಶಲ



ಆಹಾರಸೇವನೆಗೂ ಬೇಕು ಶಿಸ್ತು

ಡಾ. ವಿಜಯಲಕ್ಷ್ಮಿ ಪಿ.

ಯಾವ ಆಹಾರವನ್ನು 'ಎಷ್ಟು', 'ಯಾವಾಗ' ಸೇವಿಸಬೇಕು ಎನ್ನುವುದನ್ನು ಸಾಮಾನ್ಯವಾಗಿ ಚರ್ಚಿಸುತ್ತೇವೆ. ಪೌಷ್ಟಿಕವಾದ ಆಹಾರವನ್ನು ಸೇವಿಸಿದ ಮಾತ್ರದಿಂದ ಪೌಷ್ಟಿಕತೆ ಉಂಟಾಗುವುದಿಲ್ಲ. ಸೇವಿಸುವ ಕ್ರಮದಲ್ಲಿ ಸೇವಿಸಿದಾಗ ಮಾತ್ರ ಸೇವಿಸಿದ ಆಹಾರವು ಸೂಕ್ತವಾದ ಪರಿಣಾಮವನ್ನು ಬೀರುತ್ತದೆ. ಹಾಗಾಗಿ ಆಹಾರಸೇವನಾ ಕ್ರಮದ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯ.

ಸೇವಿಸುವ ಆಹಾರದಲ್ಲಿರುವ ಪೌಷ್ಟಿಕಾಂಶದ ಅಳತೆಗಿಂತಲೂ, ಸೇವಿಸುವ ವ್ಯಕ್ತಿಯ ಪ್ರಕೃತಿಗೆ ಸೂಕ್ತವಾದದ್ದೋ ಅಲ್ಲವೋ ಎಂಬ ವಿವೇಚನೆ ಬಹಳ ಮುಖ್ಯ. ಎಷ್ಟೇ ಪೌಷ್ಟಿಕಾಂಶ ಇರುವ ಪದಾರ್ಥವಾದರೂ ತಯಾರಿಕಾ ಸಮಯದಲ್ಲಿ ಅದರೊಡನೆ ಬೆರೆಸುವ ಇತರೆ ಪದಾರ್ಥಗಳ ವಿವೇಚನೆ ಮತ್ತು ತಯಾರಿಕಾ ವಿಧಾನಕ್ಕೆ ಅನುಗುಣವಾಗಿ ದೇಹದ ಮೇಲಿನ ಪರಿಣಾಮವೂ ವ್ಯತ್ಯಾಸವಾಗುತ್ತದೆ.

ಮೊದಲು ಆಹಾರವನ್ನು ತಯಾರಿಸುವ ಮತ್ತು ಸೇವಿಸುವ ಪ್ರದೇಶ, ಪಾತ್ರೆಗಳು ಶುಚಿಯಾಗಿರಬೇಕು. ಅವರವರ ಪ್ರದೇಶದಲ್ಲಿ ಬೆಳೆಯುವ ಆಹಾರ, ಆಯಾ ಕಾಲದಲ್ಲಿ ಬೆಳೆಯುವ ಆಹಾರವನ್ನು ಸೇವಿಸುವುದು ಹೆಚ್ಚು ಪೌಷ್ಟಿಕತೆಯನ್ನು ನೀಡುತ್ತದೆ. ಉದಾಹರಣೆಗೆ, ಕರ್ನಾಟಕದಲ್ಲಿ ಕಡಲೆಕಾಯಿ ಎಣ್ಣೆ, ಕೇರಳದಲ್ಲಿ ಕೊಬ್ಬರಿ ಎಣ್ಣೆ, ಉತ್ತರಭಾರತದಲ್ಲಿ ಸಾಸಿವೆ ಎಣ್ಣೆ, ಹೀಗೆ. ಯಾವುದೋ ಪ್ರದೇಶದಲ್ಲಿ ಬೆಳೆದ ಹಣ್ಣು-ತರಕಾರಿಗಳನ್ನು, ಮತ್ತಾವುದೋ ಪ್ರದೇಶದಲ್ಲಿ ಮತ್ತಾವುದೋ ಕಾಲದಲ್ಲಿ ಸೇವಿಸುವುದು ಕೆಲವೊಮ್ಮೆ ಆರೋಗ್ಯಕ್ಕೆ ಮಾರಕವಾಗಲೂಬಹುದು. ಹಾಗೆಯೇ ಆಯಾ ಕಾಲದಲ್ಲಿ ಬೆಳೆದ ಹಣ್ಣು-ತರಕಾರಿಗಳು ಆಯಾ ಕಾಲದಲ್ಲಿ ಪೌಷ್ಟಿಕತೆಯನ್ನು ನೀಡುತ್ತವೆ. ನಮ್ಮ ಪ್ರತಿಯೊಂದು ಹಬ್ಬಗಳಲ್ಲಿ ತಯಾರಿಸಬೇಕಾದ ಆಹಾರಪದಾರ್ಥಗಳಿಗೆ ಹೆಚ್ಚು ಒತ್ತನ್ನು ಕೊಟ್ಟು ಆಹಾರಸೇವನೆಯ ವಿಧಿ-ನಿಷೇಧಗಳನ್ನು ತಿಳಿಸಿದ್ದಾರೆ.

ಆಹಾರಸೇವನೆಯ ಪ್ರಮಾಣವು ನಮ್ಮ ಜೀರ್ಣಶಕ್ತಿಗೆ ಅನುಗುಣವಾಗಿ ಇರಬೇಕು. ಇಂದಿನ ಆಹಾರ ಜೀರ್ಣವಾದ ನಂತರವೇ ಮತ್ತೆ ಆಹಾರವನ್ನು ಸೇವಿಸಬೇಕು. ಅಕಾಲಭೋಜನ, ಅತೀತಕಾಲ ಭೋಜನಗಳು ಮನಸ್ಸಿಗೆ ಆಪ್ತವಾಗುವ ಕಾಲದಲ್ಲಿ, ಪ್ರದೇಶದಲ್ಲಿ ಕುಳಿತು ಸೇವಿಸು ಆಹಾರವು ಪೌಷ್ಟಿಕವೇ ಆದರೂ ಸೂಕ್ತ ಪರಿಣಾವನ್ನು ಬೀರುವುದಿಲ್ಲ. ಇದರೊಡನೆ ಆಹಾರದ ಪ್ರಮಾಣವೂ ಅವರವರ ಜೀರ್ಣಶಕ್ತಿಯನ್ನು ಅನುಸರಿಸಿ ಇರಬೇಕು. ಅತಿ ಹೆಚ್ಚಾಗಿ, ಅತಿ ಅಲ್ಪ ಪ್ರಮಾಣದಲ್ಲಿ ಸೇವಿಸುವ ಆಹಾರವೂ ಸೂಕ್ತವಾದ ಪರಿಣಾಮವನ್ನು ಬೀರುವುದಿಲ್ಲ.

ಆಹಾರಸೇವನೆಯ ಸಂದರ್ಭದಲ್ಲಿಯೂ ಕೆಲವು ನಿಯಮಗಳನ್ನು ಪಾಲಿಸುವುದರಿಂದ ಆಹಾರವು ಸೂಕ್ತ ಪರಿಣಾಮವನ್ನು ಬೀರಲು ಸಾಧ್ಯವಾಗುತ್ತದೆ.

ಆಹಾರವನ್ನು ಸೇವಿಸುವಾಗ ವಿಪರೀತ ಮಾತನಾಡುವುದು, ಜೋರಾಗಿ ನಗುವುದು, ಸುಖವಾಗಿ ಕೂರದೆ, ಸೊಟ್ಟಗೆ ಕುಳಿತು ಆಹಾರ ಸೇವಿಸುವುದು ಅದು ಆಹಾರ ಅನ್ನನಾಳವನ್ನು ಪ್ರವೇಶಿಸದೆ ಶ್ವಾಸನಾಳವನ್ನು ಪ್ರವೇಶಿಸಿ ತೊಂದರೆಗೆ ಕಾರಣವಾಗುತ್ತದೆ.

ಆಹಾರವನ್ನು ಅನ್ಯಮನಸ್ಕರಾಗಿ ಸೇವಿಸಬಾರದು. ಗಮನ ಆಹಾರದ ಕಡೆಗೇ ಇರಬೇಕು. ಟಿ.ವಿ. ಮೊಬೈಲ್‌ಗಳನ್ನು ನೋಡುತ್ತಾ, ಪುಸ್ತಕವನ್ನು ಓದುತ್ತಾ ಅಥವಾ ಬೇರೇ ಬೇರೆ ವಿಚಾರಗಳನ್ನು ಚಿಂತಿಸುತ್ತಾ ಸೇವಿಸುವ ಆಹಾರವು ದೇಹದ ಮೇಲೆ ಸೂಕ್ತವಾದ ಪರಿಣಾಮವನ್ನು ಬೀರುವುದಿಲ್ಲ.

ಆಹಾರದ ಕಡೆ ಗಮನವಿರದೇ ಸೇವಿಸಿದ ಆಹಾರ ಅರೆಬಂದ ಸ್ಥಿತಿಯಲ್ಲೋ, ಸುಟ್ಟು ಕರಕಲಾದ ಸ್ಥಿತಿಯಲ್ಲೋ ಇದ್ದರೆ ಸರಿಯಾಗಿ ಜೀರ್ಣವಾಗದು. ವಿಹಿತವಲ್ಲದ ಆಹಾರ ದೇಹದಲ್ಲಿ ಅದೇ ರೂಪದಲ್ಲಿ ಶೇಖರಣೆಯಾಗುತ್ತದೆ. ಇದನ್ನೇ ಅಪಕ್ವ ಆಹಾರವೆಂದು, ಅದು ನಾನಾ ರೋಗಗಳಿಗೆ ಕಾರಣವೆಂದು ಆಯುರ್ವೇದ ತಿಳಿಸುತ್ತದೆ.

ಅತಿ ನಿಧಾನವಾಗಿಯೂ ಅತಿ ವೇಗವಾಗಿಯೂ ಆಹಾರವನ್ನು ಸೇವಿಸಬಾರದು. ಯಾವುದೋ ಕಾರ್ಯನಿಮಿತ್ತ ತಡವಾಗುವುದೆಂದು ವಾಹನವನ್ನು ಚಲಾಯಿಸುತ್ತಲೋ, ನಡೆಯುತ್ತಲೋ ಆಹಾರವನ್ನು ಸೇವಿಸಬಾರದು. ಒಂದೆಡೆ ಕುಳಿತುಕೊಂಡು, ಮನಸ್ಸಿಟ್ಟು, ರುಚಿಯನ್ನು ಗಮನಿಸಿಕೊಂಡು ಸೇವಿಸುವ ಆಹಾರವು ದೇಹಕ್ಕೆ ಬಲವರ್ಧನೆ ನೀಡುತ್ತದೆ.

ಗಮನವಿರಿಸದೇ ಕಸದ ಬುಟ್ಟಿಯೋ ಎಂಬಂತೆ ಹೊಟ್ಟೆಗೆ ತುಂಬಿಸುವ ಆಹಾರವು ಅನೇಕ ಮಾನಸಿಕ ಮತ್ತು ನರಕ್ಕೆ ಸಂಬಂಧಿಸಿದ ರೋಗಗಳ ಮೂಲವಾಗಿದೆ. ಹಾಗೆಯೇ ಅತಿ ನಿಧಾನವಾಗಿ ಆಹಾರವನ್ನು ಸೇವಿಸಿದಾಗ ಮೊದಲು ಸೇವಿಸಿದ ಆಹಾರದ ಜೀರ್ಣಕ್ರಿಯೆ ಪ್ರಾರಂಭವಾದರೂ ಆಹಾರಸೇವನೆ ಮುಂದುವರಿದರೆ, ಹೊಟ್ಟೆ ಮತ್ತು ಕರುಳಿನಲ್ಲಿ ಆಹಾರವನ್ನು ಹಿಡಿದಿಟ್ಟುಕೊಳ್ಳುವ ಅಂಗಾಗಗಳ ಕಾರ್ಯದಲ್ಲಿ ಅಡಚಣೆಯಾಗಬಹುದು. ಅವು ಸರಿಯಾಗಿ ಕಾರ್ಯ ನಿರ್ವಹಿಸದೆ, ಅತಿಸಾರ, ಮಲಬದ್ಧತೆ, ಮಲಪ್ರವೃತ್ತಿಯಾದರೂ ಸಂಪೂರ್ಣವಾಗಿ ಆಗಿಲ್ಲ ಎನ್ನುವ ಭಾವನೆ, ಹೊಟ್ಟೆ ಉಬ್ಬರ, ಅಮ್ಲಪಿತ್ತದಂಥ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಊಟ ಮಾಡುವಾಗ ಅಳುವುದು, ಸಿಟ್ಟನ್ನು ಮಾಡಿಕೊಳ್ಳುವುದು, ಅಸಹ್ಯ ಪಟ್ಟುಕೊಂಡು ಆಹಾರವನ್ನು ಸೇವಿಸುವುದು, ಆಹಿತವಾಗುವ ವಾತಾವರಣದಲ್ಲಿ, ಆಹಿತವಾದ ಜನರೊಡನೆ ಆಹಾರ ಸೇವಿಸುವುದು ಅನಾರೋಗ್ಯಕರ ಪ್ರವೃತ್ತಿ. ಇದು ರಜೋಗುಣವನ್ನು ವರ್ಧಿಸಿ, ಮನಸ್ಸಿನ ಭಾವಗಳೊಡನೆ, ಶಾರೀರಿಕ ಭಾವಗಳನ್ನೂ ವ್ಯತ್ಯಾಸಗೊಳಿಸುತ್ತದೆ. ಶರೀರಮಾನಸಿಕ ಸಮ್ಮಿಳಿತ ರೋಗಗಳನ್ನು ಉತ್ಪತ್ತಿ ಮಾಡುತ್ತದೆ. ಕೆಲವೊಮ್ಮೆ ಇಂತಹ ಪ್ರವೃತ್ತಿಗಳು, ಅಪಸ್ಮಾರ, ಚರ್ಮರೋಗದಂತಹ ಮಹಾವ್ಯಾಧಿಗಳಿಗೂ ಕಾರಣವಾಗಬಹುದು.

ಮುಖ್ಯವಾಗಿ ತನ್ನ ದೇಹಸ್ಥಿತಿಯನ್ನು ಗಮನಿಸಿಕೊಂಡು ಆಹಾರ ಸೇವಿಸಬೇಕು. ಯಾವ ಆಹಾರ ಹಿತ, ಯಾವುದು ಅಹಿತ ಎನ್ನುವುದನ್ನು ಅರಿತು ಸೇವಿಸಬೇಕು. ಯಾರದೋ ಬಲವಂತಕ್ಕಾಗಿಯಾಗಲೀ, ಯಾವುದೋ ಚಪಲಕ್ಕಾಗಿಯಾಗಲೀ ಆಹಾರವನ್ನು ಸೇವಿಸಬಾರದು. ಹಿತವಾಗಿ, ಮಿತವಾಗಿ, ಕಾಲಕ್ಕನುಗುಣವಾಗಿ ಆಹಾರವನ್ನು ಸೇವಿಸಿ ಆರೋಗ್ಯವಂತರಾಗೋಣ. ❖

ಕೆಮ್ಮು ಮತ್ತು ಗಂಟಲಿನ ಸಮಸ್ಯೆಗಳು

ಡಾ. ಕಿರಣ್ ವಿ. ಎಸ್.

ಪ್ರತಿಯೊಂದು ಋತುವಿನ ಬದಲಾವಣೆಯ ವೇಳೆಯೂ ಕೆಲವು ಆರೋಗ್ಯಸಮಸ್ಯೆಗಳು ವಾತಾವರಣದಲ್ಲಿ ಹರಡುತ್ತವೆ. ಈ ಪೈಕಿ ಅಧಿಕವಾಗಿ ಬಾಧಿಸುವುದು ಕೆಮ್ಮು ಮತ್ತು ಗಂಟಲಿನ ಕಿರಿಕಿರಿ. ಬಹುಮಟ್ಟಿಗೆ ತಂತಾನೇ ಗುಣವಾಗುವ ಈ ಸಮಸ್ಯೆಗಳು ಕೆಲವೊಮ್ಮೆ ಸಾಕಷ್ಟು ಕಾಲ ವಿಸ್ತರಿಸಿ, ಕಾಡುತ್ತವೆ. ಮನೆಮದ್ದು ಅಂತಿರಲಿ; ವೈದ್ಯರ ಮದ್ದಿಗೂ ಸೊಪ್ಪು ಹಾಕದ ಒಣಕೆಮ್ಮು ಮತ್ತು ಗಂಟಲಿನ ಕಿರಿಕಿರಿಯನ್ನು ಸರಿಸುಮಾರು ಎಲ್ಲರೂ ಅನುಭವಿಸಿರುತ್ತಾರೆ.

ಕೆಮ್ಮು ಎನ್ನುವುದು ಮೂಲತಃ ನಮ್ಮ ಗಂಟಲು ಮತ್ತು ಶ್ವಾಸನಾಳಗಳನ್ನು ಕಾಪಾಡಲು ನಿಸರ್ಗ ನೀಡಿರುವ ರಕ್ಷಣಾ ವ್ಯವಸ್ಥೆ. ಶ್ವಾಸನಾಳಗಳಿಗೆ ಅಥವಾ ಶ್ವಾಸಕೋಶಗಳಿಗೆ ಕೆಡುಕು ಮಾಡಬಲ್ಲ ಅಂಶಗಳು ಗಂಟಲನ್ನು ಪ್ರವೇಶಿಸಿದಾಗ, ಅಲ್ಲಿನ ಲೋಳೆಪದರದಲ್ಲಿ ಹರಡಿರುವ ನರಗಳು ಅಂತಹ ಅಂಶಗಳನ್ನು ಗ್ರಹಿಸಿ, ಅವು ಮುಂದೆ ಪ್ರವೇಶಿಸದಂತೆ ನಿರ್ಬಂಧಿಸಿ, ನರಮಂಡಲದ ಮೂಲಕ ಸೂಚನೆಗಳನ್ನು ಕಳಿಸಿ, ಅವನ್ನು ಹೊರಹಾಕಲು ಪ್ರಯತ್ನಿಸುತ್ತದೆ. ಈ ಸಹಜ ಪ್ರಕ್ರಿಯೆಯೇ ಕೆಮ್ಮು. ಈ ರೀತಿ ಕೆಡಕು ಮಾಡಬಲ್ಲ ಅಂಶ ಸೋಂಕುಕಾರಕ ಹನಿಗಳಾಗಿರಬಹುದು, ಕೇಡು ಮಾಡಬಲ್ಲ ರಾಸಾಯನಿಕವಿರಬಹುದು, ತೀರಾ ಬಿಸಿ ಅಥವಾ ತಣ್ಣಗಿನ ಪೇಯವಾಗಿರಬಹುದು, ಇಲ್ಲವೇ ದೂಳು ಅಥವಾ ಮಲಿನ ವಸ್ತುವಾಗಿರಬಹುದು. ಅಪಾಯಕಾರಕ ಅಥವಾ ಸಹ್ಯವಾಗದ ಅಂಶಗಳನ್ನು ಗಂಟಲಿನಿಂದ ಹೊರದೂಡುವುದು ಕೆಮ್ಮಿನ ಉದ್ದೇಶ. ನಿಃಶ್ವಾಸದ ಗಾಳಿ ಶ್ವಾಸಕೋಶಗಳಿಂದ ವೇಗವಾಗಿ ತೂರಿ ಬಂದು, ಗಂಟಲು ಹಿಡಿದಿಟ್ಟಿರುವ ಮಲಿನ ಪದಾರ್ಥಗಳನ್ನು ಶ್ಲೇಷ್ಮದ ಜೊತೆಗೆ ಕೆಮ್ಮಿನ ರೂಪದಲ್ಲಿ ಹೊರಹಾಕುತ್ತದೆ. ತೀವ್ರವಾದ ಕೆಮ್ಮಿನ ವೇಗ ಗಂಟೆಗೆ ಸುಮಾರು 75-80 ಕಿಲೋಮೀಟರ್ ಎಂದು ಅಂದಾಜು. ಆದರೆ, ಹೊರಗಿನ ವಾತಾವರಣಕ್ಕೆ ಬರುತ್ತಲೇ ಕೆಮ್ಮಿನೊಡನೆ ಬರುವ ಹನಿಗಳು ಚದುರಿಹೋಗುವುದರಿಂದ, ಅದು ಕೆಲವೇ ಮೀಟರುಗಳನ್ನು ಕೂಡ ದಾಟಲಾರದು. ವ್ಯಕ್ತಿಯಿಂದ ವ್ಯಕ್ತಿಗೆ ಆರು ಅಡಿಗಳ (ಎರಡು ಮೀಟರ್) ದೂರ ಇದ್ದರೆ ಕೆಮ್ಮಿನ ಹನಿಗಳು ಅವರನ್ನು ತಲುಪುವ ಸಾಧ್ಯತೆ ಕಡಿಮೆ. ಇದನ್ನೇ ಸುರಕ್ಷಿತ ಅಂತರ ಎಂದು ಕೋವಿಡ್-19 ಕಾಲದ ಸೋಂಕಿನ ವೇಳೆ ಎಲ್ಲರಿಗೂ ತಿಳಿಯಹೇಳಲಾಗಿತ್ತು.

ಬಹುತೇಕ ಕೆಮ್ಮು ಮತ್ತು ಗಂಟಲು ಬೇನೆಗಳಿಗೆ ನಿರ್ದಿಷ್ಟ ಚಿಕಿತ್ಸೆ ಬೇಕಾಗುವುದಿಲ್ಲ. ಸಾಕಷ್ಟು ಬಿಸಿನೀರನ್ನು ಕುಡಿಯುವುದು, ಉಪ್ಪು ನೀರಿನಲ್ಲಿ ಗಂಟಲನ್ನು ಮುಕ್ಕಳಿಸುವುದು, ಬೆಚ್ಚಗಿನ ದ್ರವಾಹಾರ ಸೇವನೆ, ಮಾತಿನಿಂದ ವಿಶ್ರಾಂತಿ, ಮಾತನಾಡುವಾಗ ದನಿಯನ್ನು ಏರಿಸದಿರುವುದು, ದೀರ್ಘ ಶ್ವಾಸ, ಮೊದಲಾದುವುಗಳು ಸಹಾಯಕ. ಇದನ್ನು ಮೀರಿಯೂ ಕೆಮ್ಮು, ಗಂಟಲಿನ ಕಿರಿಕಿರಿ ಹಾಗೆಯೇ ಉಳಿದರೆ ವೈದ್ಯರನ್ನು ಕಾಣಬೇಕು.

ಧೂಮಪಾನಿಗಳ ಗಂಟಲು ಸಾಮಾನ್ಯ ಜನರಿಗಿಂತ ಒಣದಾಗಿರುತ್ತದೆ. ಇಂತಹವರಲ್ಲಿ ಒಮ್ಮೆ ಆರಂಭವಾದ ಕೆಮ್ಮು ಬಹು ಬೇಗ ತೀವ್ರ ಸ್ವರೂಪ ಪಡೆದುಕೊಳ್ಳುತ್ತದೆ. ಧೂಮಪಾನಿಗಳು ಈ ಹಂತದಲ್ಲೂ ಎಚ್ಚೆತ್ತುಕೊಳ್ಳದೆ ಹಾಗೆಯೇ ಮುಂದುವರಿದರೆ ಕ್ಯಾನ್ಸರ್‌ಗೆ ತಿರುಗಬಹುದು. ಹೀಗಾಗಿ, ಒಮ್ಮೆ ಕೆಮ್ಮು ಬಾಧಿಸಲು ಆರಂಭಿಸಿದರೆ ಅದು 'ಧೂಮಪಾನವನ್ನು ತ್ಯಜಿಸಬೇಕಾದ ಸೂಚನೆ' ಎಂದೇ ಧೂಮಪಾನಿಗಳು ಅರಿಯಬೇಕು.

ನಗರಪ್ರದೇಶದಲ್ಲಿ ವಾಸಿಸುವ ಬಹುತೇಕ ಜನರು ವಾತಾವರಣದಲ್ಲಿನ ಮಾಲಿನ್ಯಕ್ಕೆ ತುತ್ತಾಗುತ್ತಾರೆ. ಹೀಗಾಗಿ, ಆಗಾಗ ಗಂಟಲು ಸರಿಪಡಿಸಿಕೊಳ್ಳುವಂತೆ ಬರುವ ಕೆಮ್ಮು ಸಹಜ. ಆದರೆ ಕೆಲವು ಸಮಯಗಳಲ್ಲಿ ಕೆಮ್ಮು ಹೆಚ್ಚಾಗಿ ಕಾಡಬಹುದು. ಶ್ವಾಸನಾಳದ ಮತ್ತು ಗಂಟಲಿನ ಸೋಂಕು, ಶ್ವಾಸನಾಳಗಳಿಗೆ ಸಂಬಂಧಿಸಿದ ಅಲರ್ಜಿ, ಹೊಗೆ ಹಾಗೂ ದೂಳುಯುಕ್ತ ಹವೆ, ಶ್ವಾಸಕೋಶಗಳ ಕಾಯಿಲೆ, ಹೃದಯ ವೈಫಲ್ಯ, ಮೂಗಿನ ಹಿಂಬದಿಯಿಂದ ಗಂಟಲಿಗೆ ಸುರಿಯುವ ಸ್ರವಿಕೆಗಳು, ಹೊಟ್ಟೆಯಲ್ಲಿನ ಆಮ್ಲ ಮೇಲಕ್ಕೆ ಚಿಮ್ಮಿ ಗಂಟಲನ್ನು ತಲುಪುವಿಕೆ ಮೊದಲಾದ ಸಂದರ್ಭಗಳಲ್ಲಿ ಕೆಮ್ಮು ಗಂಭೀರ ಸಮಸ್ಯೆಯಾಗಿ ಮಾರ್ಪಡುತ್ತದೆ.

ಹೆಚ್ಚಾಗಿ ಕೆಮ್ಮುತ್ತಾ ಹೋದಂತೆ ಗಂಟಲಿನ ಸೂಕ್ಷ್ಮ ಲೋಳೆಪದರಕ್ಕೆ ಗಾಸಿಯಾಗುತ್ತದೆ. ಪೆಟ್ಟಾದ ಲೋಳೆಪದರದೊಳಗೆ ಸೋಂಕುಕಾರಕ ಪರೋಪಜೀವಿಗಳು ಸುಲಭವಾಗಿ ಪ್ರವೇಶ ಗಿಟ್ಟಿಸುತ್ತವೆ. ಆಗ ಗಂಟಲಿನಲ್ಲಿ ಕೆರೆದಂತೆ ಭಾಸವಾಗುತ್ತದೆ. ಬಿಸಿಯಾದ ಅಥವಾ ಖಾರವಾದ ಪದಾರ್ಥಗಳನ್ನು ಸೇವಿಸಿದಾಗ ಉರಿಯ ಅನುಭವವಾಗಬಹುದು. ಇದು ಮುಂದುವರಿದು, ನುಂಗುವಾಗ ಗಂಟಲಿನಲ್ಲಿ ನೋವಾಗುತ್ತದೆ, ಧ್ವನಿ ಬದಲಾಗುತ್ತದೆ. ಮೂಗು ಸೋರುವಿಕೆ, ಉಸಿರುಗಟ್ಟುವುದು, ಜ್ವರ, ಚಳಿ, ಮೈ-ಕೈ ನೋವುಗಳು ಕಾಣಬಹುದು. ಶರೀರದ ರಕ್ಷಕ ವ್ಯವಸ್ಥೆ ಚೆನ್ನಾಗಿರುವವರಲ್ಲಿ ಈ ಹಂತದಲ್ಲೂ ಸೋಂಕು ತಾನಾಗಿಯೇ ನಿಗ್ರಹವಾಗುತ್ತದೆ. ಆದರೆ ರಕ್ಷಕ ವ್ಯವಸ್ಥೆ ಕ್ಷೀಣವಾಗಿರುವವರಲ್ಲಿ ಈ ಸೋಂಕು ಸಾಕಷ್ಟು ತೊಂದರೆ ನೀಡುತ್ತದೆ.

ಮಧುಮೇಹಿಗಳು, ಸಣ್ಣ ವಯಸ್ಸಿನ ಮಕ್ಕಳು, ಯಾವುದೇ ಕಾರಣಕ್ಕೆ ಸ್ಟಿರಾಯ್ಡ್ ಔಷಧಗಳನ್ನು ಸೇವಿಸುತ್ತಿರುವವರು ಮೊದಲಾದವರಲ್ಲಿ ಗಂಟಲುಬೇನೆಯನ್ನು ಉಪೇಕ್ಷಿಸುವಂತಿಲ್ಲ. ಅದಕ್ಕೆ ಸಾಧ್ಯವಾದಷ್ಟೂ ಶೀಘ್ರವಾಗಿ ವೈದ್ಯರ ಸಲಹೆ ಪಡೆದು ಚಿಕಿತ್ಸೆಯನ್ನು ಆರಂಭಿಸಬೇಕಾಗುತ್ತದೆ.

ಕೆಮ್ಮಿನ ಯಾವ ಹಂತದಲ್ಲಿ ವೈದ್ಯರನ್ನು ಕಾಣಬೇಕು? ತಾತ್ಕಾಲಿಕ ಸಮಸ್ಯೆಯಿಂದ ಆಗುವ ಬಹುತೇಕ ಕೆಮ್ಮಿನ ಪ್ರಸಂಗಗಳನ್ನು ನಮ್ಮ ದೇಹದ ರಕ್ಷಕ ವ್ಯವಸ್ಥೆಯೇ ಸರಿಪಡಿಸುತ್ತದೆ. ಅದರ ಸಾಮರ್ಥ್ಯವನ್ನು ಮೀರಿದ ಬೇನೆಗಳಿಗೆ, ದೀರ್ಘಕಾಲಿಕ ಸಮಸ್ಯೆಗಳಿಂದ ಉಂಟಾಗುವ ಕೆಮ್ಮಿಗೆ ವೈದ್ಯಕೀಯ ಸಲಹೆ ಬೇಕಾಗುತ್ತದೆ. ನಲವತ್ತೆಂಟು ಗಂಟೆಗಳಿಗಿಂತಲೂ ಹೆಚ್ಚಿನ ಕಾಲ ಹೆಚ್ಚುತ್ತಾ ಹೋಗುವ ಗಂಟಲಿನ ಅಸೌಖ್ಯ, ಒಂದೇ ಸಮನೆ ಏರುತ್ತಿರುವ ಜ್ವರ, ಧ್ವನಿಯಲ್ಲಿನ ಬದಲಾವಣೆ, ದ್ರವಪದಾರ್ಥಗಳನ್ನು ನುಂಗುವುದೂ ಕಷ್ಟವೆನಿಸುವುದು, ನಿದ್ರಿಸುವಾಗ ಜೊಲ್ಲು ಸೋರುವುದು, ಉಸಿರಾಟದ ಸಮಸ್ಯೆ, ಬಾಯಿಯನ್ನು ಅಗಲವಾಗಿ ತೆರೆಯಲು ಹಿಂಸೆಯಾಗುವುದು, ಉಗುಳಿನಲ್ಲಿ ರಕ್ತ ಕಾಣುವುದು, ಮುಖ ಅಥವಾ ಗಂಟಲಿನ ಊತ - ಇಂತಹ ಸಂದರ್ಭಗಳು ಗಂಟಲಿನ ತೀವ್ರ ಸೋಂಕನ್ನು ಸೂಚಿಸುತ್ತವೆ. ಇಂತಹ ಯಾವುದೇ ಸೂಚನೆ ಕಂಡರೂ ತಡ ಮಾಡದೆ ವೈದ್ಯರ ನೆರವನ್ನು ಪಡೆಯಬೇಕು. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–10 ವೃತ್ತಗಳು


ಪ್ರಮೇಯ 10.2

ಪ್ರಮೇಯ:= ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ.

ಸಾಧನೆ: 'O' ವೃತ್ತಕೇಂದ್ರ ಮತ್ತು 'P'ಯು ಬಾಹ್ಯಬಿಂದು. PQ ಮತ್ತು PRಗಳು ಬಾಹ್ಯಬಿಂದು Pನಿಂದ ಎಳೆದ ಸ್ಪರ್ಶಕಗಳಾಗಿವೆ. ನಾವು PQ = PR ಎಂದು ಸಾಧಿಸಬೇಕಾಗಿದೆ.

ಇದನ್ನು ಸಾಧಿಸಲು OP, OQ ಮತ್ತು ORಗಳನ್ನು ಸೇರಿಸಿರಿ. ಆಗ, ∠OQP ಮತ್ತು ∠ORPಗಳು ಲಂಬಕೋನಗಳು, ಏಕೆಂದರೆ ಈ ಕೋನಗಳು ವೃತ್ತದ ತ್ರಿಜ್ಯ ಮತ್ತು ಸ್ಪರ್ಶಕಗಳ ನಡುವಿನ ಕೋನಗಳು ಮತ್ತು ಪ್ರಮೇಯ 10.1 ರಿಂದ ಅವುಗಳು ಲಂಬಕೋನಗಳಾಗಿವೆ.

ಈಗ, ಲಂಬಕೋನ ತ್ರಿಭುಜ OQP ಮತ್ತು ORP ಗಳಲ್ಲಿ,



OQ = OR (ಒಂದೇ ವೃತ್ತದ ತ್ರಿಜ್ಯಗಳು)

OP = OP (ಸಾಮಾನ್ಯ ಬಾಹು)

ಆದ್ದರಿಂದ, ΔOQP ≅ ΔORP (ಲಂ.ವಿ.ಬಾ)

ಇದರಿಂದ, PQ = PR (ಸ.ತ್ರಿ.ಅ.ಬಾ.)

ಗಮನಿಸಿ:

1. ಈ ಪ್ರಮೇಯವನ್ನು ಪೈಥಾಗೋರಸ್ ಪ್ರಮೇಯದ ಸಹಾಯದಿಂದ ಈ ಕೆಳಗಿನಂತೆ ಸಾಧಿಸಬಹುದು.


$PQ^2=OP^2-OQ = OP^2 - OR^2 = PR^2$ ($\because OQ = OR$)

ಇದರಿಂದ, PQ = PR

2. ∠OPQ = ∠OPR ಎಂಬುದನ್ನು ಗಮನಿಸಿ ಆದ್ದರಿಂದ OP ಯು ∠QPRನ ಕೋನಾರ್ಧಕ ರೇಖೆಯಾಗಿದೆ. ಅಂದರೆ, ಎರಡು ಸ್ಪರ್ಶಕದ ನಡುವಿನ ಕೋನದ ಕೋನಾರ್ಧಕ ರೇಖೆಯ ಮೇಲೆ ವೃತ್ತದ ಕೇಂದ್ರವಿದೆ.

ಸಮಸ್ಯೆ ಮತ್ತು ಪರಿಹಾರ:

1) ಎರಡು ಏಕಕೇಂದ್ರೀಯ ವೃತ್ತಗಳಲ್ಲಿ, ದೊಡ್ಡ ವೃತ್ತದ ಜ್ಯಾವು ಚಿಕ್ಕ ವೃತ್ತವನ್ನು ಸ್ಪರ್ಶಿಸಿದರೆ, ಜ್ಯಾವು ಸ್ಪರ್ಶ ಬಿಂದುವಿನಲ್ಲಿ ಅರ್ಧಿಸಲ್ಪಡುತ್ತದೆ ಎಂದು ಸಾಧಿಸಿ.



ಪರಿಹಾರ: ನಮಗೆ 'O' ವೃತ್ತಕೇಂದ್ರವನ್ನು ಹೊಂದಿರುವ C_1 ಮತ್ತು C_2 ಎರಡು ಏಕಕೇಂದ್ರೀಯ ವೃತ್ತಗಳನ್ನು ನೀಡಿದೆ ಹಾಗೂ ದೊಡ್ಡ ವೃತ್ತ C_1 ದ ಜ್ಯಾ AB ಚಿಕ್ಕ ವೃತ್ತ C_2 ವನ್ನು P ಬಿಂದುವಿನಲ್ಲಿ ಸ್ಪರ್ಶಿಸುತ್ತದೆ. ನಾವು AP = BP ಎಂದು ಸಾಧಿಸಬೇಕಾಗಿದೆ,


ಈಗ ನಾವು OP ಯನ್ನು ಸೇರಿಸೋಣ. ಆಗ AB ಯು C_2 ಗೆ P ಬಿಂದುವಿನಲ್ಲಿ ಸ್ಪರ್ಶಕವಾಗಿದೆ ಮತ್ತು OP ಯು ಅದರ ತ್ರಿಜ್ಯವಾಗಿದೆ ಆದ್ದರಿಂದ ಪ್ರಮೇಯ 10.1 ರಿಂದ,

$$OP \perp AB$$

ಈಗ AB ಯು C1 ವೃತ್ತದ ಜ್ಯಾ ಆಗಿದೆ ಮತ್ತು $OP \perp AB$ ವೃತ್ತಕೇಂದ್ರದಿಂದ ಜ್ಯಾಗೆ ಎಳೆದ ಲಂಬವು ಜ್ಯಾ ವನ್ನು ಅರ್ಧಿಸುತ್ತದೆ. ಆದ್ದರಿಂದ OP ಯು ಜ್ಯಾ AB ಯನ್ನು ಅರ್ಧಿಸುತ್ತದೆ. ಅಂದರೆ,

$$AP = BP$$

2) 'O' ವೃತ್ತಕೇಂದ್ರವನ್ನು ಹೊಂದಿರುವ ವೃತ್ತಕ್ಕೆ ಬಾಹ್ಯಬಿಂದು T ಯಿಂದ TP ಮತ್ತು TQ ಎರಡು ಸ್ಪರ್ಶಕಗಳನ್ನು ಎಳೆದಿದೆ. ∠PTQ = 2∠OPQ ಎಂದು ಸಾಧಿಸಿರಿ.



ಪರಿಹಾರ: 'O' ವೃತ್ತಕೇಂದ್ರವಾಗಿರುವಂತೆ ಒಂದು ವೃತ್ತ, ಬಾಹ್ಯ ಬಿಂದು T, ಮತ್ತು TP ಮತ್ತು TQ ಸ್ಪರ್ಶ ಬಿಂದು P ಮತ್ತು Q ಗಳಲ್ಲಿ ಎಳೆದ ಎರಡು ಸ್ಪರ್ಶಕಗಳನ್ನು ನೀಡಿದೆ. (ಚಿತ್ರ ನೋಡಿ). ನಾವು ∠PTQ = 2∠OPQ ಎಂದು ಸಾಧಿಸಬೇಕಾಗಿದೆ.

∠PTQ = θ ಆಗಿರಲಿ.

ಈಗ ಪ್ರಮೇಯ 10.2 ರಿಂದ, TP = TQ ಆದ್ದರಿಂದ TPQ ಒಂದು ಸಮದ್ವಿಬಾಹು ತ್ರಿಭುಜವಾಗಿದೆ.

∠TPQ =∠ TQP = 1/2 (180° – θ) = 90° – 1/2 θ


ಹಾಗೆಯೇ ಪ್ರಮೇಯ 4.1 ರಿಂದ, ∠OPT = 90°

ಆದ್ದರಿಂದ∠OPQ =∠OPT–∠TPQ=90° – 90° – 12θ

= 12 θ = 12∠PTQ

ಇದರಿಂದ, ∠PTQ = 2 ∠OPQ

3) 5 cm ತ್ರಿಜ್ಯವಿರುವ ಒಂದು ವೃತ್ತದಲ್ಲಿ ಜ್ಯಾ PQ ಉದ್ದವು 8cm ಆಗಿದೆ. P ಮತ್ತು Q ಬಿಂದುವಿನಲ್ಲಿನ ಸ್ಪರ್ಶಕಗಳು T ಬಿಂದುವನಲ್ಲಿ ಸಂಧಿಸುತ್ತವೆ. (ಚಿತ್ರ ನೋಡಿ). TP ಯ ಉದ್ದವನ್ನು ಕಂಡುಹಿಡಿಯಿರಿ.



ಪರಿಹಾರ: OT ಸೇರಿಸಿ. ಅದು PQ ರೇಖೆಯನ್ನು ಬಿಂದು R ನಲ್ಲಿ ಸಂಧಿಸಲಿ. ಆಗ Δ TPQ ಒಂದು ಸಮದ್ವಿಬಾಹು ತ್ರಿಭುಜ ಮತ್ತು TO ರೇಖೆಯು∠PTQದ ಕೋನಾರ್ಧಕ ರೇಖೆಯಾಗಿದೆ ಆದ್ದರಿಂದ $OT \perp PQ$ ಮತ್ತು ಆದ್ದರಿಂದ OT ರೇಖೆಯು PQ ಅನ್ನು ಅರ್ಧಿಸುತ್ತದೆ. (ಮುಂದುವರಿಯುವುದು).

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

MOVING CHARGES AND MAGNETISM

8. Write a note on moving coil galvanometer.

Ans:- (…….Contd)

Construction – It consists of a coil wound on a non-metallic frame usually brass.


The coil is suspended between two poles of a permanent magnet which are cylindrical in shape with a movable torsion head H by a strip or wire made of phosphor bronze which as a path for the current to the coil also.

End of the wire is connected to the terminal T_2 of the galvanometer. The other end of the coil is connected to a light spring (s) which is finally connected to the terminal T_1.

The spring exerts a very small restoring torque on the coil.

A soft iron core is placed within the frame of the coil. A plane circular mirror (M) is attached on the wire or strip to note the deflection of the coil using lamp and scale arrangement. The whole system is enclosed in a non-metallic case to avoid disturbance due to air.





Theory - Torque $(\tau) = NIAB \sin\theta$

Where, B = Intensity of magnetic field

I = Current flowing through the coil

l = length of the coil

b = breadth of the coil

A = l x b = Area of the coil

N = Number of turns in the coil

When $\theta = 90^0$, Torque (τ) = NIAB

This torque is known as **deflecting torque**.

As the coil gets deflected, the spring is twisted and a restoring torque is developed in it. If k is te restoring torque per unit twist then the restoring torque for the deflection is given by

$$\tau' = k\phi$$

For the equilibrium of the coil,

Deflecting torque = Restoring torque

$$NIAB = k\phi$$

$$I = \frac{k\phi}{NAB} = G\phi \Rightarrow I \propto \phi$$

where $G = \frac{k}{NAB}$, called galvanometer cons tan t

Thus, the deflection of the coil is directly proportional to the current flowing through it.

Hence, a linear scale can be used to determine the deflection of the coil.

9. Mention some uses of galvanometer.

Ans:- Some uses of galvanometer are –

a) It is used to detect electric current in a circuit e.g., Wheatstone bridge.

b) It is converted to an ammeter by putting a low resistor across (i.e., parallel to) it.

c) It is converted to a voltmeter by putting a high resistance in series with it.

d) It is used as an ohmmeter by making special arrangements.

10. Give reason, why earth's magnetic field does not affect the working of moving coil galvanometer.

Ans:- The magnetic field provided by the magnet in which coil of the galvanometer is suspended is very strong than the Earth's magnetic field. Hence, the Earth's magnetic field does not affect the working of moving coil galvanometer.

11. What is dead beat galvanometer?

Ans:- Dead beat galvanometer is a galvanometer in which the steady deflection is obtained without the oscillations of the coil.

To make a galvanometer dead beat, the coil is wound on a metallic frame to produce dampening effect in the coil.

12. What should be the properties of the material of the suspension wire used in the galvanometer?

Ans:- The properties of the material of the suspension wire used in the galvanometer are –

(a) It should be a good conductor of electricity.

(b) Its temperature coefficient of resistance should be small.

It should have small restoring torque per unit twist.

(c) It should be non-magnetic material.

(d) It should have high tensile strength.

(Contd……)

ವಕ್ಫ್ ಗೆಜೆಟ್ ಅಧಿಸೂಚನೆ ರದ್ದು ಪಡಿಸಲು ಆಗ್ರಹ ● ಷರಿಯತ್ ಕಾನೂನು ತರಲು ಹುನ್ನಾರ ಆರೋಪ

ಕರಂದ್ಲಾಜೆ, ಯತ್ನಾಳ ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ವಿಜಯಪುರ: ವಕ್ಫ್ ಕಾಯ್ದೆ ರದ್ದುಪಡಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಬಳಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೋಮವಾರ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಕೈಗೊಂಡರು.

ಶೋಭಾ ಕರಂದ್ಲಾಜೆ ಮಾತನಾಡಿ, 'ರಾಜ್ಯದಲ್ಲಿ ವಕ್ಫ್ ಮಂಡಳಿಯಿಂದ ಜಮೀನು ಜಿಹಾದ್, ಜಮೀನು ಆತಂಕವಾದ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಷರಿಯತ್ ಕಾನೂನು ತರಲು ಸಚಿವ ಜಮೀರ್ ಅಹ್ಮದ್ ದೊಡ್ಡ ಹುನ್ನಾರ ನಡೆಸಿದ್ದಾರೆ' ಎಂದು ಆರೋಪಿಸಿದರು.

ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, 'ಚುನಾವಣೆ ಕಾರಣಕ್ಕೆ ವಕ್ಫ್ ನೀಡಿರುವ ನೋಟಿಸ್ ಅನ್ನು ರಾಜ್ಯ ಸರ್ಕಾರ ಹಿಂಪಡೆದಿದೆ. ಚುನಾವಣೆ ಬಳಿಕ ಮತ್ತೆ ತೊಂದರೆ ಆಗಲಿದೆ,ವಕ್ಫ್ ಎಂಬ ಕತ್ತಿ ರೈತರ ತಲೆ ಮೇಲೆ ತೂಗುತ್ತಿದೆ' ಎಂದರು.

ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ರಮೇಶ ಜಿಗಜಿಣಗಿ, ಮಾಜಿ ಶಾಸಕರಾದ ರಮೇಶ ಭೂಸನೂರ, ಎಸ್.ಕೆ.ಬೆಳ್ಳುಬ್ಬಿ, ಅಪ್ಪು ಪಟ್ಟಣಶೆಟ್ಟಿ, ಬಿಜೆಪಿ ಮುಖಂಡರಾದ ಉಮೇಶ ಕಾರಜೋಳ ಬೆಂಬಲ ಸೂಚಿಸಿದರು.

ನರೇಗಲ್ (ಗದಗ ಜಿಲ್ಲೆ) ವರದಿ: ಐದು ಶತಮಾನಗಳ ಇತಿಹಾಸವುಳ್ಳ ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಕೆ.ವಿ.ಬಿ.ಎಂ ಉಚಿತ ಪ್ರಸಾದ ನಿಲಯದ ಸರ್ವೆ ನಂ. 410/2ಬಿ ರ ಆಸ್ತಿಯಲ್ಲಿ ರಹಮಾನ ಶಾವಲಿ ದರ್ಗಾ ವಕ್ಫ್ ಆಸ್ತಿ ಎಂದು ನಮೂದಾಗಿರುವುದಕ್ಕೆ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನೋಟಿಸ್ ಕೊಡದೇ 2019ರಲ್ಲಿ ಪಹಣಿಯಲ್ಲಿ ವಕ್ಫ್ ಹೆಸರು ಸೇರಿಸಲಾಗಿದೆ. ಆಗ ನಮ್ಮ ಹಿರಿಯ ಗುರುಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಇನ್ನೂ ಇತ್ಯರ್ಥವಾಗಿಲ್ಲ. ನಾಡಿನಾದ್ಯಂತ ಸಮಸ್ಯೆಯಾಗಿರುವ ಕಾರಣ ಸರ್ಕಾರ ಆದಷ್ಟು ಬೇಗ ಪರಿಹಾರ ಒದಗಿಸುತ್ತದೆ ಎಂಬ ಭರವಸೆ ಇದೆ' ಎಂದು ಹಾಲಕೆರೆ ಅನ್ನದಾನೇಶ್ವರ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಸ್ವಾಮೀಜಿ 'ಪ್ರಜಾವಾಣಿ'ಗೆ ತಿಳಿಸಿದರು.

ಬಳ್ಳಾರಿ ವರದಿ: ವಕ್ಫ್ ನೋಟಿಸ್‌ನಿಂದ ಆತಂಕಗೊಂಡ ವಿಜಯಪುರ ಜಿಲ್ಲೆ ರೈತರ ಅಹವಾಲು ಆಲಿಸುವ ತಂಡದ ನೇತೃತ್ವ ವಹಿಸಿದ್ದ ಸಂಸದ ಗೋವಿಂದ ಕಾರಜೋಳ ಅವರು ವರದಿಯನ್ನು ಬಿ.ವೈ.ವಿಜಯೇಂದ್ರ ಅವರಿಗೆ ಸಲ್ಲಿಸಿದರು. 'ಜಿಲ್ಲೆ 15 ಸಾವಿರ ಎಕರೆ ಪ್ರದೇಶ ವಕ್ಫ್ ಆಸ್ತಿ ಎಂದು ಗುರುತು ಮಾಡಲಾಗಿದೆ' ಎಂದು ಕಾರಜೋಳ ತಿಳಿಸಿದರು. ವಿಜಯೇಂದ್ರ ಮಾತನಾಡಿ, 'ನಿಜಾಮರ ಕಾಲದಲ್ಲಿದ್ದ ರಜಾಕ್‌ರಂತೆ ಕಾಂಗ್ರೆಸ್ ಸರ್ಕಾರ ಬಡ ರೈತರ ಜಮೀನು ಲೂಟಿ ಮಾಡುತ್ತಿದೆ. ರಜಾಕಿಗಳು ಜನರಿಗೆ ಸುಲಿಗೆ ಮಾಡಿದಂತೆ, ರಾಜ್ಯ ಸರ್ಕಾರ ಜಮೀರ್ ಮೂಲಕ ರೈತರ ಜಮೀನು ಕಿತ್ತುಕೊಳ್ಳುತ್ತಿದೆ' ಎಂದರು.



ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಬಳಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಪ್ರಮುಖರು ಸೋಮವಾರದಿಂದ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಕೈಗೊಂಡರು ಪ್ರಜಾವಾಣಿ ಚಿತ್ರ

ನೋಟಿಸ್ ಹಿಂಪಡೆಯುವುದಾಗಿ ಮೌಖಿಕ ಆದೇಶ ನೀಡಿದರೆ ಸಾಲದು. ಕಾನೂನು ರೀತಿ ಆದೇಶ ಮಾಡಬೇಕು. ಪಹಣಿ ತಿದ್ದುಪಡಿ ಮಾಡಿ ರೈತರಿಗೆ ನೀಡಬೇಕು.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಮಾದಿಗ ಸಮುದಾಯದವರಿಗೆ ಗುಡಿ ಕೈಗಾರಿಕೆ ನಡೆಸಲು ಖಬರಸ್ಥಾನದ ಬಳಿ ಜಮೀನು ನೀಡಿತ್ತು. ಜಾಮೀಯ ಮಸೀದಿಯವರು, ಆ ಜಾಗ ತಮ್ಮದೆಂದು ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಅವಕಾಶ ನೀಡಬಾರದು

ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ

'ನಾನು, ಕರಂದ್ಲಾಜೆ ಮುಂದಿನ ನಾಯಕರು'

ವಿಜಯಪುರ: 'ನಾನು ಮತ್ತು ಶೋಭಾ ಕರಂದ್ಲಾಜೆಯೇ ಕರ್ನಾಟಕದ ಮುಂದಿನ ನಾಯಕರು' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

'ವಿಜಯಪುರದಲ್ಲಿ ಶೋಭಾ ಕರಂದ್ಲಾಜೆ, ಯತ್ನಾಳ ಒಟ್ಟಿಗೆ ಧರಣಿ ಕೂತಿರುವುದು ನಮ್ಮ ಪಕ್ಷದ ಕೆಲವರಿಗೆ ಆಶ್ಚರ್ಯ ಉಂಟುಮಾಡಿದೆ. ನಾವಿಬ್ಬರೇ ಮುಂದಿನ ನಾಯಕರು ಎಂಬುದನ್ನು ಅವರು ಅರಿಯಬೇಕು' ಎಂದು ತಮ್ಮ ವಿರೋಧಿಗಳಿಗೆ ಸಂದೇಶ ನೀಡಿದರು.

ಯತ್ನಾಳ್ ಮತ್ತು ರಮೇಶ ಜಾರಕಿಹೊಳಿ ಗುಂಪು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದ್ದು, ಅವರು ಅಧ್ಯಕ್ಷರಾಗಿರುವವರೆಗೂ ಪಕ್ಷದ ಪರ ಪ್ರಚಾರ, ಹೋರಾಟದಲ್ಲಿ ಭಾಗಿಯಾಗುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ವಿಜಯೇಂದ್ರ ಪಕ್ಷದ ಅಧ್ಯಕ್ಷರಾದ ಬಳಿಕ ಶೋಭಾ ಅವರು ಒಂದು ಬಾರಿಯೂ ಭೇಟಿ ಮಾಡಿ, ಪಕ್ಷದ ವಿಚಾರವಾಗಿ ಮಾತುಕತೆ ನಡೆಸಿಲ್ಲ. ವಿಜಯೇಂದ್ರ ಜತೆ ಅಂತರ ಕಾಯ್ದುಕೊಂಡಿರುವ ಅವರು ಸೋಮವಾರ, ಯತ್ನಾಳ ಅವರ ಜತೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ವಕ್ಫ್: ಕೇಂದ್ರ ಗೃಹ ಸಚಿವರಿಗೆ ಆರ್. ಅಶೋಕ ಪತ್ರ

ಬೆಂಗಳೂರು: ಕರ್ನಾಟಕ ವಕ್ಫ್ ಮಂಡಳಿಗೆ ಸಂಬಂಧಿಸಿದ ಎಲ್ಲ ರೀತಿಯ ಜಮೀನು ನೋಂದಣಿ ಪ್ರಕ್ರಿಯೆ ಸ್ಥಗಿತಗೊಳಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಕೇಂದ್ರ ಸಚಿವರು ಮತ್ತು ವಕ್ಫ್ ಕುರಿತ ಜಂಟಿ ಸಂಸದೀಯ ಸಮಿತಿಗೆ ಪತ್ರ ಬರೆದಿದ್ದಾರೆ.

ರಾಜ್ಯದಲ್ಲಿ ಹಿಂದೂ ಸಂಸ್ಥೆಗಳ ಜಮೀನುಗಳನ್ನು ವಕ್ಫ್ ಮಂಡಳಿ ಕಬಳಿಸುತ್ತಿದೆ. ತಕ್ಷಣವೇ ಮಧ್ಯ ಪ್ರವೇಶಿಸಬೇಕು ಕೇಂದ್ರ ಗೃಹ ಸಚಿವ ಅಮಿತ್ ಶಾ, ಆರೋಗ್ಯ ಸಚಿವ ಜೆ.ಪಿ.ನಡ್ಡಾ ಮತ್ತು ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಕೋಟೆ ಪುರಾತತ್ವ ಇಲಾಖೆಯದ್ದು: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಬಹಮನಿ ಕೋಟೆ ಆಸ್ತಿಯ ವಿಚಾರವಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ (ಎಎಸ್‌ಐ) ಮತ್ತು ವಕ್ಫ್ ಮಂಡಳಿ ನಡುವೆಯೇ ಗೊಂದಲಗಳಿವೆ.

ಸದ್ಯ ಇಡೀ ಕೋಟೆ ಪುರಾತತ್ವ ಇಲಾಖೆಯ ನಿಯಂತ್ರಣದಲ್ಲಿದೆ. ಪುರಾತತ್ವ ಇಲಾಖೆಯ 1951ರ ಗೆಜೆಟ್ ಅಧಿಸೂಚನೆ ಪ್ರಕಾರ, ಕೋಟೆ ಹಾಗೂ ಅದರೊಳಗಿನ ಎಲ್ಲ ಸ್ಮಾರಕಗಳು ಇಲಾಖೆಗೆ ಸೇರಿವೆ. ಆದರೆ, ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ 1974ರಲ್ಲಿ ಹೊರಡಿಸಿರುವ ಗೆಜೆಟ್ ನೋಟಿಫಿಕೇಶನ್‌ನಲ್ಲಿ ಬೀದರ್ ಕೋಟೆಯೊಳಗಿನ ಸೋಲಾಹ (ಹದಿನಾರು) ಕಂಬ ಮಸೀದಿ ವಕ್ಫ್ ಮಂಡಳಿಯ ಆಸ್ತಿ ಎಂದು ಘೋಷಿಸಲಾಗಿದೆ.

'1951ರಲ್ಲಿ ಪುರಾತತ್ವ ಇಲಾಖೆ ಅಧಿಸೂಚನೆ ಹೊರಡಿಸಿರುವುದರಿಂದ ಕೋಟೆ ಮೇಲೆ ಸಂಪೂರ್ಣ ಹಕ್ಕು ನಮ್ಮ ಇಲಾಖೆ ಹೊಂದಿದೆ. ವಕ್ಫ್ ಅಧಿಸೂಚನೆ ಹೊರಬಂದಿರುವುದು 1974ರಲ್ಲಿ. ಹೀಗಾಗಿ ಅವರ ಹಕ್ಕಿನ ಪ್ರಶ್ನೆಯೇ ಬರುವುದಿಲ್ಲ. ಮೊದಲಿನಿಂದಲೂ ಕೋಟೆ ನಮ್ಮ ನಿಯಂತ್ರಣದಲ್ಲಿದೆ' ಎಂದು ಎಎಸ್‌ಐ ಸಹಾಯಕ ಸಂರಕ್ಷಣಾಧಿಕಾರಿ ಅನಿರುದ್ಧ ದೇಸಾಯಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಬೀದರ್ ನಗರದ ಅಲಿ ಬರೀದ್ ಗುಂಬಜ್, ಬರೀದ್ ಷಾಹಿ ಉದ್ಯಾನ, ತಾಲ್ಲೂಕಿನ ಅಷ್ಟೂರಿನ ಗುಂಬಜ್‌ಗಳು ಕೂಡ ಪುರಾತತ್ವ ಇಲಾಖೆಯ ಅಧೀನದಲ್ಲಿವೆ. ಇವೆಲ್ಲ ಸಂರಕ್ಷಿತ ಸ್ಮಾರಕಗಳು. ವಕ್ಫ್ ಆಸ್ತಿಯೆನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಂರಕ್ಷಿತ ಸ್ಮಾರಕಗಳೆಲ್ಲ ಪುರಾತತ್ವ ಇಲಾಖೆಗೆ ಸೇರಿದೆ ಎಂದು ನ್ಯಾಯಾಲಯ ಹೇಳಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ಧರ್ಮಾಪುರ ವಿಚಾರ: ಬೀದರ್ ತಾಲ್ಲೂಕಿನ ಧರ್ಮಾಪುರ ಗ್ರಾಮಕ್ಕೆ ಗ್ರಾಮವೇ ವಕ್ಫ್ ಆಸ್ತಿ ಎಂಬ ವಿಚಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಈ ಕುರಿತು ಗ್ರಾಮಸ್ಥರನ್ನು ವಿಚಾರಿಸಿದಾಗ, ಇದುವರೆಗೆ ಯಾರೊಬ್ಬರಿಗೂ ನೋಟಿಸ್ ಬಂದಿಲ್ಲ. ಆಸ್ತಿಯ ಪಹಣಿಯಲ್ಲೂ ಬದಲಾವಣೆ ಆಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ತಹಶೀಲ್ದಾರ್ ವಿರುದ್ಧ ಹರಿಹಾಯ್ದ ಮಾಜಿ ಸಚಿವ

ಗಜೇಂದ್ರಗಡ (ಗದಗ ಜಿಲ್ಲೆ): 'ಮನವಿ ಸ್ವೀಕರಿಸಲು ಬೇಗ ಬರದೇ ಕಾಯಿಸಿದರು' ಎಂದು ಆರೋಪಿಸಿ ಮಾಜಿ ಸಚಿವ ಕಳಕಪ್ಪ ಬಂಡಿ ಅವರು ಸೋಮವಾರ ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ ವಿರುದ್ಧ ಏಕವಚನದಲ್ಲಿ ಹರಿಹಾಯ್ದರು.

ರೈತರು, ದೇವಾಲಯ ಹಾಗೂ ಮಠಗಳ ಆಸ್ತಿ ಮೇಲೆ ವಕ್ಫ್ ಮಂಡಳಿ ಹೆಸರು ದಾಖಲಿಸುತ್ತಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಮಾಜಿ ಸಚಿವ ಕಳಕಪ್ಪ ಬಂಡಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಮನವಿ ಸಲ್ಲಿಸಲು ತಹಶೀಲ್ದಾರ್ ಕಚೇರಿಗೆ ಬಂದಿದ್ದರು. ಪ್ರತಿಭಟನಕಾರರು ಬಂದಿದ್ದು ಗಮನಕ್ಕೆ ತಂದರೂ ತಹಶೀಲ್ದಾರ್ ಬರಲು ಕೊಂಚ ತಡವಾಯಿತು. ಇದರಿಂದ ಕೆರಳಿದ ಮಾಜಿ ಸಚಿವ ಕಳಕಪ್ಪ ಬಂಡಿ, 'ತಹಶೀಲ್ದಾರ್ ಇದೀಯಾ ನೀನು? ಏನ್ ಮಲ್ಗಿದ್ದೆನು? ಏನಂತ ತಿಳ್ಕೊಂಡಿ. ಡಿಸಿ ಅವ್ರು ಹೋಗ್ಬ್ಯಾಡ ಅಂತ ಹೇಳ್ಯಾರಾ? ಏಯ್ ಬಾಳ ಎಚ್ಚರಿಕೆಯಿಂದಿರು. ಏನ್ ನೀ ಸೂರ್ಯ, ಚಂದ್ರ ಇರೊವರೆಗೂ ಇರ್ತೀನಿ ಅನ್ಕೊಂಡಿಯಾ? ಏನ್ ಈ ಸರ್ಕಾರ ಸೂರ್ಯ ಚಂದ್ರ ಇರೊವರೆಗೂ ಇರ್ತದೆ ಅನ್ಕೊಂಡಿಯಾ? ಎಂದು ಹರಿಹಾಯ್ದರು. 'ನಾನು ಕಚೇರಿಯಿಂದ ಒಂದು ನಿಮಿಷವೂ ತಡವಾಗಿ ಹೊರ ಬಂದಿಲ್ಲ. ಮಾಜಿ ಸಚಿವರು ಯಾಕೆ ಹೀಗೆ ಮಾತನಾಡಿದರು ಎಂಬುದು ಗೊತ್ತಿಲ್ಲ' ಎಂದು ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ 'ಪ್ರಜಾವಾಣಿ'ಗೆ ತಿಳಿಸಿದರು.

30 ಕಲಾವಿದರಿಗೆ, ಇಬ್ಬರು ತಜ್ಞರಿಗೆ ಪ್ರಶಸ್ತಿ, ಐವರಿಗೆ ಪುಸ್ತಕ ಬಹುಮಾನ

ಜಾನಪದ ಅಕಾಡೆಮಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ


ಕೆ.ಚಿನ್ನಪ್ಪ ಗೌಡ


ಮಂಜುನಾಥ ಬೇವಿನಕಟ್ಟೆ


ಗೌರಮ್ಮ (ಅಂಧ ಕಲಾವಿದೆ)


ದಳವಾಯಿ ಚಿತ್ತಪ್ಪ

ಬೆಂಗಳೂರು: ಕೆ. ಚಿನ್ನಪ್ಪ ಗೌಡ, ಮಂಜುನಾಥ ಬೇವಿನಕಟ್ಟೆ ಅವರಿಗೆ ತಜ್ಞ ಪ್ರಶಸ್ತಿ, 30 ಜಿಲ್ಲೆಗಳ 30 ಕಲಾವಿದರಿಗೆ ವಾರ್ಷಿಕ ಗೌರವ ಪ್ರಶಸ್ತಿ, ಐವರಿಗೆ ಪುಸ್ತಕ ಪ್ರಶಸ್ತಿಯನ್ನು ಜಾನಪದ ಅಕಾಡೆಮಿ ಪ್ರಕಟಿಸಿದೆ.

ತಜ್ಞ ಪ್ರಶಸ್ತಿಯು ತಲಾ ₹50,000, ವಾರ್ಷಿಕ ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನ ತಲಾ ₹25,000 ನಗದು ಹೊಂದಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಜೀ.ಶಂ.ಪರಮಶಿವಯ್ಯ ತಜ್ಞ ಪ್ರಶಸ್ತಿಗೆ ದಕ್ಷಿಣ ಕನ್ನಡದ ಕೆ. ಚಿನ್ನಪ್ಪ ಗೌಡ ಹಾಗೂ ಬಿ.ಎಸ್. ಗದ್ದಗಿಮಠ ತಜ್ಞ ಪ್ರಶಸ್ತಿಗೆ ವಿಜಯನಗರದ ಮಂಜುನಾಥ ಬೇವಿನಕಟ್ಟೆ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಶೀಘ್ರದಲ್ಲಿಯೇ ದಿನಾಂಕ ಮತ್ತು ಸ್ಥಳ ನಿಗದಿ ಮಾಡಲಾಗುವುದು. ಬೆಂಗಳೂರಿನಿಂದ ಹೊರಗೆ ಕಾರ್ಯಕ್ರಮ ಹಮ್ಮಿಕೊಳ್ಳುವ ಉದ್ದೇಶವಿದೆ' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಸದಸ್ಯರಾದ ಶಂಕರಪ್ಪ ಸಂಕಣ್ಣವರ್, ಉಮೇಶ್, ಮಲ್ಲಿಕಾರ್ಜುನ ಕಲಮರಹಳ್ಳಿ, ಹುಲಿಕುಂಟೆ ಮೂರ್ತಿ, ದೇವಾನಂದ ವರಪ್ರಸಾದ, ರಿಜಿಸ್ಟ್ರಾರ್ ಎನ್. ನಮ್ರತ ಭಾಗವಹಿಸಿದ್ದರು.

ಗೌರವ ಪ್ರಶಸ್ತಿ: ಬೆಂಗಳೂರು ನಗರ ಜಿಲ್ಲೆಯ ಕೆ.ಎಂ. ರಾಮಯ್ಯ (ಏಕತಾರಿ, ತಂಬೂರಿ), ಬೆಂಗಳೂರು ಗ್ರಾಮಾಂತರದ ಓಬಮ್ಮ (ಸೋಬಾನೆ), ರಾಮನಗರ ಜಿಲ್ಲೆ ರಂಗಯ್ಯ (ಪಟ ಕುಣಿತ), ಕೋಲಾರದ ತೋಪಣ್ಣ ಮಂಚಂಡಹಳ್ಳಿ (ಕೀಲುಕುದುರೆ), ಚಿಕ್ಕಬಳ್ಳಾಪುರದ ದೊಡ್ಡಕೂರ್ಲಪ್ಪ (ತಮಟೆ ವಾದನ), ತುಮಕೂರು ಜಿಲ್ಲೆಯ ಕದರಮ್ಮ (ಜನಪದ ಹಾಡು), ದಾವಣಗೆರೆ ಜಿಲ್ಲೆಯ ಕಾಟಮ್ಮ (ಕಥನ ಕಾವ್ಯ), ಚಿತ್ರದುರ್ಗದ ಸಿರಿಯಮ್ಮ (ಮಹಾಕಾವ್ಯ), ಶಿವಮೊಗ್ಗ ಜಿಲ್ಲೆ ಟೀಕಪ್ಪ (ಡೊಳ್ಳು ಕುಣಿತ), ಕೊಡಗು ಜಿಲ್ಲೆಯ ದೇವಕಿ ಕೆ.ಸಿ. (ಊರ್ಟಿಕೋಟ್), ಮಂಡ್ಯದ ಗುರುಬಸವಯ್ಯ (ತಂಬೂರಿಪದ), ಹಾಸನದ ವೀರಭದ್ರಯ್ಯ (ತತ್ವಪದ), ಚಿಕ್ಕಮಗಳೂರಿನ ನಾಗರಾಜಪ್ಪ ವೈ.ಪಿ. (ಕರಡಿಗೆ ಕಾವ್ಯ), ಮೈಸೂರಿನ ಗುರುಸಿದ್ದಯ್ಯ (ತಂಬೂರಿಪದ) ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಉಡುಪಿಯ ಅಪ್ಪಿ (ಜನಪದ ಸೂಲಗಿತ್ತಿ), ದಕ್ಷಿಣ ಕನ್ನಡದ ಲೀಲಾವತಿ (ನಾಟಿವೈದ್ಯೆ), ಚಾಮರಾಜನಗರದ ಅಂಧ ಕಲಾವಿದೆ ಗೌರಮ್ಮ (ಸೋಬಾನೆಪದ), ಬೆಳಗಾವಿಯ ಶಿವನಪ್ಪ ಚಂದರಗಿ (ಡೊಳ್ಳುಕುಣಿತ), ಬಾಗಲಕೋಟೆಯ ಹನಮಂತ ವೆಂಕಪ್ಪ ಸುಗತೇಕರ (ಗೊಂದಳಿಪದ), ವಿಜಯಪುರದ ಇಮಾಂಬಿ ಇಮಾಮಸಾಬ (ತತ್ವಪದ), ಗದಗದ ಬಸಪ್ಪ ಹಡಗಲಿ (ಗೀಗೀ ಪದ), ಬಳ್ಳಾರಿಯ ದಳವಾಯಿ ಚಿತ್ತಪ್ಪ (ಜನಪದ ಮಹಾಕಾವ್ಯ), ಹಾವೇರಿಯ ಸಾವಕ್ಕಾ ಓಲೇಕಾರ (ಸೋಬಾನೆ, ಸಂಪ್ರದಾಯ ಪದ), ಉತ್ತರ ಕನ್ನಡದ ಈರಯ್ಯ ಮೊಗೇರ (ಕಾರಿನ್‌ಮನೆ ಕುಣಿತ, ಹೌಂದೇರಾಯನ ಕುಣಿತ), ಕಲಬುರಗಿ ಅಕ್ಕಮ್ಮ (ಸಂಪ್ರದಾಯ ಪದ), ಬೀದರ್‌ನ ಏಸಪ್ಪಾ (ಶಹನಾಯಿ), ರಾಯಚೂರಿನ ಶಾಂತಮ್ಮ (ಬುರ್ರಕಥೆ), ಕೊಪ್ಪಳದ ರೇವಣಪ್ಪ (ಡೊಳ್ಳಿನ ಹಾಡು, ಕುಣಿತ), ಧಾರವಾಡದ ರಾಮಪ್ಪ ಬಸವಂತಪ್ಪ ಮೂಲಗಿ (ಹಂತಿಪದ), ಯಾದಗಿರಿಯ ಅಮಯ್ಯಸ್ವಾಮಿ ಹಿರೇಮಠ (ಭಜನೆ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪುಸ್ತಕ ಬಹುಮಾನ

ಎಲ್ಲ ಪ್ರಶಸ್ತಿಗಳು 2023ನೇ ಸಾಲಿನದ್ದಾಗಿದ್ದು, ಪುಸ್ತಕ ಬಹುಮಾನವು 2022 ಮತ್ತು 2023ನೇ ಸಾಲಿನದ್ದಾಗಿದೆ ಎಂದು ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು.

2022ರ ಸಾಲಿನಲ್ಲಿ ಬೆಂಗಳೂರಿನ ಬಿ.ಎಸ್. ಸ್ವಾಮಿ ಅವರ 'ಜಾನಪದ ಲೇಖನ ಗುಚ್ಛ', ಬೆಂಗಳೂರಿನ ಕುರುವ ಬಸವರಾಜು ಅವರ 'ಭೌತಿಕ ವಸ್ತು ವಿಜ್ಞಾನ ಜಾನಪದ ಮತ್ತು ವಸ್ತು ಸಂಗ್ರಹಾಲಯಗಳ ಕುರಿತ ಲೇಖನಗಳು', ಜಾರ್ಖಂಡ್‌ನ ನಾಗ ಎಚ್. ಹುಬ್ಬಿ ಅವರ 'ಆದಿವಾಸಿ ಸಂಸ್ಕೃತಿ', 2023ನೇ ಸಾಲಿನಲ್ಲಿ ಮೈಸೂರಿನ ವ.ನಂ. ಶಿವರಾಮು ಅವರ 'ಜನಪದ–ಜಾನಪದ ಮತ್ತು ಕ್ಷೇತ್ರಕಾರ್ಯ', ಬೆಂಗಳೂರಿನ ವಿಜಯಶ್ರೀ ಸಬರದ ಅವರ 'ಸಬರದ ಮತ್ತು ಜಾನಪದ' ಕೃತಿಗಳನ್ನು ಪುಸ್ತಕ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮುಡಾದಲ್ಲಿ ನಕಲಿ ಚಲನ್: ಎಸ್‌ಐಟಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ನಕಲಿ ಚಲನ್ ಬಳಸಿ ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿದ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ವಹಿಸಬೇಕು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಉಳಿಸಿ ವೇದಿಕೆಯು ಒತ್ತಾಯಿಸಿದೆ.

ಖಾತೆ ವರ್ಗಾವಣೆಗೆಂದು ಮುಡಾಕ್ಕೆ ಬರುತ್ತಿದ್ದ ಅರ್ಜಿದಾರರಿಂದ ಹಣ ಪಡೆಯುತ್ತಿದ್ದ ಮುಡಾದ ಕೆಲವು ಸಿಬ್ಬಂದಿ ತಾವೇ ಬ್ಯಾಂಕಿಗೆ ಹಣ ಕಟ್ಟುವುದಾಗಿ ನಂಬಿಸುತ್ತಿದ್ದರು. ಬಳಿಕ ನಕಲಿ ಬ್ಯಾಂಕ್ ಚಲನ್‌ಗಳನ್ನು ಸೃಷ್ಟಿಸಿ, ಬ್ಯಾಂಕಿನಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಈ ನಕಲಿ ಚಲನ್‌ಗಳಿಗೆ ಬ್ಯಾಂಕ್ ಸೀಲ್ ಹಾಕಿ ಮುಡಾಕ್ಕೆ ಸಲ್ಲಿಸುತ್ತಿದ್ದರು. ಆದರೆ, ಹಣ ಮಾತ್ರ ಜಮೆ ಆಗಿರಲಿಲ್ಲ.

ಹೀಗೆ ಒಟ್ಟು 92 ನಕಲಿ ಚಲನ್‌ಗಳು ಪತ್ತೆಯಾಗಿದ್ದು, ₹1.95 ಕೋಟಿ ಮೊತ್ತದ ಅಕ್ರಮ ಕಂಡುಬಂದ ಕಾರಣದಿಂದ 2023ರ ನ.8ರಂದು ಮುಡಾದ ಆಗಿನ ತಹಶೀಲ್ದಾರ್ ಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಆರಂಭದಲ್ಲಿ ಗ್ರಾಹಕರ ವಿರುದ್ಧವೇ ದೂರು ದಾಖಲಾಗಿದ್ದು, ನಂತರದಲ್ಲಿ ಮುಡಾ ಹಾಗೂ ಬ್ಯಾಂಕ್ ಆಫ್ ಬರೋಡಾದ ಹೊರಗುತ್ತಿಗೆ ಸಿಬ್ಬಂದಿ ಈ ಪ್ರಕರಣದಲ್ಲಿ ಶಾಮೀಲಾಗಿರುವುದು ಕಂಡುಬಂದಿತ್ತು.

ಪ್ರಕರಣಕ್ಕೆ ಸಂಬಂಧಿಸಿ ಮುಡಾದ 'ಡಿ' ಗ್ರೂಪ್ ನೌಕರ ಟಿ.ಎಸ್.ನಂದನ್, ಹೊರಗುತ್ತಿಗೆ ನೌಕರ ಬಿ.ತರುಣ್ ಕುಮಾರ್ ಹಾಗೂ ಬ್ಯಾಂಕ್ ಆಫ್ ಬರೋಡದ ಹೊರಗುತ್ತಿಗೆ ನೌಕರ ಸುನಿಲ್ ಕುಮಾರ್ ಎಂಬುವರನ್ನು ಪೊಲೀಸರು ಬಂಧಿಸಿದ್ದರು. ನಂತರದಲ್ಲಿ ಈ ಪ್ರಕರಣವು ಸಿಸಿಬಿಗೆ ವರ್ಗಾವಣೆ ಆಗಿತ್ತು. 'ದೂರು ದಾಖಲಾಗಿ ವರ್ಷ ಕಳೆದರೂ ತನಿಖೆ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ನಕಲಿ ಚಲನ್ ವಿಚಾರದಲ್ಲಿ ₹5 ಕೋಟಿಗೂ ಅಧಿಕ ಮೊತ್ತದ ಅವ್ಯವಹಾರ ನಡೆದಿರುವ ಶಂಕೆ ಇದೆ. ಹೀಗಾಗಿ ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು. ಇಲ್ಲವೇ ಜಾರಿ ನಿರ್ದೇಶನಾಲಯವು ಈ ಪ್ರಕರಣದ ತನಿಖೆ ನಡೆಸಬೇಕು' ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಉಳಿಸಿ ವೇದಿಕೆಯ ಗಂಗರಾಜು ಒತ್ತಾಯಿಸಿದರು.

ಸಿಬಿಐ ತನಿಖೆ ಕೋರಿಕೆ: ವಿಚಾರಣೆ ಮುಂದಕ್ಕೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ, ಮಹರ್ಷಿ ವಾಲ್ಮೀಕಿ ನಿಗಮ, ಪಿಎಸ್‌ಐ ನೇಮಕಾತಿ ಮತ್ತು ಶೇ 40ರ ಕಮಿಷನ್ ಹಗರಣಗಳೂ ಸೇರಿದಂತೆ ಈಗಿನ, ಹಿಂದಿನ ಸರ್ಕಾರದಲ್ಲಿ ನಡೆದಿರುವ ಎಲ್ಲ ಹಗರಣಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಕೋರಲಾಗಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.

ಮೈಸೂರಿನ ವಕೀಲ ಸಿ. ಸಂತೋಷ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. 'ಕೇವಲ ಪತ್ರಿಕಾ ವರದಿಗಳನ್ನು ಆಧರಿಸಿ ಈ ಅರ್ಜಿ ಸಲ್ಲಿಸಲಾಗಿದೆ. ನಿಮ್ಮ ಮನವಿಯನ್ನು ಪುರಸ್ಕರಿಸುವಂತಹ ಯಾವುದೇ ದೃಢೀಕೃತ ದಾಖಲೆಗಳಿಲ್ಲ. ಹೀಗಾಗಿ, ಈ ಅರ್ಜಿ ವಜಾಗೊಳಿಸಬೇಕಾಗುತ್ತದೆ' ಎಂ ನ್ಯಾಯಪೀಠ ನಂತರ, ಸೂಕ್ತ ದಾಖಲೆಗಳು ಹಾಗೂ ವಾದಾಂಶಗಳೊಂದಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ 2 ವಾರ ಕಾಲಾವಕಾಶ ನೀಡಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಮೌಜಿನ್ಹೊ ದೆ, ಪ್ರಕಾಶ್ ನಾಯಕ್, ವೀಣಾ ಅಡಿಗೆಗೆ ಕೊಂಕಣಿ ಪುರಸ್ಕಾರ

ಪ್ರಜಾವಾಣಿ ವಾರ್ತೆ


ಮೌಜಿನ್ಹೊ


ಪ್ರಕಾಶ್ ನಾಯಕ್


ವೀಣಾ ಅಡಿಗೆ

ಮಂಗಳೂರು: ವಿಶ್ವ ಕೊಂಕಣಿ ಕೇಂದ್ರ ನೀಡುವ ವಿಮಲಾ ವಿ. ಪೈ ವಿಶ್ವ ಕೊಂಕಣಿ ಜೀವನ ಸಿದ್ಧಿ ಸಮ್ಮಾನ ಪ್ರಶಸ್ತಿಯು ಗೋವಾದ ಕೊಂಕಣಿ ಚಿಂತಕ ಮೌಜಿನ್ಹೊ ದೆ ಅಟೈಡೆ ಅವರಿಗೆ ದೊರೆತಿದೆ.

ಅತ್ಯುತ್ತಮ ಕೊಂಕಣಿ ಕವಿತಾ ಕೃತಿಗೆ ನೀಡಲಾಗುವ ವಿಮಲಾ ವಿ. ಪೈ ವಿಶ್ವ ಕೊಂಕಣಿ ಕವಿತಾ ಕೃತಿ ಪುರಸ್ಕಾರ -2024, ಗೋವಾದ ಕೊಂಕಣಿ ಕವಿ ಪ್ರಕಾಶ ಡಿ. ನಾಯಕ್ ಅವರ 'ಮೊಡಕೂಳ್' ಕೃತಿಗೆ ಲಭಿಸಿದೆ. ಬಸ್ತಿ ವಾಮನ ಶೆಣೈ ವಿಶ್ವ ಕೊಂಕಣಿ ಸೇವಾ ಪುರಸ್ಕಾರ -2024ರ ಮಹಿಳಾ ವಿಭಾಗದ ಪ್ರಶಸ್ತಿಯು ಮುಂಬೈನ ವೀಣಾ ಅಡಿಗೆ ಅವರಿಗೆ ಮತ್ತು ಸಂಘ- ಸಂಸ್ಥೆ ವಿಭಾಗದ ಪುರಸ್ಕಾರವು ಮಂಗಳೂರಿನ ಸೇವಾ ಭಾರತಿ ಸಂಸ್ಥೆಗೆ ದೊರೆತಿದೆ ಎಂದು ವಿಶ್ವ ಕೊಂಕಣಿ ಕೇಂದ್ರ ಅಧ್ಯಕ್ಷ ನಂದಗೋಪಾಲ ಶೆಣೈ ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪುರಸ್ಕಾರವು ತಲಾ ₹1 ಲಕ್ಷ ನಗದು ಒಳಗೊಂಡಿದೆ. ನ.5 ಮತ್ತು 6ರಂದು ಮಂಗಳೂರಿನ ವಿಶ್ವ ಕೊಂಕಣಿ ಕೇಂದ್ರದಲ್ಲಿ ಎರಡು ದಿನಗಳ ಕಾರ್ಯಕ್ರಮ ನಡೆಯಲಿದೆ. ನ.6ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ನಾಗರಾಜ, ಆಕಾಶಗೆ ಪ್ರಶಸ್ತಿ


ಎಂ.ಜಿ. ನಾಗರಾಜ


ಆಕಾಶ ಮನಗೂಳಿ

ಬೆಂಗಳೂರು: ಇಲ್ಲಿನ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ 2024ರ 'ಸುವರ್ಣಶ್ರೀ ಪ್ರಶಸ್ತಿಗೆ' ಸಾಹಿತಿ ಎಂ.ಜಿ. ನಾಗರಾಜ ಹಾಗೂ 'ಜಾನಪದ ವಿಭೂತಿ ಪ್ರಶಸ್ತಿಗೆ' ಆಕಾಶ ಮನಗೂಳಿ ಅವರು ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ನಾಗರಾಜ ಅವರು ಸಂಶೋಧಕ, ಇತಿಹಾಸ ತಜ್ಞರಾಗಿದ್ದು, ಅವರಿಗೆ 'ಸುವರ್ಣಶ್ರೀ ಪ್ರಶಸ್ತಿ' ಜೊತೆಗೆ ಕಂಚಿನ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ಹಾಗೂ ₹50 ಸಾವಿರ ನಗದು ನೀಡಲಾಗುತ್ತದೆ.

ವಿಜಯಪುರದ ಬಸವನಬಾಗೇವಾಡಿ ತಾಲ್ಲೂಕಿನ ಆಕಾಶ ಮನಗೂಳಿ ಅವರು, ಭಜನಾ ಕಲಾವಿದರಾಗಿದ್ದು, ಮೂರು ದಶಕಗಳಿಂದ ನಿರಂತರವಾಗಿ ಭಜನಾ ಕಲೆ ಉಳಿಸಿಕೊಂಡು ಬರುತ್ತಿದ್ದಾರೆ. ಅವರಿಗೆ ಜಾನಪದ ವಿಭೂತಿ ಪ್ರಶಸ್ತಿ ಜೊತೆಗೆ ತಾಮ್ರದ ಪ್ರಶಸ್ತಿ ಫಲಕ, ನೆನಪಿನ ಕಾಣಿಕೆ ಹಾಗೂ ₹25 ಸಾವಿರ ನಗದು ನೀಡಲಾಗುತ್ತದೆ ಎಂದು ಮಠದ ಕಾರ್ಯದರ್ಶಿ ಸಿ. ಬಸವರಾಜು ತಿಳಿಸಿದ್ದಾರೆ.

ಬೆಂಗಳೂರಿನ ವಿಭೂತಿಪುರದಲ್ಲಿರುವ ಮಠದ ಜಗದ್ಗುರು ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ನವೆಂಬರ್ 24ರಂದು ನಡೆಯುವ ಜಾನಪದೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಅತಿಕ್ರಮಣ ತೆರವಿಗೆ ಪ್ರಿಯಾಂಕ್ ಸೂಚನೆ

ಬೆಂಗಳೂರು: ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿನ ಜಲಮೂಲಗಳ ಅತಿಕ್ರಮಣವನ್ನು ತೆರವುಗೊಳಿಸಲು ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

ಈ ಸಂಬಂಧ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, 'ನಮ್ಮ ಜಲಮೂಲಗಳ ಸಂರಕ್ಷಣೆಯಿಂದ ಪರಿಸರ ಸಮತೋಲನವನ್ನು ಕಾಪಾಡಬಹುದು. ಕೃಷಿ ಚಟುವಟಿಕೆ ಮತ್ತು ಸಮುದಾಯಗಳ ನೀರಿನ ಅಗತ್ಯವನ್ನು ಖಚಿತ ಪಡಿಸುವುದು ಆದ್ಯತೆ ಕ್ರಮವಾಗಬೇಕು' ಎಂದು ಹೇಳಿದ್ದಾರೆ.

'ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಅನೇಕ ಕೆರೆಗಳು, ಕಿರು ಜಲಾಶಯಗಳು ಅತಿಕ್ರಮಣಗಳಾಗಿರುವ ಬಗ್ಗೆ ನನಗೆ ಮಾಹಿತಿ ಬಂದಿದೆ. ಈ ಗಂಭೀರ ವಿಷಯವನ್ನು ಗಮನದಲ್ಲಿಟ್ಟುಕೊಂಡು, ತಕ್ಷಣವೇ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ಪಾಲಿಸಲು ನಿರ್ದೇಶನ ನೀಡಬೇಕು' ಎಂದು ತಿಳಿಸಿದ್ದಾರೆ.

ಶಿಗ್ಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ •ಸತ್ತವರ ಹೆಸರಲ್ಲಿ ಲಂಚ ಪಡೆದ ನಾಯಕ ಬೊಮ್ಮಾಯಿ: ಆರೋಪ

‘ಉಪಚುನಾವಣೆ: ‘ಕೈ’ ಗೆಲ್ಲಿಸಿದರೆ ನನಗೆ ಶಕ್ತಿ’

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಪ್ರಚಾರ ಮತ್ತಷ್ಟು ಚುರುಕುಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಚಾರದ ಕಣಕ್ಕೆ ಇಳಿದಿದ್ದಾರೆ. ಸೋಮವಾರ ಕ್ಷೇತ್ರಕ್ಕೆ ಬಂದ ಅವರು, ಹಾವನೂರು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮಾತನಾಡಿ, ‘ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ನನಗೆ ಹಾಗೂ ನಮ್ಮ ಸರ್ಕಾರಕ್ಕೆ ಮತ್ತಷ್ಟು ಶಕ್ತಿ ಬರಲಿದೆ. ಶಿಗ್ಗಾವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ ಅವರನ್ನು ಗೆಲ್ಲಿಸಲೇಬೇಕು. ನಾನೂ ಕ್ಷೇತ್ರದಲ್ಲಿ ಇರುತ್ತೇನೆ. ಚುರುಕಿನ ಪ್ರಚಾರ ಮಾಡುತ್ತೇನೆ. ಪಠಾಣ ಗೆದ್ದರೆ ನಾನೇ ಗೆದ್ದಂತೆ’ ಎಂದರು.

‘ಧರ್ಮ, ಜಾತಿ, ಬಡವ–ಶ್ರೀಮಂತ, ದೀನ-ದಲಿತರು, ಹಿಂದುಳಿದವರು ಹಾಗೂ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣುವ ಪಕ್ಷ ಕಾಂಗ್ರೆಸ್. ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಕೆಲಸ ಮಾಡುತ್ತಿದ್ದೇನೆ. ನಾನು ಉಳಿಯಬೇಕಾದರೆ ನೀವೆಲ್ಲರೂ (ಮತದಾರರು) ಪಠಾಣಗೆ ಮತ ಹಾಕಬೇಕು. ಒಳ್ಳೆಯ ಕೆಲಸ ಮಾಡಿದ್ದೇನೆ. ಕೈ ಬಿಡಬೇಡಿ. ಕೈ ಜೋಡಿಸಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ’ ಎಂದು ಅವರು ಮತಯಾಚಿಸಿದರು.


ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಹಾವನೂರಿನಲ್ಲಿ ಸೋಮವಾರ ಆಯೋಜಿಸಿದ್ದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಮುಖಂಡರನ್ನು ಪಕ್ಷದ ಶಾಲು ಹೊದಿಸಿ ಸ್ವಾಗತಿಸಿದರು

‘ಕ್ಷೇತ್ರಕ್ಕೆ ಬೊಮ್ಮಾಯಿ ಕೊಡುಗೆ ಶೂನ್ಯ’

‘ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಬಿಜೆಪಿ ಎಂದರೆ ಭ್ರಷ್ಟಾಚಾರ ಜನತಾ ಪಾರ್ಟಿ. ಶೇ 40ರಷ್ಟು ಕಮಿಷನ್ ಆರೋಪ ಬಂದಾಗ ಬಸವರಾಜ ಬೊಮ್ಮಾಯಿ ಅವರೇ ಮುಖ್ಯಮಂತ್ರಿಯಾಗಿದ್ದರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಹಾವನೂರು ಗ್ರಾಮದಲ್ಲಿ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಸವಣೂರಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಹಣ ಕೊಟ್ಟಿದ್ದು ನಮ್ಮ ಸರ್ಕಾರ. ಶಿಗ್ಗಾವಿ–ಸವಣೂರು ಏತ ನೀರಾವರಿ ಮಾಡಿದ್ದು ನಾನು. ಕನಕದಾಸ ಅರಮನೆ ಅಭಿವೃದ್ಧಿಪಡಿಸಿದ್ದು ನಾನು. ಬಸವರಾಜ ಬೊಮ್ಮಾಯಿ ಅವರ ಕೊಡುಗೆ ಏನು’ ಎಂದು ಪ್ರಶ್ನಿಸಿದರು.

‘ಅಧಿಕಾರ ಬಂದ ಕೂಡಲೇ, ನುಡಿದಂತೆ ಪಂಚ ಗ್ಯಾರಂಟಿ ಯೋಜನೆ ಜಾರಿಗೊಳಿಸಲಾಗಿದೆ. 2013–2018ರ ಅವಧಿಯಲ್ಲಿ 15 ಲಕ್ಷ ಮನೆ ಕಟ್ಟಿಸಿಕೊಡುವ ಭರವಸೆ ನೀಡಿದ್ದೆ. 14.42 ಲಕ್ಷ ಮನೆ ಕಟ್ಟಿಸಿದ್ದೇನೆ.ಬೊಮ್ಮಾಯಿ ಅವರು ಒಂದಾದರೂ ಮನೆ ಕಟ್ಟಿಸಿದ್ದಾರಾ? ತೋರಿಸಲಿ’ ಎಂದರು.

‘ಕೋವಿಡ್ ಬಂದಾಗ, ಸತ್ತವರ ಹೆಸರಿನಲ್ಲಿ ಬಿಜೆಪಿಯವರು ಜನರಿಂದ ಲಂಚ ಪಡೆದರು. ಕರ್ನಾಟಕದ ಇತಿಹಾಸದಲ್ಲಿ ಸತ್ತವರ ಹೆಸರಿನಲ್ಲಿ ಲಂಚ ಪಡೆದ ನಾಯಕ ಬಸವರಾಜ ಬೊಮ್ಮಾಯಿ’ ಎಂದರು.

ಈ ಚುನಾವಣೆ, ಸುಳ್ಳು-ನಿಜದ ನಡುವಿನ ಹೋರಾಟವಿದ್ದಂತೆ. ಮುಗಿಲು ಮುಟ್ಟುವವರೆಗೂ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಕಾಂಗ್ರೆಸ್ ಗೆಲ್ಲಿಸಿ ಅವರಿಗೆ ಪಾಠ ಕಲಿಸಬೇಕು
ಸತೀಶ ಜಾರಕಿಹೊಳಿ, ಸಚಿವ

ಮಗ, ಮೊಮ್ಮಗ, ಆಮೇಲೆ ಮರಿಮೊಮ್ಮಗ. ಬಿಜೆಪಿ ವಂಶಾಡಳಿತ ಮಾಡುತ್ತಿದೆ. ಜನರು ಕಾಂಗ್ರೆಸ್ ಗೆಲ್ಲಿಸಿ, ವಂಶಾಡಳಿತ ತಡೆಯಬೇಕು
ಶಿವಾನಂದ ಪಾಟೀಲ, ಸಚಿವ

‘ಸಿದ್ದರಾಮಯ್ಯ ಹೇಳಿದ್ದು ಹಸಿ ಸುಳ್ಳು: ಚರ್ಚೆಗೆ ಸಿದ್ಧ’

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಶಿಗ್ಗಾವಿ–ಸವಣೂರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸಿ ಸುಳ್ಳು ಹೇಳಿದ್ದಾರೆ. ನಾನು ಮಾಡಿರುವ ಅಭಿವೃದ್ಧಿ ಕುರಿತು ಬಹಿರಂಗ ಚರ್ಚೆಗೆ ಸಿದ್ಧನಿದ್ದೇನೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕ್ಷೇತ್ರದಲ್ಲಿ ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಸಿದ್ದರಾಮಯ್ಯ ಅವರು ಮಾಡಿದ ಆರೋಪಗಳಿಗೆ ಸಂಬಂಧಪಟ್ಟಂತೆ ‘ಎಕ್ಸ್’ನಲ್ಲಿ ಪೋಸ್ಟ್ ಪ್ರಕಟಿಸಿರುವ ಬೊಮ್ಮಾಯಿ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ನಾನು ಖಂಡಿತ ಒಂದು ಮನೆ ಕಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ತಲಾ ₹ 5 ಲಕ್ಷ ಮೌಲ್ಯದ 12,500 ಮನೆ ಕಟ್ಟಿಸಿದ್ದೇನೆ. ನಿಮ್ಮದೇ ಸರ್ಕಾರದಲ್ಲಿ ದಾಖಲೆ ಇದೆ. ಬೇಕಾದರೆ, ನೋಡಿ,. ಹಸಿ ಸುಳ್ಳು ಹೇಳುವುದು ನಿಮ್ಮ ಸ್ಥಾನಕ್ಕೆ ಶೋಭೆ ತರುವುದಿಲ್ಲ’ ಎಂದಿದ್ದಾರೆ.

‘ಕೋವಿಡ್ ಸಂದರ್ಭದಲ್ಲಿ ಜೀವನದ ಹಂಗು ತೊರೆದು ನಮ್ಮ ಸರ್ಕಾರ, ಕೆಲಸ ಮಾಡಿದೆ. ಸಕಲ ವ್ಯವಸ್ಥೆ ಮಾಡಿ ಸಾವಿರಾರು ಜನರ ಪ್ರಾಣ ಉಳಿಸಿರುವುದು ಸಾರ್ವಜನಿಕರಿಗೆ ಗೊತ್ತಿರುವ ವಿಚಾರ. ಈ ಯಶಸ್ಸು ಕಂಡು ಅಸೂಯೆಯಿಂದ ರಾಜಕೀಯ ಪ್ರೇರಿತ ಆರೋಪ ಮಾಡುವುದನ್ನು ಬಿಡಿ. ನನ್ನ ಸ್ವಂತ ಮನೆಯನ್ನೇ ಕೋವಿಡ್ ಆಸ್ಪತ್ರೆಯನ್ನಾಗಿ ಮಾಡಿ, ಶಿಗ್ಗಾವಿ–ಸವಣೂರು ತಾಲ್ಲೂಕಿನ ಜನರಿಗೆ ಚಿಕಿತ್ಸೆ ಕೊಟ್ಟಿದ್ದನ್ನು ಜನ ಎಂದೂ ಮರೆಯುವುದಿಲ್ಲ’ ಎಂದು ತಿಳಿಸಿದ್ದಾರೆ.

‘ಜಲಸಂಪನ್ಮೂಲ ಸಚಿವನಾಗಿ ಶಿಗ್ಗಾವಿ ಏತ ನಿರಾವರಿಯನ್ನು 2008ಕ್ಕೆ ಪ್ರಾರಂಭಿಸಿ 2012ರಲ್ಲಿ ಪೂರ್ಣಗೊಳಿಸಿದ್ದೇನೆ. ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಹಣ ಬಿಡುಗಡೆ ಮಾಡಿದ್ದರು. ನಿಮ್ಮದೇ ಸರ್ಕಾರ, ಸವಣೂರು ಏತ ನೀರಾವರಿ ಪ್ರಾರಂಭ ಮಾಡದೇ ನಿಷ್ಕ್ರಿಯವಾಗಿತ್ತು’ ಎಂದಿದ್ದಾರೆ.

‘ಶಿಕ್ಷಣ, ಆರೋಗ್ಯ, ರಸ್ತೆ, ಗ್ರಾಮೀಣ ಅಭಿವೃದ್ಧಿ, ಕೆರೆ ತುಂಬಿಸುವುದು, ಮೇಲ್ಸೇತುವೆಗಳ ನಿರ್ಮಾಣ, ಎರಡು ಪಾಲಿಟೆಕ್ನಿಕ್, ಎರಡು ಐಟಿಐ ಕಾಲೇಜು, ಟೆಕ್ಸ್‌ಟೈಲ್ ಪಾರ್ಕ್, ಆಯುರ್ವೇದ ಕಾಲೇಜು ಇನ್ನೂ ಹಲವಾರು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಿಮ್ಮ ಸರ್ಕಾರದ ಬಳಿ ದಾಖಲೆ ಇವೆ. ಇಲ್ಲದಿದ್ದರೆ ಹೇಳಿ, ನಿಮಗೆ ದಾಖಲೆ ಕಳುಹಿಸಿ ಕೊಡಲು ಸಿದ್ಧನಿದ್ದೇನೆ’ ಎಂದು ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಮಹಾರಾಷ್ಟ್ರ ಡಿಜಿಪಿ ರಶ್ಮಿ ಶುಕ್ಲಾ ವರ್ಗಾವಣೆಗೆ ಆಯೋಗ ಸೂಚನೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಪೊಲೀಸ್ ಮಹಾನಿರ್ದೇಶಕಿ (ಡಿಜಿಪಿ) ರಶ್ಮಿ ಶುಕ್ಲಾ ಅವರನ್ನು ಡಿಜಿಪಿ ಸ್ಥಾನದಿಂದ ತಕ್ಷಣವೇ ವರ್ಗಾವಣೆ ಮಾಡುವಂತೆ ಕೇಂದ್ರ ಚುನಾವಣಾ ಆಯೋಗವು ಮಹಾರಾಷ್ಟ್ರ ಸರ್ಕಾರಕ್ಕೆ ಸೂಚಿಸಿದೆ.

ಚುನಾವಣಾ ಆಯೋಗವು ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಈ ಬಗ್ಗೆ ಸೋಮವಾರ ಪತ್ರ ಬರೆದಿದೆ. ರಶ್ಮಿ ಅವರಿಂದ ತೆರವಾಗುವ ಸ್ಥಾನಕ್ಕೆ ಮಹಾರಾಷ್ಟ್ರ ಕೇಡರ್‌ನ ಅತ್ಯಂತ ಹಿರಿಯ ಐಪಿಎಸ್ ಅಧಿಕಾರಿಯನ್ನು ನೇಮಿಸುವಂತೆ ಹಾಗೂ ಈ ಸಂಬಂಧ ಮೂವರು ಐಪಿಎಸ್ ಅಧಿಕಾರಿಗಳ ಪಟ್ಟಿಯನ್ನು ಮಂಗಳವಾರ ಮಧ್ಯಾಹ್ನದೊಳಗೆ ಕಳುಹಿಸುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಡಿಜಿಪಿ ರಶ್ಮಿ ಅವರು ಮಹಾರಾಷ್ಟ್ರ ಸರ್ಕಾರದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ ಎಂದು ಪ್ರತಿಪಕ್ಷಗಳು ದೂರಿದ್ದ ಬೆನ್ನಲ್ಲೆ ಈ ಬೆಳವಣಿಗೆ ನಡೆದಿದೆ.

‘ಅಧಿಕಾರಿಗಳು ನಿಷ್ಪಕ್ಷಪಾತ-ವಾಗಿ ಹಾಗೂ ನ್ಯಾಯಸಮ್ಮತವಾಗಿ ಕರ್ತವ್ಯ ನಿರ್ವಹಿಸಬೇಕು’ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಈಚೆಗೆ ನಡೆದಿದ್ದ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಎಚ್ಚರಿಸಿದ್ದರು.



ಉಪಚುನಾವಣೆ: ದಿನಾಂಕ ಮರುನಿಗದಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ, ಪಂಜಾಬ್ ಮತ್ತು ಕೇರಳ ವಿಧಾನಸಭೆಯ ಕೆಲವು ಕ್ಷೇತ್ರಗಳ ಉಪಚುನಾವಣೆಯನ್ನು ನವೆಂಬರ್ 13ರ ಬದಲು ನ.20ರಂದು ನಡೆಸಲಾಗುವುದು ಎಂದು ಚುನಾವಣಾ ಆಯೋಗ ಸೋಮವಾರ ತಿಳಿಸಿದೆ.

ಈ ರಾಜ್ಯಗಳಲ್ಲಿ ಹಬ್ಬಗಳು ಇರುವುದರಿಂದ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಕೇರಳದ ಒಂದು, ಪಂಜಾಬ್‌ನ ನಾಲ್ಕು ಹಾಗೂ ಉತ್ತರ ಪ್ರದೇಶದ ಒಂಬತ್ತು ಕ್ಷೇತ್ರಗಳ ಉಪಚುನಾವಣೆಯ ದಿನಾಂಕ ಮರುನಿಗದಿಯಾಗಿದೆ.

ವಿವಿಧ ಪಕ್ಷಗಳು ಹಬ್ಬಗಳ ಕಾರಣದಿಂದ ಮತದಾನದ ದಿನಾಂಕವನ್ನು ಮರುನಿಗದಿ ಮಾಡುವಂತೆ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದವು.

ಪ್ರಚಾರದಲ್ಲಿ ಡಿಕೆಶಿ–ಎಚ್‌ಡಿಕೆ ವಾಕ್ಸಮರ

ಯೋಗೇಶ್ವರ್ ಪರ ಉಪ ಮುಖ್ಯಮಂತ್ರಿ, ನಿಖಿಲ್ ಪರ ಕೇಂದ್ರ ಸಚಿವರಿಂದ ಭರ್ಜರಿ ಪ್ರಚಾರ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಕ್ಷೇತ್ರದಲ್ಲಿ ಸೋಮವಾರ ಘಟಾನುಘಟಿ ನಾಯಕರು ತಮ್ಮ ಅಭ್ಯರ್ಥಿಗಳ ಪರ ಮತ ಬೇಟೆಗಿಳಿದರು. ನಾಯಕರು ನಡೆಸಿದ ಪ್ರಚಾರ, ಪರಸ್ಪರ ವಾಕ್ಸಮರಕ್ಕೂ ಸಾಕ್ಷಿಯಾಯಿತು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಚಲುವರಾಯಸ್ವಾಮಿ, ವೆಂಕಟೇಶ್, ಡಾ.ಎಂ.ಸಿ.ಸುಧಾಕರ್, ಬೈರತಿ ಸುರೇಶ್, ಶಾಸಕರು ಹಾಗೂ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಪ್ರಚಾರ ನಡೆಸಿದರು. ನಿಖಿಲ್ ಪತ್ನಿ ರೇವತಿ ಅವರು ಕೂಡ ಮತ ಯಾಚಿಸಿದರು.

ರೆಡಿಮೇಡ್ ಗಂಡು: ‘ಯೋಗೇಶ್ವರ್ ರೆಡಿಮೇಡ್ ಗಂಡು. ಇಲ್ಲಿ ಅವರಷ್ಟೇ ಅಭ್ಯರ್ಥಿಯಲ್ಲ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕೂಡ ಅಭ್ಯರ್ಥಿಯೇ. ಸ್ಥಳೀಯರ ಕಷ್ಟ–ಸುಖದ ಅರಿವಿರುವ ಯೋಗೇಶ್ವರ್ ಬೆನ್ನಿಗೆ ನಾನಿದ್ದೇನೆ. ಕುಮಾರಣ್ಣನಿಂದ ವಂಚನೆಗೊಳಗಾದ ಅವರಿಗೆ ಕರೆದು ಟಿಕೆಟ್ ಕೊಟ್ಟಿದ್ದೇನೆ. ನಾವು ಮನೆಗೆ ಉಚಿತ ವಿದ್ಯುತ್ ನೀಡಿದ್ದೇವೆ. ಯೋಗೇಶ್ವರ್ ಕೆರೆಗಳಿಗೆ ನೀರು ತುಂಬಿಸಿದ್ದಾರೆ. ಇಂತಹ ಒಂದು ಕೆಲಸವನ್ನು ಕುಮಾರಸ್ವಾಮಿ ಮಾಡಿದ್ದಾರಾ?’ ಎಂದು ಡಿಸಿಎಂ ಪ್ರಶ್ನಿಸಿದರು.

ಅಧರ್ಮಕ್ಕೆ ಸೋಲು: ‘ಚನ್ನಪಟ್ಟಣದಲ್ಲಿ ಧರ್ಮ ಮತ್ತು ಅಧರ್ಮದ ನಡುವೆ ಯುದ್ಧ ನಡೆಯುತ್ತಿದೆ. ನಿಖಿಲ್ ಗೆಲ್ಲುವ ಮೂಲಕ ಅಧರ್ಮಕ್ಕೆ ಹೀನಾಯ ಸೋಲಾಗಲಿದೆ. ಇಲ್ಲಿ ಚದುರಂಗ ಆಟವಾಡಿ ಮುಳುಗಿ ಎದ್ದವರ ದೊಡ್ಡ ಇತಿಹಾಸವೇ ಇದೆ. ಎಲ್ಲದಕ್ಕೂ ಅಂತಿಮ ಎನ್ನುವುದಿದೆ. ಇಲ್ಯಾರೂ ಶಾಶ್ವತವಲ್ಲ. ಬಾವುಟ ಹಾರಿಸುವುದಕ್ಕಿಂತ ನಂಬಿ ಗೆಲ್ಲಿಸಿದ ಜನರ ಋಣ ತೀರಿಸುವುದು ಮುಖ್ಯ’ ಎಂದು ಡಿಸಿಎಂ ಹೇಳಿಕೆಗೆ ಕುಮಾರಸ್ವಾಮಿ ತಿರುಗೇಟು ನೀಡಿದರು.

ನಿಖಿಲ್ ಪರ ಪ್ರಚಾರಕ್ಕಾಗಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಮಂಗಳವಾರ ಚನ್ನಪಟ್ಟಣಕ್ಕೆ ಬರಲಿದ್ದು ಗ್ರಾಮೀಣ ಭಾಗದಲ್ಲಿ ಮತಯಾಚಿಸಲಿದ್ದಾರೆ.


ಉಪ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪತ್ನಿ ರೇವತಿ ಅವರು, ಚನ್ನಪಟ್ಟಣ ಬಸ್ ನಿಲ್ದಾಣ ಬಳಿ ಸೋಮವಾರ ಮತ ಯಾಚಿಸಿದರು

ನಮ್ಮ ಕುಟುಂಬದ ಬಗ್ಗೆ ಕಾಂಗ್ರೆಸ್ ನಾಯಕರು ಎಲ್ಲೆ ಮೀರಿ ಮಾಡುತ್ತಿರುವ ಆರೋಪಗಳನ್ನು ಜನ ಗಮನಿಸುತ್ತಿದ್ದಾರೆ. ನ.13ರಂದು ಜನರೇ ತೀರ್ಪು ಕೊಡಲಿದ್ದಾರೆ
ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಅಭ್ಯರ್ಥಿ

ಕ್ಷೇತ್ರಕ್ಕೆ ಕುಮಾರಸ್ವಾಮಿ ಸಾಕ್ಷಿ ಗುಡ್ಡೆ ಏನು? ಬಲವಂತವಾಗಿ ಮಗನನ್ನು ನಿಲ್ಲಿಸಿ ಕಣ್ಣೀರು ಹಾಕಿಸಿರುವ ಅವರು, ಜನರೇ ಅವನ ಕಣ್ಣೀರು ಒರೆಸಬೇಕು ಎಂದು ಕೇಳುತ್ತಾರಲ್ಲ. ಅವರಿಗೆ ನೈತಿಕತೆ ಇದೆಯೇ?
ಸಿ.ಪಿ.ಯೋಗೇಶ್ವರ್, ಕಾಂಗ್ರೆಸ್ ಅಭ್ಯರ್ಥಿ

‘ನಿಖಿಲ್ ಇನ್ನೂ ಕಂದ, ಹೇಳಿದಂತೆ ಕೇಳ್ತಾನೆ’

‘ನಿಖಿಲ್ ಕುಮಾರಸ್ವಾಮಿ ಪಾಪ ಇನ್ನೂ ಕಂದ. ಅವರು (ಎಚ್‌ಡಿಕೆ) ಇಲ್ಲಿ ನಿಲ್ಲು ಎಂದರೂ ನಿಲ್ಲುತ್ತಾನೆ. ಅಲ್ಲಿ ನಿಲ್ಲು ಎಂದರೂ ನಿಲ್ಲುತ್ತಾನೆ. ಕಣ್ಣೀರು ಹಾಕು ಎಂದರೂ ಹಾಕುತ್ತಾನೆ. ನಗು ಎಂದರೂ ನಗುತ್ತಾನೆ. ಆತನನ್ನು ನಾನು ಪ್ರಶ್ನಿಸುವುದಿಲ್ಲ. ಕಾರ್ಯಕರ್ತರ ಒತ್ತಡಕ್ಕೆ ಮಣಿದು ಚುನಾವಣೆಯಲ್ಲಿ ಸ್ಪರ್ಧಿಸಿರುವೆ ಎಂದು ಆತ ಹೇಳುತ್ತಿದ್ದಾನೆ. ನಿಖಿಲ್ ಅವರ ಒತ್ತಡಕ್ಕೆ ಸ್ಪರ್ಧಿಸಿದ್ದಾನೆಯೇ ಹೊರತು, ಜನಸೇವೆಗಾಗಿ ಅಲ್ಲ. ನಂಬಿ ಮುಖ್ಯಮಂತ್ರಿಯನ್ನಾಗಿ ಮಾಡಿದ ಜನರನ್ನು ಕೈಬಿಟ್ಟು ಮಂಡ್ಯಕ್ಕೆ ಹೋಗಿರುವ ಕುಮಾರಣ್ಣ, ಈಗ ಮತ್ತೆ ಬಂದು ಮತ ಕೇಳುವ ನೈತಿಕತೆ ನಿನಗಿದೆಯೇ?’ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.


ಸಿ.ಪಿ.ಯೋಗೇಶ್ವರ್ ಪರವಾಗಿ ಸೋಮವಾರ ತಾಲ್ಲೂಕಿನ ತಗಚಗೆರೆಯಲ್ಲಿ ಪ್ರಚಾರ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಯೋಗೇಶ್ವರ್ ಕೈ ಹಿಡಿದು ಮೇಲಕ್ಕೆತ್ತಿ ಬೆಂಬಲಿಸುವಂತೆ ಜನರಿಗೆ ಮನವಿ ಮಾಡಿದರು

‘ಕಂದ ಈ ಸಲ ಅಭಿಮನ್ಯುವಲ್ಲ, ಅರ್ಜುನ’

‘ಇವತ್ತು ಡಿಸಿಎಂ ಹುದ್ದೆಯಲ್ಲಿರುವ ವ್ಯಕ್ತಿ ನಿಖಿಲ್‌ನನ್ನು ಕಂದ, ಶಿಶು ಎಂದು ಕರೆಯುತ್ತಿದ್ದಾರೆ. ಆ ಶಿಶುವನ್ನು ಮಂಡ್ಯ ಮತ್ತು ರಾಮನಗರದಲ್ಲಿ ಕುತಂತ್ರದಿಂದ ಸೋಲಿಸಿದ್ಯಾರು? ಅರ್ಜುನನನ್ನು ಕುತಂತ್ರದಿಂದ ಬೇರೆಡೆಗೆ ಸಾಗ ಹಾಕಿ ಅಭಿ-ಮನ್ಯುವನ್ನು ಸೋಲಿಸಿ ಹೇಯವಾಗಿ ಕೊಂದರು. ಈ ಬಾರಿ ನಿಖಿಲ್ ಅಭಿಮನ್ಯುವಲ್ಲ, ಅರ್ಜುನ’ ಎಂದು ಡಿಕೆಶಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದರು.

‘ಒಳಮೀಸಲಾತಿಯೇ ಚರ್ಚಾ ವಿಷಯ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಒಳಮೀಸಲಾತಿ ಜಾರಿಗೆ ಅಗತ್ಯವಿರುವ ವೈಜ್ಞಾನಿಕ ಅಂಕಿ ಅಂಶಗಳನ್ನು ನಿರ್ಧರಿಸಲು ಸರ್ಕಾರ ಆಯೋಗ ರಚಿಸುವ ವಿಷಯವನ್ನು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕೇಂದ್ರೀಕರಿಸಿವೆ. ಉಪಚುನಾವಣೆಯಲ್ಲಿ ಇದರ ಬಗ್ಗೆಯೇ ಹೆಚ್ಚು ಚರ್ಚೆಯಾಗು-ತ್ತಿದ್ದು, ಮತದಾರರ ಒಲವು ಗಳಿಸಲು ಪ್ರಯತ್ನ ನಡೆದಿದೆ.

‘ಒಳಮೀಸಲಾತಿ ನೀಡುವ ಉದ್ದೇಶ ರಾಜ್ಯ ಸರ್ಕಾರಕ್ಕಿಲ್ಲ. ಅದಕ್ಕೆ ಆಯೋಗ ರಚನೆ ಹೆಸರಿನಲ್ಲಿ ಕಾಲಹರಣ ಮಾಡುತ್ತಿದೆ’ ಎಂದು ಬಿಜೆಪಿ ನಾಯಕರು ಹೇಳಿದರೆ, ‘ಒಳಮೀಸಲಾತಿ ಜಾರಿಗೆಂದೇ ಆಯೋಗ ರಚಿಸಲು ನಿರ್ಧರಿಸಲಾಗಿದೆ’ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಾರೆ.

ನವೆಂಬರ್ 1ರಿಂದ ಬಳ್ಳಾರಿ ಜಿಲ್ಲೆಯಲ್ಲೇ ಉಳಿದಿರುವ ಚಿತ್ರದುರ್ಗದ ಬಿಜೆಪಿ ಸಂಸದ ಗೋವಿಂದ ಕಾರಜೋಳ ಸಂಡೂರು ಕ್ಷೇತ್ರದಲ್ಲಿ ದಲಿತ ಮುಖಂಡರ ಸಭೆಗಳನ್ನು ನಡೆಸಿದ್ದಾರೆ. ಆಯೋಗ ರಚನೆಯಿಂದ ಒಳಮೀಸಲಾತಿ ಜಾರಿ ತಡವಾಗಲಿದೆ ಎಂಬ ವಿಚಾರವನ್ನು ಮತದಾರರಿಗೆ ದಾಟಿಸುವ ಪ್ರಯತ್ನ ಮಾಡಿದ್ದಾರೆ.

ಈ ಬೆಳವಣಿಗೆಯನ್ನು ಗಮನಿ-ಸುತ್ತಿರುವ ಕಾಂಗ್ರೆಸ್ ಕೂಡ ದಲಿತ ಮುಖಂಡರ ಸಭೆಗಳನ್ನು ನಡೆಸುತ್ತಿದೆ. ಸ್ವತಃ ಸಚಿವ ಸಂತೋಷ ಲಾಡ್ ಅವರು ಸಭೆಯ ನೇತೃತ್ವ ವಹಿಸಿದ್ದು, ‘ನನ್ನ ಹಿಂದೆ ಸುತ್ತ ಬೇಡಿ. ನಿಮ್ಮ ಪ್ರಾಬಲ್ಯ ಇರುವ ಊರುಗಳಿಗೆ ಹೋಗಿ. ಒಳ ಮೀಸಲಾತಿಯ ವಾಸ್ತವ ಜನರಿಗೆ ತಿಳಿಸಿ’ ಎಂದು ತಿಳಿಸಿದ್ದಾರೆ.

ಎಸ್‌ಟಿ ಮೀಸಲು ಕ್ಷೇತ್ರವಾಗಿರುವ ಸಂಡೂರಿನಲ್ಲಿ ದಲಿತ ಸಮುದಾಯದ ಮತಗಳು ಹೆಚ್ಚಿವೆ. ಹೀಗಾಗಿಯೇ ಒಳ ಮೀಸಲಾತಿ ವಿಷಯ ಸಂಡೂರಿನಲ್ಲಿ ರಾಜಕೀಯ ವಿಷಯವಾಗಿ ಮಾರ್ಪಟ್ಟಿದೆ.


ಸಂಡೂರು ವಿಧಾನಸಭಾ ಕ್ಷೇತ್ರದ ಭುಜಂಗ ನಗರದಲ್ಲಿ ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ಅವರೊಂದಿಗೆ ಸಚಿವ ಸಂತೋಷ್ ಲಾಡ್, ಬೀದರ್ ಸಂಸದ ಸಾಗರ ಖಂಡ್ರೆ, ಕೆಎಂಎಫ್ ಅಧ್ಯಕ್ಷ ಬೀಮಾ ನಾಯ್ಕ ಮತಯಾಚಿಸಿದರು

ಬಿಜೆಪಿ, ಕಾಂಗ್ರೆಸ್ ಪ್ರಚಾರ ಜೋರು

ಹಬ್ಬದ ಮಾರನೇ ದಿನವೇ ಸಂಡೂರಿನಲ್ಲಿ ಪ್ರಚಾರದ ಅಬ್ಬರವೂ ಜೋರಾಗಿದೆ. ಬಿಜೆಪಿ ನಾಯಕರಾದ ಬಿ.ವೈ ರಾಘವೇಂದ್ರ ಮತ್ತು ಬಿ.ವೈ.ವಿಜಯೇಂದ್ರ ಸೋಮವಾರ ಪ್ರಚಾರ ನಡೆಸಿದರು.

ಸಚಿವ ಕೆ.ಜೆ ಜಾರ್ಜ್ ಕ್ರೈಸ್ತ ಸಮುದಾಯದ ಮುಖಂಡರ ಸಭೆಗಳನ್ನು ನಡೆಸಿದರೆ, ಸಚಿವ ಸಂತೋಷ್ ಲಾಡ್ ಅಭ್ಯರ್ಥಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ಅವರೊಂದಿಗೆ ಪ್ರಚಾರ ನಡೆಸಿದರು. ಬೀದರ್ ಸಂಸದ ಸಾಗರ್ ಖಂಡ್ರೆ ಅವರೂ ಇದ್ದರು.

ಸಚಿವ ಕೆ.ಜೆ ಜಾರ್ಜ್ ಮಾತನಾಡಿ, ‘ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೆಚ್ಚಿನ ತೆರಿಗೆ ಪಾವತಿಸುತ್ತಿದೆ. ಆದರೆ, ನಮಗೆ ಕೇಂದ್ರದಿಂದ ಸಿಗುತ್ತಿರುವುದು ಅಲ್ಪ ಪಾಲು. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿಲ್ಲ ಎಂಬ ಕಾರಣಕ್ಕೆ ಇಂಥ ಅನ್ಯಾಯ ಮಾಡಬಾರದು’ ಎಂದರು.

ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರವಾಗಿ ಕೇಂದ್ರದ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಕೂಡ ಪ್ರಚಾರ ನಡೆಸಿದರು. ಮನೆ ಮನೆಗಳಿಗೆ ತೆರಳಿ ಮತ ಯಾಚಿಸಿದರು.

‘ವಕ್ಫ್ ಆಸ್ತಿಗಳನ್ನು ಕಾಂಗ್ರೆಸ್ ನಾಯಕರು ಅನುಭವಿಸುತ್ತಿದ್ದಾರೆ. ಅವುಗಳೂ ಹೊರಗೆ ಬರಲಿವೆ. ನಾವೇನು ಮುಸ್ಲಿಮರ ವಿರೋಧಿಗಳಲ್ಲ. ಮುಸ್ಲಿಮರ ಆಸ್ತಿಗಳಿಗೂ ವಕ್ಫ್ ಹೆಸರು ಬಂದಿದೆ. ಭಾಗ್ಯಲಕ್ಷ್ಮಿ ಯೋಜನೆಯನ್ನು ಕಾಂಗ್ರೆಸ್ ಕಸಿದಿದೆ’ ಎಂದು ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಿಶಾ ಯೋಗೇಶ್ವರ್ ಹೇಳಿಕೆಗಳಿಗೆ ಹೈಕೋರ್ಟ್ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ವಿರುದ್ಧ ಅವರ ಮೊದಲ ಪತ್ನಿಯ ಪುತ್ರಿ ನಿಶಾ ಯೋಗೇಶ್ವರ್, ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಮಾನಹಾನಿಕರ ಅಥವಾ ಅವಹೇಳನಕಾರಿ ಹೇಳಿಕೆಗಳನ್ನು ನೀಡದಂತೆ ಹೈಕೋರ್ಟ್ ನಿರ್ಬಂಧಿಸಿದೆ. ಈ ಸಂಬಂಧ ಸಿ.ಪಿ. ಯೋಗೇಶ್ವರ್ ಪತ್ನಿ ಪಿ.ವಿ.ಶೀಲಾ ಸಲ್ಲಿಸಿರುವ ರಿಟ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

‘ನನ್ನ ಪತಿ ಸಿ.ಪಿ.ಯೋಗೇಶ್ವರ್ ಅವರು ಚುನಾವಣೆಗೆ ಸ್ಪರ್ಧಿಸಿರುವ ಬೆನ್ನಲ್ಲೇ ನಮ್ಮ ಮಲಮಗಳಾದ ನಿಶಾ ಯೋಗೇಶ್ವರ್ ಸಾಮಾಜಿಕ ಜಾಲತಾ-ಣಗಳಲ್ಲಿ ನಮ್ಮ ಕುಟುಂಬದ ವಿರುದ್ಧ ಅವಹೇಳನಕಾರಿ, ಮಾನಹಾನಿಕಾರಕ, ಆಧಾರರಹಿತ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಸಂಬಂಧ ಬೆಂಗಳೂರಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಆಕ್ಷೇಪಿಸಿದ್ದಾರೆ.

ಅರ್ಜಿಯ ಮಧ್ಯಂತರ ಮನವಿಯನ್ನು ಪರಿಗಣಿಸಿರುವ ಹೈಕೋರ್ಟ್, ‘ಪ್ರತಿವಾದಿಗಳಾದ ಇನ್‌ಸ್ಟಾಗ್ರಾಂ, ಎಕ್ಸ್ ಕಾರ್ಪ್ (ಟ್ವಿಟರ್), ಯೂ–ಟ್ಯೂಬ್ ಜಾಲತಾಣಗಳಲ್ಲಿ ನಿಶಾ ಯೋಗೇಶ್ವರ್ ಅವರ ನಿಂದನಾತ್ಮಕ ಹೇಳಿಕೆಗಳನ್ನು ಅಪ್‌ಲೋಡ್ ಮಾಡಬಾರದು ಮತ್ತು ಈಗಾಗಲೇ ಪ್ರಸಾರ ಮಾಡಿದ ತುಣುಕುಗಳನ್ನು ತಡೆ ಹಿಡಿಯಬೇಕು’ ಎಂದು ಮಧ್ಯಂತರ ಆದೇಶ ನೀಡಿ, ವಿಚಾರಣೆ ಮುಂದೂಡಿದೆ.

‘ಭೂಕುಸಿತ: ಬಿಜೆಪಿ ರಾಜಕೀಯ’


ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಯನಾಡ್ ಜಿಲ್ಲೆಯ ಕೇಣಿಚ್ಚಿರದಲ್ಲಿ ಸೋಮವಾರ ರೋಡ್‌ಶೋ ನಡೆಸಿದರು –ಪಿಟಿಐ ಚಿತ್ರ

ವಯನಾಡ್ (ಪಿಟಿಐ): ವಯನಾಡ್‌ನಲ್ಲಿ ಜುಲೈ ತಿಂಗಳಲ್ಲಿ ಸಂಭವಿಸಿದ ಭೂಕುಸಿತ ದುರಂತವನ್ನು ಮುಂದಿಟ್ಟು ಬಿಜೆಪಿಯು ರಾಜಕೀಯ ಮಾಡುತ್ತಿದೆ ಎಂದು ಪ್ರಿಯಾಂಕಾ ಗಾಂಧಿ ವಾದ್ರಾ ಆರೋಪಿಸಿದ್ದಾರೆ.

ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಯುಡಿಎಫ್ ಅಭ್ಯರ್ಥಿಯಾಗಿರುವ ಪ್ರಿಯಾಂಕಾ ಅವರು ಸೋಮವಾರ ಸುಲ್ತಾನ್ ಬತ್ತೇರಿಯ ಕೇಣಿಚ್ಚಿರದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದರು.

‘ಭೂಕುಸಿತ ಸಂತ್ರಸ್ತರಿಗೆ ಅಗತ್ಯ ಪರಿಹಾರ ವಿತರಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಗಿದೆ’ ಎಂದು ಅವರು ದೂರಿದರು.

‘ಸಂಸತ್ತಿನಲ್ಲಿ ನಿಮ್ಮನ್ನು ಪ್ರತಿನಿಧಿಸಲು ಅವಕಾಶ ನೀಡಿದರೆ, ನಾನು ನಿಮಗಾಗಿ ಬೇರೆ ಎಲ್ಲರಿಗಿಂತಲೂ ಹೆಚ್ಚು ಕೆಲಸ ಮಾಡಬಲ್ಲೆ ಎಂಬುದನ್ನು ತೋರಿಸುತ್ತೇನೆ. ನಿಮ್ಮ ಸಮಸ್ಯೆಗಳನ್ನು ಸೂಕ್ತ ವೇದಿಕೆಯಲ್ಲಿ ಹೇಳುತ್ತೇನೆ. ನಿಮ್ಮ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರುತ್ತೇನೆ’ ಎಂದು ಭರವಸೆ ನೀಡಿದರು.

ಬಿಜೆಪಿಯು ನೈಜ ಸಮಸ್ಯೆಗಳಿಂದ ನಿಮ್ಮ ಗಮನವನ್ನು ಬೇರೆಡೆ ಸೆಳೆಯುತ್ತದೆ. ಏಕೆಂದರೆ ಅಧಿಕಾರದಲ್ಲಿ ಉಳಿಯುವುದೇ ಅದರ ಏಕೈಕ ಗುರಿ
ಪ್ರಿಯಾಂಕಾ ಗಾಂಧಿ ವಾದ್ರಾ
ಕಾಂಗ್ರೆಸ್ ಅಭ್ಯರ್ಥಿ

ಜಾರ್ಖಂಡ್ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಜನಾದೇಶವು ಕಾಂಗ್ರೆಸ್ ಪರ ಬರಲಿದೆ ಎಂಬ ವಿಶ್ವಾಸವಿದೆ
ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

‘ಬಿಜೆಪಿಯ ರಾಜಕೀಯ ಸಿದ್ಧಾಂತವು ದೇಶದಾದ್ಯಂತ ದ್ವೇಷವನ್ನು ಹರಡಿ, ಸಮಾಜದಲ್ಲಿ ವಿಭಜನೆ ಉಂಟುಮಾಡುತ್ತಿದೆ. ಜನರು ಎದು-ರಿಸುತ್ತಿರುವ ನೈಜ ಸಮಸ್ಯೆಗಳನ್ನು ಕಡೆ-ಗಣಿಸಲಾಗುತ್ತಿದ್ದು, ಅವರ ಸಂಕಷ್ಟ ಇನ್ನೂ ಬಗೆಹರಿದಿಲ್ಲ. ನಿರುದ್ಯೋಗದ ಪ್ರಮಾಣ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ ಹಾಗೂ ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರುತ್ತಿದೆ’ ಎಂದು ತಿಳಿಸಿದರು.

‘ಮಹಾರಾಷ್ಟ್ರ ಚುನಾವಣೆ: ಯಾವುದೇ ಪಕ್ಷ ಬೆಂಬಲಿಸುವುದಿಲ್ಲ’

ಜಾಲ್ನಾ (ಮಹಾರಾಷ್ಟ್ರ) (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿ ಅಥವಾ ಪಕ್ಷವನ್ನು ಬೆಂ-ಬಲಿಸುವುದಿಲ್ಲ ಎಂದು ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ತಿಳಿಸಿದ್ದಾರೆ. ನಾಮಪತ್ರ ವಾಪಸ್ ಪಡೆಯುವಂತೆ ಅವರು ತಮ್ಮ ಬೆಂಬಲಿಗರಿಗೆ ಸೂಚಿಸಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸದಿರುವ ಮತ್ತು ಯಾರನ್ನೂ ಬೆಂಬಲಿಸದೆ ಇರುವ ಜರಾಂಗೆ ಅವರ ನಿರ್ಧಾರ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಈ ಹಿಂದೆ, ಕೆಲವರನ್ನು ಬೆಂಬಲಿಸಲು ಅಥವಾ ವಿರೋಧಿಸಲು ಕೆಲವು ಕ್ಷೇತ್ರಗಳನ್ನು ಅವರು ಗುರುತಿಸಿಕೊಂಡಿದ್ದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಜರಾಂಗೆ, ‘ಯಾವುದೇ ಅಭ್ಯರ್ಥಿಯನ್ನು ಕಣಕ್ಕಿ-ಳಿಸದಿರಲು ವ್ಯಾಪಕ ಚರ್ಚೆಯ ನಂತರ ನಿರ್ಧ-ರಿಸಿದ್ದೇನೆ. ಯಾರನ್ನು ಸೋಲಿಸಬೇಕು ಮತ್ತು ಚುನಾಯಿಸಬೇಕು ಎಂಬುದನ್ನು ಮರಾಠ ಸಮುದಾಯ ನಿರ್ಧರಿಸಲಿದೆ. ನಾನು ಯಾವುದೇ ಅಭ್ಯರ್ಥಿ ಅಥವಾ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಿಲ್ಲ’ ಎಂದರು.


ಮನೋಜ್ ಜಾರಂಗೆ

ಆಡಳಿತಾರೂಢ ಮಹಾಯುತಿ ಅಥವಾ ವಿರೋಧ ಪಕ್ಷದ ಮಹಾ ವಿಕಾಸ ಆಘಾಡಿಯ (ಎಂವಿಎ) ಒತ್ತಡಕ್ಕೆ ಒಳಗಾಗಿಲ್ಲ. ‘ಮರಾಠ ಸಮುದಾಯದ ಒಳಿತನ್ನು ಗಮನದಲ್ಲಿಟ್ಟುಕೊಂಡು ಯಾರನ್ನು ಬೆಂಬಲಿಸಬೇಕು ಎಂಬುದನ್ನು ಸಮುದಾಯವು ನಿರ್ಧರಿಸಲಿದೆ’ ಎಂದಿದ್ದಾರೆ.

‘14 ಕ್ಷೇತ್ರಗಳಲ್ಲಿ ನಾವು ಸ್ಪರ್ಧಿಸಬೇಕಿತ್ತು. ಆದರೆ, ಬೆಂಬಲಿಗರು ಈವರೆಗೂ ಪಟ್ಟಿಯನ್ನೇ ತಲುಪಿಸಿಲ್ಲ. ಅಲ್ಲದೆ ನಾವು ಒಂದೇ ಸಮುದಾಯದ (ಮರಾಠ) ಮತಗಳಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ,’ ಎಂದು ಅವರು ಹೇಳಿದ್ದಾರೆ.

ಚುನಾವಣೆಯಿಂದ ಹಿಂದೆ ಸರಿಯುವುದನ್ನು ಬಿಟ್ಟರೆ ನಮಗೆ ಯಾವುದೇ ಆಯ್ಕೆಯಿಲ್ಲ. ‘ನಾನು ಅಭ್ಯರ್ಥಿಗಳಿಗೆ ನಾಮಪತ್ರ ವಾಪಸ್ ಪಡೆಯುವಂತೆ ಮನವಿ ಮಾಡುತ್ತೇನೆ. ನಮ್ಮ ಹೋರಾಟ (ಮರಾಠ ಮೀಸಲಾತಿ) ಚುನಾವಣೆ ಬಳಿಕವೂ ಮುಂದುವರಿಯುತ್ತದೆ’ ಎಂದು ಅವರು ಹೇಳಿದ್ದಾರೆ.

ಜಾರ್ಖಂಡ್ ಸರ್ಕಾರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

‘ನುಸುಳುಕೋರರ ಬೆಂಬಲಿಸುವ ಜೆಎಂಎಂ ಮೈತ್ರಿಕೂಟ’

ರಾಂಚಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜಾರ್ಖಂಡ್‌ನ ಜೆಎಂಎಂ ನೇತೃತ್ವದ ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದ್ದು, ಬಾಂಗ್ಲಾದೇಶದ ನುಸುಳುಕೋ-ರರನ್ನು ಬೆಂಬಲಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಗರ್ವಾ ಜಿಲ್ಲೆಯಲ್ಲಿ ಸೋಮವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು ಜಾರ್ಖಂಡ್‌ನ-ಲ್ಲಿರುವ ಮೈತ್ರಿಕೂಟವನ್ನು ‘ಒಳನು-ಸುಳುಕೋರರ ಮೈತ್ರಿಕೂಟ’ ಹಾಗೂ ‘ಮಾಫಿಯಾಗಳ ಗುಲಾಮ’ ಎಂದು ಲೇವಡಿ ಮಾಡಿದ್ದಾರೆ.

‘ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ನಾಯಕರು ಹಗರಣ ಮಾಡುವುದನ್ನೇ ತಮ್ಮ ಉದ್ಯಮವನ್ನಾಗಿಸಿಕೊಂಡಿದ್ದು, ಭ್ರಷ್ಟಾಚಾರವು ಗೆದ್ದಲಿನಂತೆ ಇಡೀ ರಾಜ್ಯವನ್ನು ಟೊಳ್ಳಾಗಿಸಿದೆ’ ಎಂದು ಟೀಕಿಸಿದರು.

‘ಜಾರ್ಖಂಡ್‌ನಲ್ಲಿ ತುಷ್ಟೀಕರಣ ರಾಜಕಾರಣವು ಅದರ ಪರಾಕಾಷ್ಠೆ ತಲುಪಿದ್ದು, ಜೆಎಂಎಂ ನೇತೃತ್ವದ ಸರ್ಕಾರವು ಬಾಂಗ್ಲಾದೇಶದ ನುಸುಳುಕೋರರಿಗೆ ಬೆಂಬಲ ನೀಡುವಲ್ಲಿ ನಿರತವಾಗಿದೆ. ಇದು ಹೀಗೆಯೇ ಮುಂದುವರಿದರೆ ರಾಜ್ಯದಲ್ಲಿ ಬುಡಕಟ್ಟು ಸಮುದಾಯದ ಜನಸಂಖ್ಯೆ ಕುಗ್ಗಲಿದೆ. ಇದರಿಂದ ಬುಡಕಟ್ಟು ಜನರಿಗೆ ಹಾಗೂ ದೇಶಕ್ಕೆ ಅಪಾಯವಿದೆ’ ಎಂದು ಎಚ್ಚರಿಸಿದರು.

‘ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಎಲ್ಲ ಮಿತಿಗಳನ್ನೂ ದಾಟಿವೆ. ಇದು ಬಡವರು, ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ಸಮುದಾಯಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಜಾರ್ಖಂಡ್ ಮುಖ್ಯಮಂತ್ರಿ, ಜೆಎಂಎಂ ನೇತೃತ್ವದ ಸರ್ಕಾರದ ಶಾಸಕರು ಮತ್ತು ಸಂಸದರು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ’ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರವು ವಿವಿಧ ಯೋಜನೆಗಳಿಗೆ ಮಂಜೂರು ಮಾಡಿರುವ ಸಾವಿರಾರು ಕೋಟಿ ರೂಪಾಯಿಗಳನ್ನು ಇಲ್ಲಿನ ಸರ್ಕಾರ ದುರುಪಯೋಗಪಡಿಸಿಕೊಂಡಿದೆ ಎಂದು ದೂರಿದರು.


ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲು ಜಾರ್ಖಂಡ್‌ನ ಗರ್ವಾ ಜಿಲ್ಲೆಗೆ ಬಂದ ಪ್ರಧಾನಿ ನರೇಂದ್ರ ಮೋದಿ ಬೆಂಬಲಿಗರತ್ತ ಕೈಬೀಸಿದರು –ಪಿಟಿಐ ಚಿತ್ರ

‘ವೋಟ್ ಬ್ಯಾಂಕ್ ರಾಜಕೀಯಕ್ಕೆ ಬಳಕೆ’

ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳು ಬಾಂಗ್ಲಾದೇಶದ ನುಸು-ಳುಕೋರರನ್ನು ‘ವೋಟ್ ಬ್ಯಾಂಕ್ ರಾಜಕೀಯ’ಕ್ಕೆ ಬಳಸಿಕೊಂಡಿವೆ ಎಂದು ಮೋದಿ ಆರೋಪಿಸಿದರು, ‘ಇದು ನುಸುಳುಕೋರರ ನೆಲೆಯನ್ನು ಸುಗಮಗೊಳಿಸುತ್ತದೆಯಲ್ಲದೆ, ರಾಜ್ಯದ ಸಾಮಾಜಿಕ ವ್ಯವಸ್ಥೆಗೆ ಅಪಾಯ ತಂದೊಡ್ಡುತ್ತದೆ’ ಎಂದರು.

‘ಶಾಲೆಗಳಲ್ಲಿ ಸರಸ್ವತಿ ವಂದನೆಗೆ ತಡೆಯೊಡ್ಡುತ್ತಾರೆ ಎಂದಾದರೆ, ನಮ್ಮ ಸಮಾಜಕ್ಕೆ ಎದುರಾಗಿರುವ ಬೆದರಿಕೆಯ ಮಟ್ಟ ಏನೆಂಬುದನ್ನು ನೀವು ಅರ್ಥಮಾಡಿಕೊಳ್ಳಬಹುದು. ದುರ್ಗಾಪೂಜೆಯಂತಹ ಹಬ್ಬಗಳ ಸಮಯದಲ್ಲಿ ಕರ್ಫ್ಯೂ ಹೇರುವುದು ಸಾಮಾನ್ಯವಾಗಿದೆ’ ಎಂದು ಟೀಕಿಸಿದರು.

ಬಡವರಿಗೆ ದ್ರೋಹ ಬಗೆದಿರುವ ಜೆಎಂಎಂ ನೇತೃತ್ವದ ಮೈತ್ರಿಕೂಟವು ಈ ಚುನಾವಣೆಯೊಂದಿಗೆ ಅಧಿಕಾರ ಕಳೆದುಕೊಳ್ಳುವುದು ಖಚಿತವಾಗಿದೆ
ನರೇಂದ್ರ ಮೋದಿ, ಪ್ರಧಾನಿ

‘ಮೋದಿ ಭೇಟಿ ನೀಡಿದ್ದರಲ್ಲಿ ತಪ್ಪಿಲ್ಲ’


ಚಂದ್ರಚೂಡ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗಣಪತಿ ಪೂಜೆಯಂದು ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದರಲ್ಲಿ ‘ಯಾವುದೇ ತಪ್ಪಿಲ್ಲ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದ್ದಾರೆ.

‘ಪ್ರಧಾನಿ ಅವರು ಗಣಪತಿ ಪೂಜೆಗಾಗಿ ನನ್ನ ನಿವಾಸಕ್ಕೆ ಬಂದಿದ್ದರು. ವಿವಿಧ ಕಾರ್ಯಕ್ರಮಗಳಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ನಿರಂತರ ಭೇಟಿ ಆಗುತ್ತಿರುವುದರಿಂದ ಅವರ ಈ ಭೇಟಿಯಲ್ಲಿ ಯಾವುದೇ ತಪ್ಪಿಲ್ಲ. ನಾವು ರಾಷ್ಟ್ರಪತಿ ಭವನ, ಗಣರಾಜ್ಯೋತ್ಸವ ಸಮಾರಂಭ... ಹೀಗೆ ವಿವಿಧೆಡೆ ಪರಸ್ಪರ ಭೇಟಿಯಾಗುತ್ತೇವೆ. ಪ್ರಧಾನಿ ಮತ್ತು ಇತರ ಸಚಿವರೊಂದಿಗೆ ಮಾತುಕತೆ ನಡೆಸುತ್ತೇವೆ. ಇಂತಹ ಮಾತುಕತೆಯ ಸಂದರ್ಭದಲ್ಲಿ ನಾವು ವಿಚಾರಣೆ ನಡೆಸುತ್ತಿರುವ ಪ್ರಕರಣಗಳ ಬಗ್ಗೆ ಚರ್ಚೆಯಾಗುವುದಿಲ್ಲ’ ಎಂದು ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

‘ಸ್ವತಂತ್ರ ನ್ಯಾಯಾಂಗವೆಂದರೆ, ಸರ್ಕಾರದ ವಿರುದ್ಧವೇ ಸದಾ ತೀರ್ಪು ಪ್ರಕಟಿಸುವುದು ಎಂದೇನೂ ಅಲ್ಲ. ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಒತ್ತಡ ಹೇರುವ ಮೂಲಕ ತಮ್ಮ ಅನುಕೂಲಕ್ಕೆ ತಕ್ಕಂತೆ ತೀರ್ಪು ಬರುವಂತೆ ಮಾಡಲು ಕೆಲವು ಗುಂಪುಗಳು ಯತ್ನಿಸುತ್ತಿವೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮಸ್ಥರ ಕಲ್ಲೇಟಿಗೆ ಹುಲಿ ಸಾವು

ಜೈಪುರ (ಪಿಟಿಐ): ವ್ಯಕ್ತಿಯೊಬ್ಬರ ಮೇಲೆ ದಾಳಿ ಎಸಗಿ ಅವರನ್ನು ಸಾಯಿಸಿದ್ದ 12 ವರ್ಷದ ಹುಲಿಯೊಂದನ್ನು ಉಲಿಯಾನಾ ಗ್ರಾಮಸ್ಥರು ಕಲ್ಲೆಸೆದು ಕೊಂದಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಟಿ– 86 ಎಂದು ಗುರುತಿಸಲಾದ ಹುಲಿಯ ಕಳೇಬರವು ರಾಜಸ್ಥಾನದ ರಣಥಂಬೋರ್ ಹುಲಿ ರಕ್ಷಿತಾರಣ್ಯ ಸಮೀಪದ ಉಲಿಯಾನಾದಲ್ಲಿ ಭಾನುವಾರ ಪತ್ತೆಯಾಗಿದೆ. ಮತ್ತೊಂದು ಹುಲಿಯೊಂದಿಗೆ ನಡೆದ ಕಾಳಗದಲ್ಲಿ ಇದು ಗಾಯಗೊಂಡಿದ್ದು, ಅರಣ್ಯ ಇಲಾಖೆಯ ಮೇಲ್ವಿಚಾರಣೆಯಲ್ಲಿತ್ತು ಎಂದು ಹೇಳಿದ್ದಾರೆ.

‘ರಕ್ಷಿತಾರಣ್ಯ ಸಮೀಪದ ಉಲಿಯಾನಾ ಗ್ರಾಮದಲ್ಲಿ ಭರತ್ ಲಾಲ್ ಮೀನಾ (51) ಎಂಬುವರು ಶನಿವಾರ ಆಡುಗಳನ್ನು ಮೇಯಿಸು-ತ್ತಿದ್ದಾಗ ಹುಲಿಯು ದಾಳಿ ಮಾಡಿದೆ. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಭಾನುವಾರ ಮಧ್ಯಾಹ್ನ ಗ್ರಾಮಸ್ಥರು ಸ್ಥಳಕ್ಕೆ ಬಂದಾಗಲೂ ಶವದ ಪಕ್ಕದಲ್ಲೇ ಕುಳಿತಿದ್ದ ಅದು ಗರ್ಜಿಸುತ್ತಿತ್ತು’ ಎಂದು ಕೋಟ್ವಾಲಿ ಠಾಣಾಧಿಕಾರಿ ರಾಜ್‌ವೀರ್ ಸಿಂಗ್ ತಿಳಿಸಿದರು.

ದೆಹಲಿ ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

‘ಪಟಾಕಿ: ಶಾಶ್ವತ ನಿಷೇಧ ಪರಿಗಣಿಸಿ’

ಪ್ರಜಾವಾಣಿ ವಾರ್ತೆ

‘ಸುಪ್ರೀಂ’ ಸುದ್ದಿಗಳು

ನವದೆಹಲಿ: ದೀಪಾವಳಿ ನಂತರ ದೆಹಲಿಯಲ್ಲಿ ವಾಯುಮಾಲಿನ್ಯ ಕಳವಳಕಾರಿ ಮಟ್ಟ ತಲುಪಿದ ಬೆನ್ನಲ್ಲೇ, ದೆಹಲಿಯಲ್ಲಿ ಶಾಶ್ವತವಾಗಿ ಪಟಾಕಿ ನಿಷೇಧ ಮಾಡುವ ವಿಷಯವನ್ನು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ದೆಹಲಿ ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಗೆ ತಿಳಿಸಿದೆ.

ದೆಹಲಿಯಲ್ಲಿ ಪಟಾಕಿ ನಿಷೇಧ ಜಾರಿ ಆಗದಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು, ‘ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘನೆ ಆಗಿದೆ ಎಂಬುದು ಸ್ಪಷ್ಟವಾಗಿದೆ. ಜತೆಗೆ ದೀಪಾವಳಿ ಸಮಯದಲ್ಲಿ ಕೃಷಿ ತ್ಯಾಜ್ಯ ಸುಡುವುದೂ ಹೆಚ್ಚಾಗಿದೆ’ ಎಂದು ಬೇಸರ ವ್ಯಕ್ತಪಡಿಸಿತು.

ವಾರದಲ್ಲಿ ವರದಿ ಸಲ್ಲಿಸಲು ನಿರ್ದೇಶನ: ಈ ವರ್ಷ ದೀಪಾವಳಿ ಸಮಯದಲ್ಲಿ ದೆಹಲಿಯಲ್ಲಿ ಪಟಾಕಿ ನಿಷೇಧ ಜಾರಿಗೆ ತರಲು ತೆಗೆದುಕೊಂಡ ಕ್ರಮಗಳು ಮತ್ತು ಭವಿಷ್ಯದಲ್ಲಿ ತೆಗೆದುಕೊಳ್ಳುವ ಕ್ರಮಗಳ ಕುರಿತು ವಾರದೊಳಗೆ ವರದಿ ಸಲ್ಲಿಸುವಂತೆ ಪೀಠವು, ದೆಹಲಿ ಸರ್ಕಾರ ಮತ್ತು ದೆಹಲಿ ಪೊಲೀಸ್ ಕಮಿಷನರ್‌ಗೆ ನಿರ್ದೇಶನ ನೀಡಿತು. ಎಂ.ಸಿ.ಮೆಹ್ತಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

ದೆಹಲಿಯ ಕೆಲ ಭಾಗಗಳಲ್ಲಿ ಗಾಳಿಯ ಗುಣಮಟ್ಟ ತೀವ್ರ ಕುಸಿತವಾಗಿದ್ದು, ಅಪಾಯಕಾರಿ ಪಿ.ಎಂ (ಪರ್ಟಿಕ್ಯುಲೇಟ್ ಮ್ಯಾಟರ್) 2.5 ಕಣಗಳು ಹೆಚ್ಚಾಗಿವೆ. ಇದರಿಂದ ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಮತ್ತು ವಿವಿಧ ಬಗೆಯ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ.

ಕಳೆದ ಎರಡು ವರ್ಷಗಳ ದೀಪಾವಳಿ ಸಮಯದಲ್ಲಿ ಮಾಲಿನ್ಯದ ಪ್ರಮಾಣ ಪಿ.ಎಂ 2.5ಗೆ ಹೋಲಿಸಿದರೆ ಈ ವರ್ಷದ ದೀಪಾವಳಿ ಮಧ್ಯರಾತ್ರಿಯ ಮಾಲಿನ್ಯದ ಪ್ರಮಾಣ ಶೇ 13ರಷ್ಟು ಅಧಿಕವಾಗಿದೆ. 2022ರ ದೀಪಾವಳಿ ಆಚರಣೆಗೆ ಹೋಲಿಸಿದರಂತೂ ಈ ವರ್ಷ ರಾತ್ರಿ ಪಿ.ಎಂ 2.5 ಮಟ್ಟ ಶೇ 34ರಷ್ಟು ಅಧಿಕ ಇರುವುದು ಸಿಎಸ್‌ಇ ಶನಿವಾರ ಬಿಡುಗಡೆ ಮಾಡಿದ ವರದಿಯಿಂದ ಗೊತ್ತಾಗಿದೆ.



ಈ ವರದಿಯನ್ನು ಗಮನಿಸಿದ ಪೀಠವು, ವಾಯು ಗುಣಮಟ್ಟವು ಸಾರ್ವಕಾಲಿಕ ಕುಸಿತ ಕಂಡಿದೆ. 2022 ಮತ್ತು 2023ಕ್ಕಿಂತಲೂ ಕುಸಿತ ಪ್ರಮಾಣ ತೀವ್ರವಾಗಿದೆ ಎಂದು ತಿಳಿಸಿತು.

‘ದೆಹಲಿ ಸರ್ಕಾರವು ಪಟಾಕಿ ನಿಷೇಧ ಜಾರಿಗೆ ಸಂಬಂಧಿಸಿದಂತೆ ಹೊರಡಿಸಿದ ಆದೇಶಗಳೂ ಸೇರಿದಂತೆ ತೆಗೆದುಕೊಂಡ ಪ್ರತಿ ಕ್ರಮಗಳ ಕುರಿತ ಪ್ರಮಾಣ ಪತ್ರ ಸಲ್ಲಿಸುವಂತೆ’ ಪೀಠ ಸೂಚಿಸಿತು.

ಪಂಜಾಬ್, ಹರಿಯಾಣಕ್ಕೂ ನಿರ್ದೇಶನ: ಹಿಂದಿನ 10 ದಿನಗಳಲ್ಲಿ ಕೃಷಿ ತ್ಯಾಜ್ಯಗಳನ್ನು ಸುಟ್ಟ ಮಾಹಿತಿಯನ್ನು ಒಳಗೊಂಡ ಪ್ರಮಾಣ ಪತ್ರ ಸಲ್ಲಿಸುವಂತೆ ಪೀಠವು ಹರಿಯಾಣ ಮತ್ತು ಪಂಜಾಬ್ ಸರ್ಕಾರಗಳಿಗೂ ನಿರ್ದೇಶನ ನೀಡಿ, ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

ಮುಂದಿನ ಕೆಲ ತಿಂಗಳಲ್ಲಿ ಬರಲಿರುವ ವಿವಾಹ ಋತುವಿನಲ್ಲೂ ಪಟಾಕಿ ನಿಷೇಧವನ್ನು ವಿಸ್ತರಿಸಬೇಕು ಎಂದು ವಕೀಲರು ಸಲಹೆ ನೀಡಿದರು. ‘ಇತರ ಹಬ್ಬಗಳ ಸಂದರ್ಭ, ಮದುವೆಗಳು, ಚುನಾವಣೆಗಳ ಸಮಯದಲ್ಲೂ ಇದನ್ನು ಜಾರಿಗೆ ತರಲು ನಾವೂ ಬಯಸುತ್ತೇವೆ ಮತ್ತು ಪ್ರಸ್ತಾಪಿಸುತ್ತೇವೆ. ಆದರೆ ಅದಕ್ಕೂ ಮುನ್ನ, ಈ ಕುರಿತು ಹೊರಡಿಸಲಾದ ಆದೇಶಗಳ ಸ್ವರೂಪವನ್ನು ನೋಡ ಬಯಸುತ್ತೇವೆ’ ಎಂದು ಪೀಠ ಹೇಳಿತು.

ಪಟಾಕಿ ನಿಷೇಧವು ದೆಹಲಿ ಎನ್‌ಸಿಆರ್ ವ್ಯಾಪ್ತಿಯಲ್ಲಿ ಜಾರಿಯಾಗಿಲ್ಲ ಎಂಬ ಸುದ್ದಿಗಳು ವ್ಯಾಪಕವಾಗಿ ಬಿತ್ತರವಾಗಿವೆ ಎಂದ ಪೀಠ, ಪಟಾಕಿಗಳ ಬಳಕೆಯನ್ನು ನಿಷೇಧಿಸುವ ಕಾರ್ಯ-ವಿಧಾನವನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಒತ್ತಿ ಹೇಳಿತು. ಅಲ್ಲದೆ ಕನಿಷ್ಠ ಮುಂದಿನ ವರ್ಷವಾದರೂ (2025) ವಾಯುಮಾಲಿನ್ಯ ತಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿತು.

ಸೇತುವೆ ಕುಸಿತ ಕುರಿತ ಅರ್ಜಿ ವಿಚಾರಣೆಗೆ ಅಸ್ತು

ಬಿಹಾರದಲ್ಲಿ ಹಲವು ಸೇತುವೆಗಳು ಏಕಾಏಕಿ ಕುಸಿದ ಬಗ್ಗೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ.

ಅರ್ಜಿದಾರರ ಪರ ವಕೀಲ ಬ್ರಜೇಶ್ ಸಿಂಗ್, ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿಗಳಿಗೆ ಸೋಮವಾರ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಚಂದ್ರಚೂಡ್ ಅವರು, ‘ಈ ಬಗ್ಗೆ ಪರಿಶೀಲಿಸಲಾಗುವುದು’ ಎಂದರು. ತಮ್ಮ ಕಚೇರಿಗೆ ಅರ್ಜಿ ಸಂಬಂಧ ಇ–ಮೇಲ್ ಕಳು-ಹಿಸಲಾಗಿದೆಯೇ ಎಂದು ಖಚಿತಪಡಿಸಿಕೊಂಡರು.

ಸಿಜೆಐ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠವು ಈ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುವಂತೆ ಬಿಹಾರ ಸರ್ಕಾರ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಜುಲೈ 29ರಂದು ಸೂಚಿಸಿತ್ತು. ಬಿಹಾರದ ಲೋಕೋಪಯೋಗಿ ಸಚಿವಾಲಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಸಚಿವಾಲಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೂ ಈ ಬಗ್ಗೆ ಪ್ರತಿಕ್ರಿಯಿಸುವಂತೆ ಹೇಳಿತ್ತು.

ಡಿಕೆಶಿ ಪ್ರಕರಣ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ


ಶಿವಕುಮಾರ್

ನವದೆಹಲಿ: ಆದಾಯ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ಸಲ್ಲಿಸಿರುವ ವಿಶೇಷ ಮೇಲ್ಮನವಿಯ ಅರ್ಜಿ ವಿಚಾರಣೆಯನ್ನು ನಾಲ್ಕು ವಾರಗಳ ನಂತರ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಕಾಂಗ್ರೆಸ್ ಸರ್ಕಾರದ ಕ್ರಮ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಯತ್ನಾಳ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾನ್ ಪೀಠವು ಮುಂದೂಡಿತು. ಆಗ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಹೈಕೋರ್ಟ್ ಆದೇಶದ ವಿರುದ್ಧ ಸಿಬಿಐ ಸಹ ಮೇಲ್ಮನವಿ ಸಲ್ಲಿಸಿದೆ. ಆದರೆ, ಈ ಮೇಲ್ಮನವಿಯನ್ನು ಇನ್ನೂ ಪಟ್ಟಿ ಮಾಡಲಾಗಿಲ್ಲ. ಎರಡು ಅರ್ಜಿಗಳನ್ನು ಒಟ್ಟಿಗೆ ಆಲಿಸಬೇಕು’ ಎಂದು ಮನವಿ ಮಾಡಿದರು. ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ಶಿವಕುಮಾರ್ ಪರ ವಕೀಲ ರಂಜಿತ್ ಕುಮಾರ್ ಕೋರಿದರು.

ಸಂಕ್ಷಿಪ್ತ ಸುದ್ದಿ

‘ಪ್ರತಿ ವಾರವೂ ಉತ್ತರ ಪ್ರದೇಶಕ್ಕೆ ಬರಬೇಕಾಗಿಲ್ಲ’


ಸಿದ್ದೀಕ್ ಕಪ್ಪನ್

ನವದೆಹಲಿ (ಪಿಟಿಐ): ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಪ್ರಕರಣ ಎದುರಿಸುತ್ತಿರುವ ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಉತ್ತರ ಪ್ರದೇಶದ ಪೊಲೀಸ್ ಠಾಣೆಗೆ ಪ್ರತಿ ವಾರವೂ ಹಾಜರಾಗಬೇಕು ಎಂಬ ಷರತ್ತನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದು ಮಾಡಿದೆ.

2022ರ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಕಪ್ಪನ್ ಅವರಿಗೆ ಜಾಮೀನು ನೀಡಿತ್ತು ಹಾಗೂ ಇದಕ್ಕೆ ಹಲವಾರು ಕಠಿಣ ಷರತ್ತುಗಳನ್ನು ವಿಧಿಸಿತ್ತು. ಕೇರಳ ಮಲಪ್ಪುರದಿಂದ ಪ್ರತಿ ವಾರವೂ ಉತ್ತರ ಪ್ರದೇಶದ ಠಾಣೆಗೆ ಹಾಜರಾಗುವ ಷರತ್ತನ್ನು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠವು ರದ್ದು ಮಾಡಿದೆ.

‘ಕಪ್ಪನ್ ಅವರ ಇನ್ನುಳಿದ ಬೇಡಿಕೆಗಳನ್ನು ಪ್ರತ್ಯೇಕವಾಗಿ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ’ ಎಂದು ಪೀಠ ಹೇಳಿತು.

2020ರ ಸೆಪ್ಟೆಂಬರ್‌ನಲ್ಲಿ ಹಾಥರಸ್‌ನಲ್ಲಿ ದಲಿತ ಬಾಲಕಿ ಮೇಲೆ ಅತ್ಯಾಚಾರ ನಡೆದಿದ್ದು, 2 ವಾರಗಳ ಬಳಿಕ ಬಾಲಕಿ ಮೃತಪಟ್ಟಿದ್ದಳು.

ಈ ಪ್ರಕರಣದ ವರದಿಗಾರಿಗೆಗಾಗಿ ಕಪ್ಪನ್ ಅವರು 2020ರಲ್ಲಿ ತೆರಳಿದ್ದರು. ಈ ವೇಳೆ ಅವರನ್ನು ಬಂಧಿಸಲಾಗಿತ್ತು. 2023ರಲ್ಲಿ ಅವರು ಬಿಡುಗೊಂಡಿದ್ದರು.

ಯೋಗಿಗೆ ಬೆದರಿಕೆ ಸಂದೇಶ: ಮಹಿಳೆ ಬಿಡುಗಡೆ

ಮುಂಬೈ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಜೀವ ಬೆದರಿಕೆಯ ಸಂದೇಶ ಕಳುಹಿಸಿದ್ದಕ್ಕಾಗಿ ಬಂಧಿಸಿದ್ದ ಫಾತಿಮಾ ಖಾನ್ ಅವರನ್ನು (24) ವಿಚಾರಣೆ ನಡೆಸಿ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಠಾಣೆ ಜಿಲ್ಲೆಯ ಉಲ್ಹಾಸನಗರದ ವಾಸಿ ಹಾಗೂ ಮಾಹಿತಿ ತಂತ್ರಜ್ಞಾನ (ಐಟಿ) ಪದವೀಧರೆ ಆಗಿರುವ ಈಕೆಯನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದರು.

ವಿಚಾರಣೆಗಾಗಿ ಮುಂಬೈಗೆ ಕರೆತಂದು ನೋಟಿಸ್ ನೀಡಲಾಗಿತ್ತು. ಭಾನುವಾರ ತಡರಾತ್ರಿ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆಗ್ರಾ: ತರಬೇತಿ ವೇಳೆ ಯುದ್ಧವಿಮಾನ ಪತನ

ಆಗ್ರಾ/ನವದೆಹಲಿ (ಪಿಟಿಐ): ಭಾರತೀಯ ವಾಯಪಡೆಗೆ ಸೇರಿದ ಮಿಗ್–29 ಯುದ್ಧವಿಮಾನವು ಉತ್ತರಪ್ರದೇಶದ ಆಗ್ರಾದಲ್ಲಿ ಸೋಮವಾರ ಪತನಗೊಂಡಿದೆ.

‘ವಾಯುನೆಲೆಯಲ್ಲಿ ದೈನಂದಿನ ತರಬೇತಿ ವೇಳೆ ಅವಘಡ ನಡೆದಿದ್ದು, ಪೈಲಟ್‌ಗೆ ಯಾವುದೇ ತೊಂದರೆಯಾಗಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ತಾಂತ್ರಿಕ ದೋಷದಿಂದಾಗಿ ಅವಘಡ ಸಂಭವಿಸಿದ್ದು, ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ’ ಎಂದು ಐಎಎಫ್ ‘ಎಕ್ಸ್’ ಮೂಲಕ ಮಾಹಿತಿ ನೀಡಿದೆ.

ಪತನಗೊಂಡಿರುವ ವಿಮಾನಕ್ಕೆ ಬೆಂಕಿ ಹತ್ತಿಕೊಂಡ ಪರಿಣಾಮ ಸುತ್ತಮುತ್ತ ದಟ್ಟ ಹೊಗೆ ಆವರಿಸಿರುವ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣ-ಗಳಲ್ಲಿ ಹರಿದಾಡುತ್ತಿದೆ.

24 ಮಂದಿಗೆ ಗಾಯ: ನಾಲ್ವರ ಸ್ಥಿತಿ ಗಂಭೀರ • ಇಬ್ಬರು ಸಾರಿಗೆ ಅಧಿಕಾರಿಗಳ ಅಮಾನತು

ಕಂದಕಕ್ಕೆ ಉರುಳಿದ ಬಸ್: 36 ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಮರ್ಚುಲಾ (ಪಿಟಿಐ): ಉತ್ತರಾಖಂಡದ ಅಲ್ಮೋಡಾ ಜಿಲ್ಲೆಯ ಮರ್ಚುಲಾದಲ್ಲಿ ಸೋಮವಾರ ಖಾಸಗಿ ಬಸ್‌ವೊಂದು 200 ಮೀಟರ್ ಆಳದ ಕಂದಕ್ಕೆ ಉರುಳಿದ ಪರಿಣಾಮ 10 ಮಂದಿ ಮಹಿಳೆಯರು ಸೇರಿ ಒಟ್ಟು 36 ಪ್ರಯಾಣಿಕರು ಮೃತಪಟ್ಟಿದ್ದು, 24 ಮಂದಿಗೆ ಗಾಯಗಳಾಗಿವೆ.

24 ಗಾಯಾಳುಗಳು ಪೈಕಿ ನಾಲ್ವರ ಸ್ಥಿತಿ ಗಂಭೀರವಾಗಿದೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಂಭವವಿದೆ ಎನ್ನ-ಲಾಗುತ್ತಿದೆ. ‘ಗಾಡಿವಾಲಾ ಮೋಟರ್ ಓನರ್ ಅಸೋಸಿಯೇಷನ್’ ಎಂಬ ಖಾಸಗಿ ಸಂಸ್ಥೆಗೆ ಸೇರಿದ ಬಸ್ ಇದಾಗಿದ್ದು, ಎಲ್ಲ ಪ್ರಯಾಣಿಕರು ದೀಪಾವಳಿ ಹಬ್ಬದ ರಜೆ ಮುಗಿಸಿ ಉದ್ಯೋಗ ಸ್ಥಳಕ್ಕೆ ಮರಳು-ತ್ತಿದ್ದರು.

‘ಗಾಯಾಳುಗಳನ್ನು ರಾಮ್‌ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯ ಸ್ಥಿತಿ ಗಂಭೀರವಾಗಿರುವ ನಾಲ್ವರಲ್ಲಿ ಮೂವರನ್ನು ಹೆಲಿಕಾಪ್ಟರ್ ಮೂಲಕವಾಗಿ ಏಮ್ಸ್‌ಗೆ ದಾಖಲಿಸಲಾಗಿದೆ. ಒಬ್ಬರನ್ನು ಹಲ್ದಾವಾನಿ ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅಲ್ಮೋಡಾದ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ವಿನೀತ್ ಪೌಲ್ ಮಾಹಿತಿ ನೀಡಿದರು.

ಇಂಥ ದುಃಖದ ಸಮಯದಲ್ಲಿ ಪಕ್ಷವು ಸಂತ್ರಸ್ತರ ಕುಟುಂಬದವರೊಂದಿಗೆ ನಿಲ್ಲುತ್ತದೆ. ಪಕ್ಷದ ಕಾರ್ಯಕರ್ತರು ಎಲ್ಲ ಸಹಕಾರ ಹಾಗೂ ಸೇವೆಯನ್ನು ಮಾಡಬೇಕು
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ


ರಿಷಿಕೇಶ್ ಎನ್ನುವ ಗಾಯಾಳುವನ್ನು ಹೆಲಿಕಾಪ್ಟರ್ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದೊಯ್ಯಲಾಯಿತು

‘ಗಾಡಿವಾಲಾ ಜಿಲ್ಲೆಯ ಪೌಡಿ ಎಂಬಲ್ಲಿಂದ ಕುಮಾವೊ ಜಿಲ್ಲೆಯ ರಾಮ್‌ನಗರಕ್ಕೆ ಬಸ್ ತೆರಳುತ್ತಿತ್ತು. ಪೌಡಿಯಿಂದ ರಾಮ್‌ನಗರಕ್ಕೆ 250 ಕಿ.ಮೀ ದೂರವಿದೆ. ಭಾನುವಾರ ರಾತ್ರಿ ಪೌಡಿಯಿಂದ ಬಸ್ ಹೊರಟಿತ್ತು. ಸೋಮವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ರಾಮ್‌ನಗರಕ್ಕೆ ಇನ್ನು 35 ಕಿ.ಮೀ ದೂರವಿತ್ತು’ ಎಂದರು.

ಕಂದಕವು ದಟ್ಟ ಮರಗಳಿಂದ ಹಾಗೂ ಬಂಡೆಗಳಿಂದ ಕೂಡಿತ್ತು. ಆದ್ದರಿಂದ, ಬಿದ್ದ ರಭಸಕ್ಕೆ ಬಸ್ ಸಂಪೂರ್ಣ ಜಖಂಗೊಂಡಿದೆ. ಕಂದಕದ ಬುಡದಲ್ಲಿ ನದಿಯೊಂದು ಹರಿಯುತ್ತದೆ. ನದಿಗೆ 10 ಮೀಟರ್ ದೂರದಲ್ಲಿ ಬಸ್ ಬಿದ್ದಿದೆ. ಅವಘಡದ ಕುರಿತು ತಿಳಿಯು-ತ್ತಿದ್ದಂತೆಯೇ ಸ್ಥಳೀಯರೇ ಮೊದಲು ರಕ್ಷಣಾ ಕಾರ್ಯ ಆರಂಭಿಸಿದ್ದಾರೆ. ನಂತರ ಪೊಲೀಸರು, ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಹಾಗೂ ಶೋಧ ಕಾರ್ಯದಲ್ಲಿ ತೊಡಗಿದರು.

ಅಪಘಾತ ಸಂಭವಿಸಿದ್ದು ಹೇಗೆ?: ಕಡಿದಾದ ತಿರುವಿನಲ್ಲಿ ಸಂಚರಿಸುತ್ತಿದ್ದ ವೇಳೆ ಮರವೊಂದಕ್ಕೆ ಬಸ್ ಗುದ್ದಿದೆ. ಮರಕ್ಕೆ ಗುದ್ದಿದ ರಭಸಕ್ಕೆ ಪ್ರಯಾಣಿಕರು ಬಸ್‌ನಿಂದ ಹಾರಿ ಬಿದ್ದಿದ್ದಾರೆ. ನಂತರ, ಕಂದಕ್ಕೆ ಉರುಳಿ ನದಿಯ ಹತ್ತಿರ ಬಸ್ ಬಿದ್ದಿದೆ. ‘ಸ್ಥಳದಲ್ಲಿಯೇ ಹಲವು ಪ್ರಯಾಣಿಕರು ಮೃತಪಟ್ಟಿದ್ದರು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

ತನಿಖೆಗೆ ಆದೇಶ: ಪೌಡಿ ಹಾಗೂ ಅಲ್ಮೋಡಾದ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಜೊತೆಗೆ, ಘಟನೆ ಕುರಿತು ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಲಾಗಿದೆ.

43 ಸೀಟಿನ ಬಸ್‌ನಲ್ಲಿ 60 ಪ್ರಯಾಣಿಕರು

‘ಬಸ್‌ನ ಸೀಟಿನ ಸಾಮರ್ಥ್ಯ 43 ಸೀಟುಗಳು. ಆದರೆ, ಅವಘಡ ಸಂಭವಿಸಿದ ಸಂದರ್ಭದಲ್ಲಿ ಬಸ್‌ನಲ್ಲಿ 60 ಮಂದಿ ಪ್ರಯಾಣಿಕರು ಇದ್ದರು. ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದುದೇ ಅವಘಡಕ್ಕೆ ಕಾರಣ ಇರಬಹುದು’ ಎಂದು ಅಲ್ಮೋಡಾದ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ವಿನೀತ್ ಪೌಲ್ ಹೇಳಿದರು. ಮೂಲಗಳ ಪ್ರಕಾರ, ‘ಕಂದಕಕ್ಕೆ ಉರುಳಿದ ಬಸ್ ಬಹಳ ಹಳೆಯದ್ದಾಗಿತ್ತು. ಗುಡ್ಡಗಾಡು ಪ್ರದೇಶಗಳಲ್ಲಿ ಸಂಚರಿಸುವ ಸಾಮರ್ಥ್ಯ ಈ ಬಸ್‌ಗೆ ಇರಲಿಲ್ಲ’.

ಪರಿಹಾರ ಘೋಷಣೆ

ಘಟನೆ ಕುರಿತು ಖೇದ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮೃತರ ಕುಟುಂಬಗಳಿಗೆ ₹2 ಲಕ್ಷ ಹಾಗೂ ಗಾಯಾಳುಗಳಿಗೆ ₹ 50 ಸಾವಿರ ಪರಿಹಾರ ಘೋಷಿಸಿದ್ದಾರೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಕೂಡ ಮೃತ ಕುಟುಂಬಗಳಿಗೆ ₹4 ಲಕ್ಷ ಹಾಗೂ ಗಾಯಾಳುಗಳಿಗೆ ₹1 ಲಕ್ಷ ಪರಿಹಾರ ಘೋಷಿಸಿದ್ದಾರೆ.


ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿ ಹಾಗೂ ಸಾರ್ವಜನಿಕರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು –ಎಎಫ್‌ಪಿ ಚಿತ್ರ

ವಕ್ಫ್ ಸಮಿತಿ ಅಧ್ಯಕ್ಷ ಪಾಲ್ ಏಕಪಕ್ಷೀಯ ಕ್ರಮ

ವಿಪಕ್ಷಗಳ ಸಂಸದರ ಆರೋಪ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸುತ್ತಿರುವ ಸಂಸದೀಯ ಸಮಿತಿಯಲ್ಲಿನ ವಿರೋಧ ಪಕ್ಷಗಳ ಸಂಸದರು ಮಂಗಳವಾರ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ, ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರ ‘ಏಕಪಕ್ಷೀಯ’ ನಿರ್ಧಾರಗಳನ್ನು ಖಂಡಿಸಿ ಪ್ರತಿಭಟಿಸಲು ನಿರ್ಧರಿಸಿದ್ದಾರೆ. ತಮ್ಮ ಅಭಿಪ್ರಾಯಗಳಿಗೆ ಮನ್ನಣೆ ಸಿಗದಿದ್ದರೆ ಸಮಿತಿಯಿಂದ ಹೊರಬರುವ ಸೂಚನೆಯನ್ನು ಈ ಮೂಲಕ ನೀಡಿದ್ದಾರೆ.

ಸಮಿತಿಯ ಕಲಾಪದಲ್ಲಿ ತಮ್ಮ ಧ್ವನಿಯನ್ನು ಅಡಗಿಸಲಾಗಿದೆ ಎಂದು ಪ್ರತಿಪಾದಿಸಿದ ಸಂಸದರು, ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಸ್ತಾವಿತ ಕಾನೂನಿನ ವಿರುದ್ಧದ ತಮ್ಮ ಆಕ್ಷೇಪಣೆಗಳ ಪಟ್ಟಿ ಮಾಡಿದ್ದಾರೆ.

ಕಾಂಗ್ರೆಸ್‌ನ ಮೊಹಮ್ಮದ್ ಜಾವೇದ್ ಮತ್ತು ಇಮ್ರಾನ್ ಮಸೂದ್, ಡಿಎಂಕೆಯ ರಾಜಾ, ಎಐಎಂಐಎಂನ ಅಸಾದುದ್ದೀನ್ ಒವೈಸಿ, ಎಎಪಿಯ ಸಂಜಯ್ ಸಿಂಗ್ ಮತ್ತು ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಸೇರಿ ಹಲವು ಸಂಸದರು ಸಹಿ ಮಾಡಿ ಜಂಟಿ ಪತ್ರವನ್ನು ಸಿದ್ಧ-ಪಡಿಸಿದ್ದಾರೆ. ಈ ಪತ್ರವನ್ನು ಮಂಗಳವಾರ ಸ್ಪೀಕರ್‌ಗೆ ಸಲ್ಲಿಸಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯ ಸಂಸದ ಪಾಲ್ ಅವರು ಸಮಿತಿಯ ಸಭೆಗಳ ದಿನಾಂಕ ನಿಗದಿಪಡಿಸು-ವಲ್ಲಿ ಮತ್ತು ಸಭೆಗೆ ಯಾರನ್ನು ಆಹ್ವಾನಿಸಬೇಕು ಎನ್ನುವ ವಿಷಯದಲ್ಲಿ ಏಕಪಕ್ಷೀಯ ನಿರ್ಧಾರ-ಗಳನ್ನು ತೆಗೆದುಕೊಂಡಿದ್ದಾರೆ ಎಂದು ಪತ್ರದಲ್ಲಿ ಹೇಳಿದ್ದಾಗಿ ಮೂಲಗಳು ಹೇಳಿವೆ.

ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಿತಿಯ ಸದಸ್ಯರೊಂದಿಗೆ ಔಪಚಾರಿಕ ಸಮಾಲೋಚನೆ ನಡೆಸುವಂತೆ ಪಾಲ್ ಅವರಿಗೆ ನಿರ್ದೇಶಿಸುವಂತೆ ವಿರೋಧ ಪಕ್ಷದ ಸಂಸದರು ಬಿರ್ಲಾ ಅವರನ್ನು ಒತ್ತಾಯಿಸಲಿದ್ದಾರೆ.

‘ನಮ್ಮ ಅಭಿಪ್ರಾಯಗಳನ್ನು ಸಮಿತಿ ಸಭೆಯಲ್ಲಿ ಆಲಿಸದಿದ್ದರೆ ನಾವು ಸಮಿತಿಯಿಂದ ಹೊರಬರಬೇಕಾಗಬಹುದು ಎನ್ನುವುದನ್ನು ವಿನಮ್ರತೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇವೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿಪಕ್ಷದ ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ನೀಡಿಲ್ಲ ಎಂಬ ಆರೋಪವನ್ನು ಜಗದಂಬಿಕಾ ಪಾಲ್ ತಳ್ಳಿಹಾಕಿದ್ದು, ಪ್ರತಿಯೊಬ್ಬರ ಅಭಿಪ್ರಾಯವನ್ನು ಖಂಡಿತವಾಗಿಯೂ ಆಲಿಸಿದ್ದೇನೆ ಎಂದಿದ್ದಾರೆ.

ಸಮಿತಿ ಮುಂದೆ ಹಾಜರು

ಜಮಾತ್-ಎ-ಇಸ್ಲಾಮಿ ಹಿಂದ್ ಸೇರಿ ಹಲವಾರು ಮುಸ್ಲಿಂ ಸಂಘಟನೆಗಳು ಮಸೂದೆಯ ಬಗ್ಗೆ ಅಭಿಪ್ರಾಯ ತಿಳಿಸಲು ಸೋಮವಾರ ಸಮಿತಿಯ ಮುಂದೆ ಹಾಜರಾದವು.

ಜಮಾತ್–ಎ– ಇಸ್ಲಾಮಿ ಹಿಂದ್ ತಿದ್ದುಪಡಿಗಳನ್ನು ವಿರೋಧಿಸಿದರೆ, ಶಾಲಿನಿ ಅಲಿ ನೇತೃತ್ವದ ಮುಸ್ಲಿಂ ವುಮೆನ್ ಇಂಟಲೆಕ್ಚುವಲ್ ಗ್ರೂಪ್ ಮತ್ತು ಫೈಜ್ ಅಹ್ಮದ್ ಫೈಜ್ ನೇತೃತ್ವದ ವಿಶ್ವ ಶಾಂತಿ ಪರಿಷತ್ತು ಸೇರಿ ಹಲವು ಸಂಘಟನೆಗಳು ತಿದ್ದುಪಡಿಗಳನ್ನು ಬೆಂಬಲಿಸಿದವು.

ಬಾಲಕನನ್ನು ತಲೆಕೆಳಗೆ ನೇತು ಹಾಕಿದ್ದ ಕೃತ್ಯ: ಮೂವರ ಬಂಧನ

ಪಾಂಡುರ್ನಾ (ಪಿಟಿಐ): ಮಧ್ಯಪ್ರದೇಶದ ಪಾಂಡುರ್ನಾ ಜಿಲ್ಲೆಯಲ್ಲಿ ಬಾಲಕನನ್ನು ತಲೆಕೆಳಗೆ ಮಾಡಿ ನೇತು ಹಾಕಿದ ಮತ್ತು ಆತನ ತಲೆ ಸಮೀಪ ಬಿಸಿ ಕಲ್ಲಿದ್ದಲನ್ನು ಇಡುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಈ ಬಗ್ಗೆ ಗೊತ್ತಾದ ಕೂಡಲೇ ಮೂವರನ್ನು ಬಂಧಿಸಿರುವುದಾಗಿ ಪೊಲೀಸರು ಸೋಮವಾರ ಹೇಳಿದ್ದಾರೆ.

ಜಿಲ್ಲಾ ಕೇಂದ್ರದಿಂದ 30 ಕಿ.ಮೀ ದೂರದಲ್ಲಿರುವ ಮೊಹಗಾಂವ್‌ನಲ್ಲಿ ಭಾನುವಾರ ಈ ಘಟನೆ ನಡೆದಿದೆ.

ಬಾಲಕನೊಬ್ಬನ ಕೈಗಳನ್ನು ಹಗ್ಗದಿಂದ ಕಟ್ಟಿ ಮತ್ತು ತಲೆಕೆಗಳಗಾಗಿ ನೇತುಹಾಕಿರುವ ಮತ್ತು ಆತ ಅಳುತ್ತಿದ್ದರೂ ಬಿಡದೆ, ತಲೆ ಬಳಿ ಬಿಸಿ ಕಲ್ಲಿದ್ದಲಿನ ತಟ್ಟೆಯನ್ನು ಇಟ್ಟಿರುವ ದೃಶ್ಯವೂ ವಿಡಿಯೊದಲ್ಲಿದೆ. ಅಲ್ಲದೆ ವ್ಯಕ್ತಿಯೊಬ್ಬ ಮತ್ತೊಬ್ಬ ಬಾಲಕನನ್ನೂ ಕಟ್ಟಿ ಹಾಕುತ್ತಿರುವ ದೃಶ್ಯವೂ ಅದರಲ್ಲಿ ದಾಖಲಾಗಿದೆ.

ಬಾಲಕನು ಕೈಗಡಿಯಾರ ಮತ್ತು ಇತರ ವಸ್ತುಗಳನ್ನು ಕದ್ದಿದ್ದ ಎಂದು ಜನರು ಆರೋಪಿಸಿರುವುದೂ ವಿಡಿಯೊದಲ್ಲಿದೆ.

ಬಂಧಿತ ಮೂವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪಾಂಡುರ್ನಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ಸಿಂಗ್ ಕನೇಶ್ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಕಮಲನಾಥ್, ‘ಇದು ಅತ್ಯಂತ ಖಂಡನೀಯ ಕೃತ್ಯ. ನಾಗರಿಕ ಸಮಾಜದಲ್ಲಿ ಈ ರೀತಿಯ ವರ್ತನೆಗಳು ಇರಬಾರದು’ ಎಂದಿದ್ದಾರೆ.

ಅತ್ಯಾಚಾರ ಪ್ರಕರಣ: ದೋಷಾರೋಪ ನಿಗದಿ

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿನ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಹತ್ಯೆಯ ಘಟನೆ ನಡೆದು 87 ದಿನಗಳ ಬಳಿಕ ಪ್ರಕರಣದ ಆರೋಪಿ ಸಂಜಯ್ ರಾಯ್ ವಿರುದ್ಧ ಕೋಲ್ಕತ್ತ ನ್ಯಾಯಾಲಯವು ಸೋಮವಾರ ದೋಷಾರೋಪ ನಿಗದಿ ಮಾಡಿದೆ.

‘ನ.11ರ ಬಳಿಕ ಪ್ರತಿ ನಿತ್ಯವೂ ಪ್ರಕರಣದ ವಿಚಾರಣೆ ನಡೆಸಲಾಗುವುದು’ ಎಂದೂ ಹೇಳಿದೆ. ರಾಯ್ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 64 (ಅತ್ಯಾಚಾರ), ಸೆಕ್ಷನ್ 66 (ಹತ್ಯೆ ಅಥವಾ ವ್ಯಕ್ತಿಯನ್ನು ಶಾಶ್ವತ ನಿಷ್ಕ್ರಿಯಗೊಳಿಸಿದ್ದಕ್ಕೆ ಶಿಕ್ಷೆ) ಸೆಕ್ಷನ್ 103 (ಹತ್ಯೆ ಮಾಡಿದ್ದಕ್ಕೆ ಶಿಕ್ಷೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.


ಸಂಜಯ್

‘ನಾನು ಏನೂ ಮಾಡಿಲ್ಲ. ನನ್ನ ಮಾತನ್ನು ಯಾರೂ ಕೇಳುತ್ತಿಲ್ಲ. ಸರ್ಕಾರವು ನನ್ನನ್ನು ಸಿಲುಕಿಸುತ್ತಿದೆ ಮತ್ತು ಬಾಯಿ ಮುಚ್ಚಿಕೊಳ್ಳುವಂತೆ ಬೆದರಿಕೆ ಒಡ್ಡುತ್ತಿದೆ’ ಎಂದು ಆರೋಪಿ ಸಂಜಯ್ ರಾಯ್ ನ್ಯಾಯಾಲಯದಿಂದ ಹೊರ ಬರುತ್ತಿದ್ದಂತೆಯೇ ಪತ್ರಕರ್ತರಿಗೆ ಹೇಳಿದರು.

‘ರಾಯ್ ಸರ್ಕಾರದ ವಿರುದ್ಧ ಮಾಡಿರುವ ಆರೋಪಗಳನ್ನು ತಳ್ಳಿ ಹಾಕುವಂತಿಲ್ಲ. ಇಂಥ ಅಪರಾಧವನ್ನು ಒಬ್ಬ ವ್ಯಕ್ತಿ ಮಾತ್ರವೇ ಮಾಡಿರಲು ಸಾಧ್ಯವಿಲ್ಲ. ಸಿಬಿಐ ಹಾಗೂ ಕೋಲ್ಕತ್ತ ಪೊಲೀಸರು ಸೇರಿಕೊಂಡು ಒಳಒಪ್ಪಂದ ಮಾಡಿಕೊಂಡಿರಬಹುದು. ಈ ಬಗ್ಗೆ ನಮಗೆ ಸಂಶಯವಿದೆ’ ಎಂದು ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಹೇಳಿದರು.

ಕಾಂಗ್ರೆಸ್ ನಾಯಕರ ನೆರವಿನಿಂದ ‘ಸಂಧಾನ’ಕ್ಕೆ ಮುಂದಾಗಿದ್ದ ಉದ್ಯಮಿ

ರಾಹುಲ್ ಭೇಟಿಗೆ ಯತ್ನಿಸಿದ್ದ ಅದಾನಿ

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಅವರು ಯುಪಿಎ ಆಡಳಿತದ ಅವಧಿಯಲ್ಲಿ ಕಾಂಗ್ರೆಸ್‌ನ ಕೆಲವು ನಾಯಕರ ನೆರವಿನಿಂದ ರಾಹುಲ್ ಗಾಂಧಿ ಜತೆ ಮಾತುಕತೆಗೆ ಪ್ರಯತ್ನಿಸಿದ್ದರು ಎಂಬ ವಿಚಾರವನ್ನು ಹೊಸ ಪುಸ್ತಕವೊಂದು ಬಹಿರಂಗಪಡಿಸಿದೆ.


ಆದರೆ ಅದಾನಿ ಭೇಟಿಯಾಗುವಂತೆ ರಾಹುಲ್ ಅವರ ಮನವೊಲಿಸಲು ಅಹ್ಮದ್ ಪಟೇಲ್ ಮತ್ತು ಕಮಲನಾಥ್ ಅವರಂತಹ ನಾಯಕರಿಗೂ ಸಾಧ್ಯವಾಗಲಿಲ್ಲ ಎಂದು ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ ಅವರ, ‘2024: ದಿ ಎಲೆಕ್ಷನ್ ದೆಟ್ ಸರ್‌ಪ್ರೈಸ್ಡ್ ಇಂಡಿಯಾ’ ಪುಸ್ತಕ ತಿಳಿಸಿದೆ.

‘ಎಡಪಂಥೀಯ ಸಲಹೆಗಾರರ ಗುಂಪೊಂದು ರಾಹುಲ್ ಅವರನ್ನು ಸುತ್ತುವರಿದಿದ್ದು, ಅವರು ಕಾಂಗ್ರೆಸ್ ನಾಯಕನ ತಲೆಯಲ್ಲಿ ತಮ್ಮ ಬಗ್ಗೆ ಕೆಟ್ಟ ಅಭಿಪ್ರಾಯಗಳನ್ನು ತುಂಬಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ರಾಜಕೀಯ ಹೋರಾಟದಲ್ಲಿ ರಾಹುಲ್ ಅವರು ತಮ್ಮನ್ನು ‘ದಾಳ’ವಾಗಿ ಬಳಸು-ತ್ತಿದ್ದಾರೆ ಎಂಬುದು ಅದಾನಿ ಅವರಿಗೆ ಮನವರಿಕೆಯಾಯಿತು’ ಎಂದೂ ಪುಸ್ತಕದಲ್ಲಿ ಹೇಳಲಾಗಿದೆ.

‘ಯುಪಿಎ ಆಡಳಿತದ ಅವಧಿಯಲ್ಲಿ ಅದಾನಿ, ಮೊದಲು ರಾಬರ್ಟ್ ವಾದ್ರಾ ಮೂಲಕ ರಾಹುಲ್ ಭೇಟಿಗೆ ಪ್ರಯತ್ನಿಸಿದ್ದರು. ಅದಕ್ಕಾಗಿ ವಾದ್ರಾ ಅವರನ್ನು ಗುಜರಾತ್‌ನಲ್ಲಿರುವ ತಮ್ಮ ಮುಂದ್ರಾ ಬಂದರಿಗೆ ಕರೆಸಿಕೊಂಡಿದ್ದರು’ ಎಂದು ಹೇಳಿದೆ.

‘ಅದರ ಬೆನ್ನಲ್ಲೇ, ಇಬ್ಬರನ್ನೂ ದೆಹಲಿಯಲ್ಲಿ ಭೇಟಿ ಮಾಡಿಸುವ ಪ್ರಯತ್ನಗಳನ್ನು ಮಾಡಲಾಯಿತು. ಮೊದಲು ಅಹ್ಮದ್ ಪಟೇಲ್ ಮತ್ತು ನಂತರ ಕಮಲನಾಥ್ ಮೂಲಕ ಈ ಪ್ರಯತ್ನಗಳು ನಡೆದವು. ಆದರೆ ಅದಾನಿ ಅವರನ್ನು ಭೇಟಿಯಾಗುವಂತೆ ರಾಹುಲ್ ಅವರ ಮನವೊಲಿಸಲು ಇಬ್ಬರಿಗೂ ಸಾಧ್ಯವಾಗಲಿಲ್ಲ’ ಎಂದು ತಿಳಿಸಿದೆ.

ಅದಾನಿ ಅವರೊಂದಿಗೆ ವೈಯಕ್ತಿಕವಾಗಿ ಉತ್ತಮ ಬಾಂಧವ್ಯ ಹೊಂದಿದ್ದ ಇನ್ನೊಬ್ಬ ನಾಯಕ ಶರದ್ ಪವಾರ್ ನೆರವಿನಿಂದ ‘ಸಂಧಾನ’ ಮಾತುಕತೆಗೆ ಪ್ರಯತ್ನ ನಡೆಯಿತು. ಆದರೆ ಎಚ್ಚರಿಕೆಯ ಹೆಜ್ಜೆಯಿಟ್ಟ ಪವಾರ್, ‘ಸಂಧಾನಕಾರ’ನ ಪಾತ್ರ ವಹಿಸುವುದರಿಂದ ದೂರ ಉಳಿಯಲು ನಿರ್ಧರಿಸಿದರು ಎಂದು ಹೇಳಿದೆ.



ಸರ್ದೇಸಾಯಿ ಅವರ ಪುಸ್ತಕದ ಮುಖಪುಟ

‘ಅದಾನಿ– ರಾಹುಲ್ ಜಟಾಪಟಿ 2014ಕ್ಕಿಂತ ಹಿಂದೆಯೇ ಶುರುವಾಗಿದೆ. ಮೋದಿ ಮತ್ತು ಅದಾನಿ ಅವರು ಪರಸ್ಪರ ಹೇಗೆ ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಕಾಂಗ್ರೆಸ್ ನಾಯಕರೊಬ್ಬರು ರಾಹುಲ್ ಅವರಿಗೆ ಸಮಗ್ರವಾಗಿ ವಿವರಿಸಿದ್ದರು. ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅದಾನಿ ಸಮೂಹವು ಯಾವ ರೀತಿ ಬೆಳವಣಿಗೆ ಸಾಧಿಸಿತು ಎಂಬ ಬಗ್ಗೆಯೂ ಹೇಳಿದ್ದರು’ ಎಂಬುದು ಪುಸ್ತಕದಲ್ಲಿದೆ.

‘ಜೈರಾಮ್ ರಮೇಶ್ ಮೇಲೆ ಸಿಟ್ಟು’

ತಮ್ಮನ್ನು ಟೀಕಿಸುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ವಿರುದ್ಧ ಅದಾನಿಗೆ ಸಿಟ್ಟು ಇದೆ ಎಂಬ ವಿವರವೂ ಪುಸ್ತಕದಲ್ಲಿದೆ. ‘ರಾಹುಲ್ ಅವರು ಎಲ್ಲ ಸಂದರ್ಭಗಳಲ್ಲೂ ನಮ್ಮನ್ನು ಟೀಕಿಸುತ್ತಾರೆ. ಆದರೆ ನಿಜವಾಗಿಯೂ ನಮ್ಮ ವಿರುದ್ಧದ ಅಜೆಂಡಾವನ್ನು ರೂಪಿಸುತ್ತಿರುವವರು ಜೈರಾಮ್ ರಮೇಶ್ ಆಗಿದ್ದಾರೆ’ ಎಂದು ಅದಾನಿ ಅವರು ಉದ್ಯಮ ವಲಯದ ಸ್ನೇಹಿತರೊಬ್ಬರಿಗೆ ಹೇಳಿದ್ದಾಗಿ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ.

ಕಾರಿನೊಳಗೆ ಉಸಿರುಗಟ್ಟಿ ಮೃತಪಟ್ಟ ನಾಲ್ವರು ಮಕ್ಕಳು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಧ್ಯಪ್ರದೇಶದ ವಲಸೆ ಕಾರ್ಮಿಕ ದಂಪತಿಯ 2ರಿಂದ 7 ವಯಸ್ಸಿನ ನಾಲ್ವರು ಪುಟ್ಟ ಮಕ್ಕಳು ಇಲ್ಲಿನ ಭೂಮಾಲೀಕನ ಕಾರಿನಲ್ಲಿ ಸಿಲುಕಿ, ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ಸುನಿತಾ (7), ಸಾವಿತ್ರಿ (4), ವಿಷ್ಣು (5) ಹಾಗೂ ಕಾರ್ತಿಕ್ (2) ಮೃತ ಮಕ್ಕಳು. ಆಕಸ್ಮಿಕ ಸಾವು ಎಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು. ಘಟನೆಯು ಅಮ್ರೇಲಿ ತಾಲ್ಲೂಕಿನ ರಂಧಿಯಾ ಗ್ರಾಮದಲ್ಲಿ ಶನಿವಾರ (ನ.2) ನಡೆದಿದೆ.

ಭರತ್ ಮಂದಾನಿ ಎನ್ನುವ ಭೂಮಾಲೀನ ಜಮೀನಿನಲ್ಲಿ ಸೋಬಿಯಾ ಮಚ್ಚರ್ ದಂಪತಿ ಕೆಲಸ ಮಾಡುತ್ತಿದ್ದರು. ಇವರಿಗೆ ಏಳು ಮಕ್ಕಳಿದ್ದರು.

‘ಭರತ್ ಅವರು ಸೋಬಿಯಾ ಅವರ ಮನೆ ಮುಂದೆಯೇ ತಮ್ಮ ಕಾರು ನಿಲ್ಲಿಸಿದ್ದರು. ನಾಲ್ವರು ಮಕ್ಕಳ ಕೈಗೆ ಕಾರಿನ ಕೀ ಸಿಕ್ಕಿದೆ. ಆಟವಾಡಲು ಕಾರಿನೊಳಕ್ಕೆ ಹೋಗಿದ್ದಾರೆ. ಆದರೆ, ಕಾರಿನ ಬಾಗಿಲು ತೆರೆದು ಹೊರಬರಲು ಮಕ್ಕಳಿಗೆ ತಿಳಿಯಲಿಲ್ಲ. ಆದ್ದರಿಂದ ಉಸಿರುಗಟ್ಟಿ ಮಕ್ಕಳು ಮೃತಪಟ್ಟಿರಬಹುದು ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ಪೊಲೀಸರು ಹೇಳಿದರು.

‘ದಂಪತಿ ಘಟನಾ ಸ್ಥಳದಿಂದ ದೂರದಲ್ಲಿ ಕೆಲಸ ಮಾಡುತ್ತಿದ್ದರು. ಘಟನಾ ಸ್ಥಳದಲ್ಲಿ ಮಕ್ಕಳುನ್ನು ರಕ್ಷಿಸಲು ಯಾರೂ ಇರಲಿಲ್ಲ. ಕೆಲಸದಿಂದ ಸಂಜೆ ವಾಪಸಾದ ಬಳಿಕವಷ್ಟೇ ದಂಪತಿಗೆ ಘಟನೆ ಕುರಿತು ತಿಳಿಯಿತು’ ಎಂದರು.

ಐಎಎಸ್ ಅಧಿಕಾರಿಯ ಫೋನ್ ಹ್ಯಾಕ್; ತನಿಖೆ



ತಿರುವನಂತಪುರ: ಕೇರಳದ ಐಎಎಸ್ ಅಧಿಕಾರಿಯೊಬ್ಬರು ಮೊಬೈಲ್ ಫೋನ್ ಹ್ಯಾಕ್ ಮಾಡಿ, ಧರ್ಮಗಳ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿರುವ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕೇರಳದಲ್ಲಿ ವಿವಾದವನ್ನೇ ಸೃಷ್ಟಿಸಿರುವ ‘ಮಲ್ಲು ಹಿಂದೂ ಆಫೀಸರ್ಸ್’, ‘ಮಲ್ಲು ಮುಸ್ಲಿಂ ಆಫೀಸರ್ಸ್’ ಸೇರಿ ಹತ್ತಕ್ಕೂ ಹೆಚ್ಚು ವಾಟ್ಸ್‌ಆ್ಯಪ್ ಗ್ರೂಪ್‌ಗಳ ಬಗ್ಗೆ ವಿವರ ಸಲ್ಲಿಸುವಂತೆ ತಿರುವನಂತಪುರ ನಗರ ಪೊಲೀಸರು ವಾಟ್ಸ್‌ಆ್ಯಪ್ ಸಂಸ್ಥೆಗೆ ಕೋರಿದ್ದಾರೆ.

ಕೇರಳದ ಕೈಗಾರಿಕಾ ಸಚಿವಾಲಯದ ನಿರ್ದೇಶಕ ಕೆ. ಗೋಪಾಲಕೃಷ್ಣ ಅವರು ಅಕ್ಟೋಬರ್ 31ರಂದು ‘ಮಲ್ಲು ಹಿಂದೂ ಆಫೀಸರ್ಸ್’ ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ್ದಾರೆ ಎಂಬ ವದಂತಿಗಳು ಹರಡಿದ್ದವು. ‘ಮೊಬೈಲ್ ಫೋನ್ ಹ್ಯಾಕ್ ಆಗಿದ್ದು, ನನ್ನ ಅರಿವಿಗೆ ಬಾರದೆಯೇ ವಾಟ್ಸ್‌ಆ್ಯಪ್ ಗ್ರೂಪ್‌ಗಳು ರಚನೆಯಾಗಿವೆ. ಮೊಬೈಲ್ ಫೋನ್‌ನಲ್ಲಿ ಕೆಲವು ಅವ್ಯವಹಾರಗಳೂ ನಡೆದಿವೆ. ಈ ಎಲ್ಲದರ ಬಗ್ಗೆ ತನಿಖೆಯಾಗಬೇಕು’ ಎಂದು ಕೋರಿ ಗೋಪಾಲಕೃಷ್ಣ ಅವರು ಪೊಲೀಸರಿಗೆ ದೂರು ನೀಡಿದ್ದರು.

‘ದುಷ್ಕರ್ಮಿಗಳು ನನ್ನ ಮೊಬೈಲ್ ಫೋನ್ ಹ್ಯಾಕ್ ಮಾಡಿ, ಅದರಲ್ಲಿದ್ದ ಸಂಪರ್ಕ ಸಂಖ್ಯೆಗಳನ್ನು ಬಳಸಿ ಹತ್ತಕ್ಕೂ ಅಧಿಕ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ರಚಿಸಿದ್ದಾರೆ. ಈ ವಿಚಾರ ನನ್ನ ಗಮನಕ್ಕೆ ಬಂದ ತಕ್ಷಣವೇ ಆ ಎಲ್ಲ ಗ್ರೂಪ್‌ಗಳನ್ನು ಅಳಿಸಿ ಹಾಕಿದ್ದೇನೆ’ ಎಂದು ಗೋಪಾಲಕೃಷ್ಣ ಅವರು ಮಾಧ್ಯಮಗಳಿಗೆ ತಿಳಿಸಿದ್ದರು.



ಸುಭಾಷಿತ

ಸಕಾರಾತ್ಮಕ ಮನೋಭಾವ ಹೊಂದಿರುವ ವ್ಯಕ್ತಿಯು ಎಲ್ಲ ಋತುಗಳಲ್ಲೂ ಸಿಗುವ ಹಣ್ಣಿನಂತೆ.

–ಶಿವ್ ಖೇರಾ

ಮಹತ್ವಾಕಾಂಕ್ಷೆಯ ಪ್ರವಾಸೋದ್ಯಮ ನೀತಿ ಅನುಷ್ಠಾನವು ಯಶಸ್ಸನ್ನು ನಿರ್ಧರಿಸಲಿದೆ

ರಾಜ್ಯ ಸರ್ಕಾರವು ಈಚೆಗೆ ಅನುಮೋದಿಸಿರುವ ಪ್ರವಾಸೋದ್ಯಮ ನೀತಿಯು ಹಲವು ಸ್ವಾಗತಾರ್ಹ ಅಂಶಗಳನ್ನು ಒಳಗೊಂಡಿದೆ. ಇದರಿಂದಾಗಿ, ಪ್ರವಾಸೋದ್ಯಮಕ್ಕೆ ಇಂಬು ಕೊಡುವ ದಿಸೆಯಲ್ಲಿ ಒಂದು ಹೆಜ್ಜೆ ಮುಂದಕ್ಕೆ ಇರಿಸಿದಂತಾಗಿದೆ. ಅದರಲ್ಲೂ ಮುಖ್ಯವಾಗಿ ಬಹಳ ಮಹತ್ವಾಕಾಂಕ್ಷೆಯ ಗುರಿಯೊಂದನ್ನು ಈ ನೀತಿಯು ಹೊಂದಿದೆ. ವಿವಿಧ ವಿಷಯಗಳಿಗೆ ಸಂಬಂಧಿಸಿದ ಪ್ರವಾಸಿ ತಾಣಗಳನ್ನು ಗಮನದಲ್ಲಿ ಇರಿಸಿಕೊಂಡಿದೆ. ರಾಜ್ಯದ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ದೇಶಿ ಪ್ರವಾಸಿಗರ ಸಂಖ್ಯೆಯು ಈಗ ವಾರ್ಷಿಕ 28 ಕೋಟಿ ಇರುವುದನ್ನು 48 ಕೋಟಿಗೆ ಹೆಚ್ಚಿಸಬೇಕು, ವಿದೇಶಗಳಿಂದ ಬರುವ ಪ್ರವಾಸಿಗರ ಸಂಖ್ಯೆಯನ್ನು ಈಗ ವಾರ್ಷಿಕ ಇರುವ 4 ಲಕ್ಷದಿಂದ 20 ಲಕ್ಷಕ್ಕೆ ಹೆಚ್ಚಿಸಬೇಕು ಎಂಬುದು ಸರ್ಕಾರದ ಬಯಕೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ 47 ಸಾವಿರ ನೇರ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಸರ್ಕಾರ ಅಂದಾಜು ಮಾಡಿದೆ ಹಾಗೂ ಈ ವಲಯದ ಯೋಜನೆಗಳಿಗೆ ₹ 7,800 ಕೋಟಿ ಹೂಡಿಕೆ ಹರಿದುಬರಲಿದೆ ಎಂದು ಕೂಡ ಅಂದಾಜಿಸಿದೆ. ರಾಜ್ಯದಲ್ಲಿ ಅಂದಾಜು 320 ಕಿ.ಮೀ. ಉದ್ದದ, ಪ್ರಕೃತಿದತ್ತವಾದ ಕಡಲತೀರ ಇದೆ. ಬಹಳ ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆ ಇಲ್ಲಿದೆ. ರಾಜ್ಯದ ಭೂಪ್ರದೇಶಗಳಲ್ಲಿ ಬಹಳ ವೈವಿಧ್ಯ ಇದೆ. ಈ ಎಲ್ಲ ಕಾರಣಗಳಿಂದಾಗಿ ರಾಜ್ಯವು ಪ್ರವಾಸೋದ್ಯಮದ ದೃಷ್ಟಿಯಿಂದ ಬಹಳ ಆಕರ್ಷಕ. ಸಾಹಸ ಪ್ರವಾಸೋದ್ಯಮ, ಆಹಾರ ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಸೇರಿದಂತೆ ವಿವಿಧ ವಿಷಯಗಳನ್ನು ಹೊಸ ನೀತಿಯು ಒಳಗೊಂಡಿದೆ. 'ಒಂದು ಜಿಲ್ಲೆ, ಒಂದು ತಾಣ' ಪರಿಕಲ್ಪನೆಯು ರಾಜ್ಯದಲ್ಲಿ ಕನಿಷ್ಠ 30 ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕಾರಣವಾಗಿ ಒದಗಬಲ್ಲದು, ಆ ಮೂಲಕ ರಾಜ್ಯದ ಪ್ರತಿ ಜಿಲ್ಲೆಯೂ ಪ್ರವಾಸೋದ್ಯಮದ ಬೆಳವಣಿಗೆಗೆ ನೆರವಾಗುವಂತೆ ಆಗಲಿದೆ.



ದೇಶದ ಪ್ರವಾಸೋದ್ಯಮ ಭೂಪಟದಲ್ಲಿ ರಾಜ್ಯವು ಮುಂಚೂಣಿ ಸ್ಥಾನದಲ್ಲಿ ನಿಲ್ಲಬೇಕಾದರೆ, ಉದ್ಯಮದ ಬೆಳವಣಿಗೆಯು ಸುಸ್ಥಿರವಾಗಿರಬೇಕು, ಪ್ರವಾಸಿಗರಿಗೆ, ಸ್ಥಳೀಯ ನಿವಾಸಿಗಳಿಗೆ ಹಾಗೂ ಪರಿಸರಕ್ಕೆ ಪೂರಕವಾಗಿ ಇರಬೇಕು

2029ಕ್ಕೆ ಮೊದಲು ರಾಜ್ಯದಲ್ಲಿ 50 ಸಾಹಸ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಉದ್ದೇಶಿಸಿದೆ. ಕಾಫಿ ಮಂಡಳಿ ಜೊತೆಗಿನ ಸಹಭಾಗಿತ್ವವು ಕಾಫಿ ಪ್ರವಾಸೋದ್ಯಮದ ನಕಾಶೆಯಲ್ಲಿ ರಾಜ್ಯವನ್ನು ಪ್ರಮುಖ ತಾಣವನ್ನಾಗಿಸಲಿದೆ. ರಾಜ್ಯದ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡಲು ಹಾಗೂ ದೇಶ, ವಿದೇಶಗಳ ಪ್ರವಾಸಿಗರನ್ನು ಸೆಳೆಯಲು ಅಂತರರಾಷ್ಟ್ರೀಯ ಮಟ್ಟದ ಕನಿಷ್ಠ 50 ಪ್ರವಾಸೋದ್ಯಮ ಮೇಳಗಳಲ್ಲಿ ಭಾಗಿಯಾಗುವ ಆಲೋಚನೆಯನ್ನು ಸರ್ಕಾರವು ಹೊಂದಿದೆ. ಹೀಗಿದ್ದರೂ, ಸುಸ್ಥಿರತೆಯ ವಿಚಾರವಾಗಿ ಹೆಚ್ಚಿನ ಗಮನ ನೀಡಬೇಕಿದೆ. ಅದರಲ್ಲೂ ಮುಖ್ಯವಾಗಿ ಪರಿಸರದ ದೃಷ್ಟಿಯಿಂದ ಬಹಳ ಸೂಕ್ಷ್ಮವಾಗಿರುವ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಈ ವಿಚಾರವಾಗಿ ಅಗತ್ಯ ಗಮನ ನೀಡದೆ ಇರುವುದು ಕಳವಳ ಮೂಡಿಸುವಂಥದ್ದು. ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಪ್ರವಾಸಿಗರ ಸಂಖ್ಯೆ ಅತಿ ಆಗಿರುವುದರ ಪರಿಣಾಮವನ್ನು ಈಗಾಗಲೇ ಅನುಭವಿಸುತ್ತಿವೆ. ವಿಶ್ವಸಂಸ್ಥೆಯ ವ್ಯಾಖ್ಯಾನ ಮಾಡಿರುವಂತೆ, ಸುಸ್ಥಿರ ಪ್ರವಾಸೋದ್ಯಮವು ಆರ್ಥಿಕ, ಸಾಮಾಜಿಕ ಹಾಗೂ ಪಾರಿಸರಿಕ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಪ್ರವಾಸೋದ್ಯಮವು ಸ್ಥಳೀಯ ಸಮುದಾಯಗಳಿಗೆ ಪ್ರಯೋಜನ ತಂದುಕೊಡುವ ಖಾತರಿಯನ್ನು ಹೊಂದಿರಬೇಕು ಎಂದು ಅದು ಹೇಳುತ್ತದೆ. ಪ್ರವಾಸಿಗರ ಸಂಖ್ಯೆಯು ಮೇಲೆ ನಿಯಂತ್ರಣ ಇಲ್ಲದಿದ್ದರೆ, ಸ್ಥಳೀಯ ಸಂಪನ್ಮೂಲಗಳ ಮೇಲೆ ವಿಪರೀತ ಹೊರೆ ಉಂಟಾಗಬಹುದು, ಸ್ಥಳೀಯ ಸಂಸ್ಕೃತಿಗಳನ್ನು ಹಾಳುಮಾಡಬಹುದು, ನೈಸರ್ಗಿಕವಾದ ಆವಾಸ ಸ್ಥಾನಗಳಿಗೆ ಧಕ್ಕೆ ಉಂಟುಮಾಡಬಹುದು. ಆದರೆ, ಮೂಲ ಉದ್ದೇಶದ ಜೊತೆ ಸುಸ್ಥಿರತೆಯನ್ನು ಜೋಡಿಸಿದರೆ ಸರ್ಕಾರವು ರಾಜ್ಯದಲ್ಲಿನ ನೈಸರ್ಗಿಕ ಸೌಂದರ್ಯವನ್ನು ಸಂರಕ್ಷಿಸಬಹುದು ಮತ್ತು ಪ್ರವಾಸಿಗರನ್ನು ಸ್ಥಳೀಯ ಸಮುದಾಯಗಳಿಗೂ ಅನುಕೂಲ ಕಲ್ಪಿಸುವ ಪ್ರವಾಸೋದ್ಯಮವನ್ನು ಕಟ್ಟಬಹುದು. ಇದು ಸಾಧ್ಯವಾಗಬೇಕು ಎಂದಾದರೆ ಸೂಕ್ತವಾದ ಯೋಜನೆಗಳನ್ನು ರೂಪಿಸಬೇಕು, ಪಾಲುದಾರರ ಜೊತೆ ಸಮಾಲೋಚನೆ ನಡೆಸಬೇಕು ಹಾಗೂ ಪ್ರವಾಸೋದ್ಯಮದ ಕಟ್ಟ ಪರಿಣಾಮಗಳನ್ನು ತಗ್ಗಿಸುವ ಎಲ್ಲ ಕಾರ್ಯತಂತ್ರಗಳು ಬೇಕು.

ರಾಜ್ಯದ ಪ್ರವಾಸೋದ್ಯಮ ನೀತಿಗಳು ಹಿಂದೆಯೂ ತಮ್ಮ ಗುರಿಯನ್ನು ತಲುಪಲು ವಿಫಲವಾದ ನಿದರ್ಶನಗಳು ಇವೆ. ಯೋಜನೆಗಳ ಅನುಷ್ಠಾನ ಸಮರ್ಪಕವಾಗಿ ಇಲ್ಲದಿದ್ದುದು, ಉತ್ತರದಾಯಿತ್ವದ ಕೊರತೆ ಹಾಗೂ ಸ್ಥಳೀಯ ಸಮುದಾಯಗಳನ್ನು ಅಗತ್ಯ ಪ್ರಮಾಣದಲ್ಲಿ ತೊಡಗಿಸಿಕೊಳ್ಳದೆ ಇದ್ದುದು ಈ ವೈಫಲ್ಯಕ್ಕೆ ಕೆಲವು ಕಾರಣಗಳು. ಹಿಂದಿನ ಪ್ರಯತ್ನಗಳ ಅರ್ಥಪೂರ್ಣವಾದ ಹಾಗೂ ಸುಸ್ಥಿರವಾದ ಅನುಭವವನ್ನು ಪ್ರವಾಸಿಗರಿಗೆ ಸೃಷ್ಟಿಸಿಕೊಡುವ ಬದಲು, ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶವನ್ನು ಮಾತ್ರ ಹೊಂದಿದ್ದುವು. ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆ, ಶುಚಿತ್ವದಂತಹ ಮೂಲಸೌಕರ್ಯವನ್ನು ಕಲ್ಪಿಸಲು ಸಾಧ್ಯವಾಗದೆ ಇದ್ದುದು ಕೂಡ ಪ್ರವಾಸೋದ್ಯಮದ ಬೆಳವಣಿಗೆಗೆ ತೊಡರಾಗಿ ಪರಿಣಮಿಸಿದ್ದವು. ರಾಜ್ಯದಲ್ಲಿ ಬಹಳ ವಿಶಿಷ್ಟವಾದ ಪ್ರವಾಸಿ ತಾಣಗಳು ಇವೆ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡರೂ ಪ್ರವಾಸಿ ತಾಣಗಳನ್ನು ಅವುಗಳ ಸಾಮರ್ಥ್ಯಕ್ಕೆ ತಕ್ಕಂತೆ ಬಳಸಿಕೊಂಡಿಲ್ಲ. ಹೊಸ ಪ್ರವಾಸೋದ್ಯಮ ನೀತಿಯು ಮಹತ್ವಾಕಾಂಕ್ಷಿ ಆಗಿದ್ದರೂ, ಬಹಳ ಭರವಸೆ ಮೂಡಿಸುವಂತೆ ಇದೆಯಾದರೂ, ಅದರ ಅನುಷ್ಠಾನ ಯಾವ ರೀತಿಯಲ್ಲಿ ಆಗುತ್ತದೆ ಎಂಬುದು ಅದರ ಯಶಸ್ಸನ್ನು ತೀರ್ಮಾನಿಸುತ್ತದೆ. ದೇಶದ ಪ್ರವಾಸೋದ್ಯಮ ಭೂಪಟದಲ್ಲಿ ಮುಂಚೂಣಿ ಸ್ಥಾನದಲ್ಲಿ ನಿಲ್ಲುವ ಬಯಕೆಯನ್ನು ರಾಜ್ಯವು ಹೊಂದಿದೆ. ಹಾಗೆ ಆಗಬೇಕು ಎಂದಾದರೆ, ಬೆಳವಣಿಗೆಯು ಸುಸ್ಥಿರವಾಗಿರಬೇಕು, ಪ್ರವಾಸಿಗರಿಗೆ, ಸ್ಥಳೀಯ ನಿವಾಸಿಗಳಿಗೆ ಹಾಗೂ ಪರಿಸರಕ್ಕೆ ಪೂರಕವಾಗಿ ಇರಬೇಕು.

ದಿನದ ಟ್ವೀಟ್

ಪ್ರಯಾಣ ಮಾಡದಿರಲಿ ಹೈರಾಣ



ದೀಪಾವಳಿ ಸಂದರ್ಭದಲ್ಲಿ ಜನ ತಮ್ಮ ಜೀವಕ್ಕೆ ಬೆಲೆಯೇ ಇಲ್ಲವೇನೋ ಎಂಬಂತೆ ರೈಲುಗಳಲ್ಲಿ ಪ್ರಯಾಣಿಸುತ್ತಾರೆ. ಈ ಸಂದರ್ಭದಲ್ಲಿ ಯಾವ ಬಗೆಯ ಅನಾಹುತ ಬೇಕಾದರೂ ಸಂಭವಿಸಬಹುದು ಎಂಬಂಥ ಸ್ಥಿತಿ ಇರುತ್ತದೆ. ಸ್ಲೀಪರ್, ಎ.ಸಿ. ಕೋಚ್‌ಗಳೆಲ್ಲವೂ ಒಂದೇ ರೀತಿ ಕಾಣುತ್ತಿರುತ್ತವೆ. ರಾತ್ರಿಯಿಡೀ ಕೆಳಗೂ ಕುಳಿತುಕೊಳ್ಳಲಾರದಷ್ಟು ಜನದಟ್ಟಣೆ ಇರುತ್ತದೆ. ಅವರು ನಿಂತೇ ಇರುತ್ತಾರೆ.

ಮುನೇಶ್ ಮೀನಾ

ಕಿಡಿನುಡಿ



ಇ-ಖಾತಾ ಪರಿಕಲ್ಪನೆಯು ಉತ್ತಮವಾದುದು. ಆದರೆ, ಅದರ ಅನುಷ್ಠಾನ ಕಳಪೆಯಾಗಿದೆ. ಸರ್ಕಾರ ಸರಿಯಾದ ಸಿದ್ಧತೆ ಮಾಡಿಕೊಂಡಿಲ್ಲದಿರುವಾಗ, ಅದರಿಂದ ಬೊಕ್ಕಸಕ್ಕೆ ವರಮಾನ ನಷ್ಟವೂ ಆಗುತ್ತಿರುವಾಗ, ಆಸ್ತಿ ನೋಂದಣಿಗೆ ಇ-ಖಾತಾ ಕಡ್ಡಾಯಗೊಳಿಸಿ ಜನರನ್ನು ಗೋಳು ಹೊಯ್ದುಕೊಳ್ಳುವುದಾದರೂ ಏಕೆ? ದತ್ತಾಂಶದಲ್ಲಿ ನನ್ನ ಸ್ವತ್ತಿನ ಹೆಸರು ಇಲ್ಲವಾದ್ದರಿಂದ ನನಗೆ ಇ-ಖಾತಾ ಕರಡುಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವೇ ಆಗುತ್ತಿಲ್ಲ.

ಆನಂದ ಗುಂಡೂರಾವ್, ಬಿ–ಪ್ಯಾಕ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 5-11-1999

• **ಬೊಫೋರ್ಸ್ ಆರೋಪಪಟ್ಟಿಗೆ ಒಪ್ಪಿಗೆ ಕ್ವಟ್ರೋಚಿ ಬಂಧನಕ್ಕೆ ವಾರಂಟ್**

ನವದೆಹಲಿ, ನ. 4 (ಪಿಟಿಐ, ಯುಎನ್‌ಐ)– ಬೊಫೋರ್ಸ್ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿರುವ ಆರೋಪಪಟ್ಟಿಯನ್ನು ನಗರದ ಸಿಬಿಐ ನ್ಯಾಯಾಲಯವು ಇಂದು ಅವಗಾಹನೆಗೆ ತೆಗೆದುಕೊಂಡು, ಪ್ರಮುಖ ಆರೋಪಿಗಳಲ್ಲಿ ಒಬ್ಬನಾದ ಒಟ್ಟಾವಿಯೊ ಕ್ವಟ್ರೋಚಿಯ ಬಂಧನಕ್ಕೆ ಜಾಮೀನುರಹಿತ ವಾರಂಟ್ ಹೊರಡಿಸಿದೆ.

ಇನ್ನಿತರ ಆರೋಪಿಗಳಾದ ಬೊಫೋರ್ಸ್‌ನ ಮಾಜಿ ಏಜೆಂಟ್ ವಿನ್ ಛಡ್ಡಾ, ಮಾಜಿ ರಕ್ಷಣಾ ಕಾರ್ಯದರ್ಶಿ ಎಸ್.ಕೆ. ಭಟ್ನಾಗರ್, ಬೊಫೋರ್ಸ್ ಕಂಪನಿಯ ಮಾಜಿ ಮುಖ್ಯಸ್ಥ ಮಾರ್ಟಿನ್ ಆರ್ಡ್‌ಬೊ ಹಾಗೂ ಬೊಫೋರ್ಸ್ ಕಂಪನಿಗೂ ಹಾಜರಾಗುವಂತೆ ಸಮನ್ಸ್ ಹೊರಡಿಸಲಾಗಿದೆ. ಇವರೆಲ್ಲ ಮುಂದಿನ ವಿಚಾರಣೆ ನಡೆಯುವ ಡಿ. 13ರಂದು ಹಾಜರಾಗಬೇಕಿದೆ.

• **ಸಮಗ್ರ ಕಾರಂತ ಸಾಹಿತ್ಯ ಇನ್ನೂ ಕನಸು**

ಬೆಂಗಳೂರು, ನ. 4– ಕಡಲತೀರದ ಭಾರ್ಗವ ಕೋಟ ಶಿವರಾಮ ಕಾರಂತರು ಇನ್ನಿಲ್ಲವಾಗಿ ಎರಡು ವರ್ಷಗಳು ಸಮೀಪಿಸುತ್ತಿದ್ದು, ಅವರು ತೀರಿಕೊಂಡಾಗ ರಾಜ್ಯ ಸರ್ಕಾರ ನೀಡಿದ್ದ ಭಾರಿ ಭರವಸೆ, 'ಕಾರಂತರ ಸಮಗ್ರ ಸಾಹಿತ್ಯ' ಇನ್ನೂ ಕನ್ನಡಿಯೊಳಗಿನ ಗಂಟಾಗಿ ಕುಳಿತಿದೆ.

50 ವರ್ಷಗಳ ಹಿಂದೆ

ಮಂಗಳವಾರ, 5-11-1974

• **ಘೇರಾವ್ ಯತ್ನ ವಿಫಲ**

ಪಟ್ನಾ, ನ. 4– ನಗರವನ್ನು ಪ್ರವೇಶಿಸುವ ಎಲ್ಲ ರಸ್ತೆಗಳನ್ನು ಬಂದ್ ಮಾಡುವ ಜೊತೆಗೆ ಆಯಕಟ್ಟಿನ ಸ್ಥಳಗಳಲ್ಲಿ ಸಶಸ್ತ್ರ ಪೊಲೀಸರನ್ನು ನಿಯೋಜಿಸಿದ್ದರಿಂದ, ಸಚಿವಾಲಯದ ಸಂಕೀರ್ಣಕ್ಕೆ ಘೇರಾವ್ ಹಾಕುವ ಜಯಪ್ರಕಾಶ ನಾರಾಯಣರ (ಜೆ.ಪಿ) ಮಹತ್ವಾಕಾಂಕ್ಷೆಯ ಪ್ರಯತ್ನವು ವಿಫಲಗೊಂಡಿತು.

ಪ್ರತಿಭಟನಕಾರರ ಮೇಲೆ ಪೊಲೀಸರು ಲಾಠಿ ಬೀಸಿದ್ದರಿಂದ, ನಾಳೆ ಪಟ್ನಾ ಬಂದ್‌ಗೆ ಹಾಗೂ ನಾಡಿದ್ದು ಸಂಪೂರ್ಣ ಬಿಹಾರ ಬಂದ್‌ಗೆ ಜೆ.ಪಿ ಅವರು ಕರೆ ನೀಡಿದ್ದಾರೆ.

ಜಾರ್ಖಂಡ್ ಚುನಾವಣೆ: ಎನ್‌ಡಿಎ– 'ಇಂಡಿಯಾ' ನಡುವೆ ನೇರ ಹಣಾಹಣಿ

ಗಣಿ ನಾಡಲ್ಲಿ 'ಮತಗಣಿ'ಯ ಸದ್ದು



ವಿಶ್ಲೇಷಣೆ

ಬಿ.ಎಸ್.ಅರುಣ್

ಜಾರ್ಖಂಡ್ ವಿಧಾನಸಭೆಯ 81 ಕ್ಷೇತ್ರಗಳಿಗೆ ಇದೇ 13 ಮತ್ತು 20ರಂದು ಎರಡು ಹಂತಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ಕಾಂಗ್ರೆಸ್, ಆರ್‌ಜೆಡಿ ಒಳಗೊಂಡ 'ಇಂಡಿಯಾ' ಮೈತ್ರಿಕೂಟದ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಗಣಿ ಸಂಪತ್ತು ಹೆಚ್ಚಾಗಿರುವ ಪೂರ್ವ ಭಾರತದ ಈ ರಾಜ್ಯದಲ್ಲಿ, ಹಿಂದಿನ ಚುನಾವಣೆಯಲ್ಲಿ ಜಯ ಗಳಿಸಿದ ಜೆಎಂಎಂ– ಕಾಂಗ್ರೆಸ್ ಮೈತ್ರಿಕೂಟ ತನ್ನ 5 ವರ್ಷಗಳ 'ಸಾಧನೆ'ಗಳನ್ನು ಮುಂದಿಟ್ಟು ಹಾಗೂ 'ಪ್ರತಿಪಕ್ಷಗಳ ಸರ್ಕಾರವಿರುವ ರಾಜ್ಯಗಳ ವಿರುದ್ಧ ಕೇಂದ್ರದ ತಾರತಮ್ಯ ಧೋರಣೆ' ವಿರೋಧಿಸಿ ಪ್ರಚಾರದಲ್ಲಿ ತೊಡಗಿದೆ. ಬಿಜೆಪಿಯು ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಸಹಿತ ಆರೋಪಗಳ ಸುರಿಮಳೆ ಸುರಿಸುತ್ತಿದೆ. 'ಈ ಬಾರಿ ಬದಲಾವಣೆ ತರುತ್ತೇವೆ' ಎಂದು ಹೊರಟಿರುವ ಬಿಜೆಪಿ, ರಾಜ್ಯದಾದ್ಯಂತ 'ಪರಿವರ್ತನ ಯಾತ್ರೆ' ನಡೆಸಿದೆ. ಇದಕ್ಕೆ ಪ್ರತಿಯಾಗಿ ಜೆಎಂಎಂ 'ನಾವು ಜಾರ್ಖಂಡ್ ಅಸ್ಮಿತೆಯನ್ನು ಪ್ರತಿಬಿಂಬಿಸುತ್ತೇವೆ' ಎಂದು ಹೇಳಿಕೊಂಡಿದೆ.

2000ನೇ ಇಸವಿಯಲ್ಲಿ ಬಿಹಾರದಿಂದ ಬೇರ್ಪಟ್ಟು ಈ ರಾಜ್ಯವು ಜನ್ಮತಾಳಿದ ನಂತರ ಯಾವುದೇ ಪಕ್ಷ ಇಲ್ಲಿ ಬಹುಮತ ಗಳಿಸಿಲ್ಲ. 2019ರ ವಿಧಾನಸಭಾ ಚುನಾವಣೆಯಲ್ಲಿ ಜೆಎಂಎಂ 30, ಕಾಂಗ್ರೆಸ್ 16 ಹಾಗೂ ಆರ್‌ಜೆಡಿ 1 (ಒಟ್ಟು 47) ಸ್ಥಾನ ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದವು. ಬಿಜೆಪಿ 25 ಸ್ಥಾನ ಗಳಿಸಿತ್ತು. ಆಗ ಕೇಸರಿ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸಿತ್ತು ಹಾಗೂ ಶೇ 33.37ರಷ್ಟು ಮತ ಗಳಿಸಿ, ಅತಿ ಹೆಚ್ಚು ಮತ ಗಳಿಸಿದ ಪಕ್ಷವಾಗಿ ಹೊರಹೊಮ್ಮಿತ್ತು. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ಉತ್ತಮ ಪ್ರದರ್ಶನ ತೋರಿ, ರಾಜ್ಯದ 14 ಕ್ಷೇತ್ರಗಳ ಪೈಕಿ 8ರಲ್ಲಿ (ಶೇ 44.6) ಜಯ ಗಳಿಸಿತು. ಇಂಡಿಯಾ ಮೈತ್ರಿಕೂಟವು 5 (ಶೇ 38.97) ಕ್ಷೇತ್ರಗಳಿಗೆ ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಪ್ರಸ್ತುತ ಎರಡೂ ಕೂಟಗಳಲ್ಲಿ ಸೀಟು ಹಂಚಿಕೆ ಹೆಚ್ಚಿನ ಮನಸ್ತಾಪವಿಲ್ಲದೇ ನಡೆದಿದೆ. ಇಂಡಿಯಾ ಮೈತ್ರಿಕೂಟದಲ್ಲಿ ಜೆಎಂಎಂ 41, ಕಾಂಗ್ರೆಸ್ 30, ಆರ್‌ಜೆಡಿ 6, ಸಿಪಿಐ (ಎಂಎಲ್) 4 ಸ್ಥಾನಗಳಲ್ಲಿ ಹಾಗೂ ಎನ್‌ಡಿಎ ಕಡೆಯಿಂದ ಬಿಜೆಪಿ 68, ಆಲ್ ಜಾರ್ಖಂಡ್ ಸ್ಟೂಡೆಂಟ್ಸ್ ಯೂನಿಯನ್ (ಎಜೆಎಸ್‌ಯು) 10, ಜೆಡಿಯು 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ. ಎಲ್‌ಜೆಪಿ 1 ಕ್ಷೇತ್ರದಲ್ಲಿ ಸ್ಪರ್ಧಿಸಿದೆ. ಜಾರ್ಖಂಡ್‌ನಲ್ಲಿ ಆದಿವಾಸಿ ಮತಗಳು ಬಹಳ ಮಹತ್ವ ಪಡೆದುಕೊಂಡಿವೆ. 2024ರ ಲೋಕಸಭೆ ಚುನಾವಣೆಯಲ್ಲಿ, ಪರಿಶಿಷ್ಟ ಜಾತಿಗೆ (ಎಸ್‌ಸಿ) ಮೀಸಲಿರುವ ಎಲ್ಲಾ 5 ಕ್ಷೇತ್ರಗಳಲ್ಲಿ ಇಂಡಿಯಾ ಮೈತ್ರಿಕೂಟ ಜಯಭೇರಿ ಬಾರಿಸಿತು. ಬಿಜೆಪಿಯು 2019ರ ವಿಧಾನಸಭೆ ಚುನಾವಣೆಯಲ್ಲಿ ಕೂಡ ಇಲ್ಲಿ ಹಿನ್ನಡೆ ಅನುಭವಿಸಿತ್ತು- ಪರಿಶಿಷ್ಟ ಪಂಗಡದ (ಎಸ್‌ಟಿ) 28 ಮೀಸಲು ಕ್ಷೇತ್ರಗಳ ಪೈಕಿ ಜೆಎಂಎಂ 25ರಲ್ಲಿ ಗೆದ್ದರೆ (ಶೇ 43ರಷ್ಟು ಮತ ಗಳಿಕೆ), ಬಿಜೆಪಿ ಬರೀ 2 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು (ಶೇ 34). ಒಡಿಶಾಗೆ ಹೊಂದಿಕೊಂಡಿರುವ, ಕೊಲ್ಹಾನ್ ಎಂದು ಕರೆಯಲಾಗುವ, ಜಾರ್ಖಂಡ್‌ನ ದಕ್ಷಿಣಕ್ಕಿರುವ ಪ್ರದೇಶಗಳು ಹಾಗೂ ಪಶ್ಚಿಮ ಬಂಗಾಳಕ್ಕೆ ಹೊಂದಿಕೊಂಡಿರುವ ಸಂಥಾಲ್ ಪರಗಣಾಸ್ ಪ್ರದೇಶ– ಈ ಎರಡು ವಿಭಾಗಗಳಲ್ಲಿ ರಾಜ್ಯದ ಶೇ 75ರಷ್ಟು ಎಸ್‌ಟಿ ಮೀಸಲು ಕ್ಷೇತ್ರಗಳಿವೆ.

ಈ ಮೀಸಲು ಕ್ಷೇತ್ರಗಳಲ್ಲಿ ಈ ಬಾರಿ ಹೆಚ್ಚಿನ ಕಡೆ ಗೆಲ್ಲಲು ಎರಡೂ ಬಣಗಳು ಭಾರಿ ಕಸರತ್ತು ನಡೆಸಿವೆ. ಅದರಲ್ಲೂ ಬಿಜೆಪಿಯು ಲೋಕಸಭೆ ಚುನಾವಣೆಯಲ್ಲಿ ಎಸ್‌ಟಿ ಕ್ಷೇತ್ರಗಳಲ್ಲಿ ಸೋಲು ಅನುಭವಿಸಿದ ಕಾರಣಕ್ಕಾಗಿ ಈ ಸಲ ಅನೇಕ ತಂತ್ರಗಳನ್ನು ಹೆಣೆಯುತ್ತಿದೆ. ಎಜೆಎಸ್‌ಯು ಜೊತೆಗಿನ ಅದರ ಮೈತ್ರಿ ಮಹತ್ವಪೂರ್ಣವಾದದ್ದು. ಈ ಮೈತ್ರಿಯಿಂದ ಬಿಜೆಪಿಗೆ ಆದಿವಾಸಿ ಕ್ಷೇತ್ರಗಳಲ್ಲಿ ಸಹಾಯವಾಗಲಿದೆ ಎಂಬ ವಿಶ್ಲೇಷಣೆಗಳಿವೆ. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಜೈಲುವಾಸ ಅನುಭವಿಸುತ್ತಿದ್ದಾಗ, ಆ ಗದ್ದುಗೆ ಏರಿದ್ದ ಚಂಪೈ ಸೊರೇನ್ ಅವರನ್ನು ಬಿಜೆಪಿ ತನ್ನೆಡೆಗೆ ಸೆಳೆದುಕೊಂಡಿತು. ಇದೀಗ ಪಕ್ಷವು ಅವರ ಜನಪ್ರಿಯತೆಯನ್ನು ಬಳಸಿಕೊಂಡು ಆದಿವಾಸಿ ಮತಗಳನ್ನು ಸೆಳೆಯುವ ಪ್ರಯತ್ನದಲ್ಲಿದೆ. ಚಂಪೈ ಅಲ್ಲದೆ ಅವರ ಪುತ್ರ ಬಾಬುಲಾಲ್ ಅವರಿಗೂ ಟಿಕೆಟ್ ಘೋಷಿಸಿದೆ. ಪರಿಶಿಷ್ಟ ಪಂಗಡಗಳಿಗೆ ಅನೇಕ ಸವಲತ್ತುಗಳ ಭರವಸೆ ನೀಡಿದೆ.

ಜೆಎಂಎಂ ನಾಯಕ ಹೇಮಂತ್ ಸೊರೇನ್ ತಮ್ಮ ನೇತೃತ್ವದ ಸರ್ಕಾರವು ಆದಿವಾಸಿಗಳ ಕಲ್ಯಾಣಕ್ಕಾಗಿ ಏನೇನು ಮಾಡಿದೆ ಎನ್ನುವುದನ್ನು ಒತ್ತಿ ಹೇಳುವುದರ ಜೊತೆಗೆ, ಕೇಂದ್ರದಲ್ಲಿನ ಅಧಿಕಾರಾರೂಢ ಬಿಜೆಪಿಯು 'ಸುಳ್ಳು' ಮೊಕದ್ದಮೆ ಹೂಡಿ ತಮ್ಮನ್ನು ಜೈಲಿಗಟ್ಟಿತ್ತು ಎಂದು ಪ್ರಚಾರ ಭಾಷಣದಲ್ಲಿ ಹೇಳುತ್ತಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ಬಿಜೆಪಿಯು ಇದು ಸಹಾನುಭೂತಿ ಗಿಟ್ಟಿಸುವ ತಂತ್ರ ಎಂದಿದೆ. ಆದಿವಾಸಿ ಅಲ್ಲದ ರಘುವರ ದಾಸ್ ಅವರನ್ನು ಬಿಜೆಪಿಯು 2014ರಲ್ಲಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದು, ಆದಿವಾಸಿಗಳು ಪಕ್ಷದಿಂದ ದೂರವಾಗಲು ಒಂದು ಪ್ರಮುಖ ಕಾರಣ ಎನ್ನಲಾಗಿದೆ. 2019ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸೋತಿದ್ದಷ್ಟೇ ಅಲ್ಲ, 'ಸ್ಟೀಲ್ ಸಿಟಿ' ಎಂದೇ ಹೆಗ್ಗಳಿಕೆಯಿರುವ ಜೆಮ್‌ಶೆಡ್‌ಪುರದಲ್ಲಿ (ಪೂರ್ವ) ಬಿಜೆಪಿಯ ಬಂಡಾಯ ಅಭ್ಯರ್ಥಿ ವಿರುದ್ಧ ದಾಸ್ ಹೀನಾಯ ಸೋಲು ಅನುಭವಿಸಿದರು.

ಬೇರೆ ರಾಜ್ಯಗಳಂತೆ ಇಲ್ಲಿ ಕೂಡ ಪ್ರಮುಖ ರಾಜಕಾರಣಿಗಳ ಸಂಬಂಧಿಗಳಿಗೆ ಎಲ್ಲ ಪಕ್ಷಗಳೂ ಮಣೆ ಹಾಕಿವೆ. 'ಕುಟುಂಬ ರಾಜಕಾರಣ' ಮಾಡುತ್ತವೆ ಎಂದು ಇತರ ಪಕ್ಷಗಳನ್ನು ದೂರುವ ಬಿಜೆಪಿ, ತಾನೂ ಈ ವಿಷಯದಲ್ಲಿ ಏನೂ ಕಡಿಮೆಯಿಲ್ಲ ಎಂದು ತೋರಿಸಿದೆ. ಮುಖ್ಯಮಂತ್ರಿಗಳಾಗಿದ್ದ ಅರ್ಜುನ್ ಮುಂಡಾ ಅವರ ಪತ್ನಿ ಮೀರಾ, ಚಂಪೈ ಸೊರೇನ್ ಅವರ ಪುತ್ರ ಬಾಬುಲಾಲ್, ರಘುವರ ದಾಸ್ ಅವರ ಸೊಸೆ ಪೂರ್ಣಿಮಾ, ಜೆಎಂಎಂ ಸ್ಥಾಪಕ ಶಿಬು ಸೊರೇನ್ ಅವರ ಸೊಸೆ ಸೀತಾ ಸೊರೇನ್, ಮಧು ಕೋಡಾ ಅವರ ಪತ್ನಿ ಗೀತಾ, ಸಂಸದ ಢುಲ್ಲು ಮಹತೊ ಅವರ ಸಹೋದರ ಶತ್ರುಘ್ನ ಮತ್ತಿತರರು ಬಿಜೆಪಿಯಿಂದ ಕಣದಲ್ಲಿದ್ದಾರೆ. ಜೆಎಂಎಂ ಹಾಗೂ ಕಾಂಗ್ರೆಸ್ ಸಹ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಜೆಎಂಎಂನಿಂದ ಹೇಮಂತ್, ಅವರ ಪತ್ನಿ ಕಲ್ಪನಾ, ಸಹೋದರ ಬಸಂತ್ ಮತ್ತಿತರರಿಗೆ ಟಿಕೆಟ್ ನೀಡಲಾಗಿದೆ.

ಹಿಂದಿನ ಬಾರಿ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದ ಕಲ್ಪನಾ, ಹೇಮಂತ್ ಜೈಲಿಗೆ ಹೋಗಿದ್ದಾಗ ಮಾಡಿದ ತಮ್ಮ ಭಾಷಣಗಳಿಂದ ಭಾರಿ ಜನಪ್ರಿಯತೆ ಗಳಿಸಿ ಈಗ 'ಸ್ಟಾರ್ ಪ್ರಚಾರಕಿ' ಆಗಿದ್ದಾರೆ. ಇವರನ್ನು 'ಯೂತ್ ಐಕಾನ್' ಎಂದೇ ಕರೆಯಲಾಗುತ್ತಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಾಬುಲಾಲ್ ಮರಂಡಿ ಅವರು ಧನ್‌ವರ್ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಇವರು ಹಿಂದೆ ಬಿಜೆಪಿಯನ್ನು ತ್ಯಜಿಸಿ ತಮ್ಮದೇ ಪಕ್ಷ ಕಟ್ಟಿ, ಬಳಿಕ ಅದನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಿದರು. ಗೀತಾ ಹಾಗೂ ಸೀತಾ ಈ ಬಾರಿಯ ಲೋಕಸಭಾ ಚುನಾವಣೆಗೆ ಮುನ್ನ ಬಿಜೆಪಿ ಸೇರಿ, ಸ್ಪರ್ಧಿಸಿ ಸೋತಿದ್ದರು. ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಕೂಡ 'ಆಯಾ ರಾಮ್-ಗಯಾ ರಾಮ್'ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಹಾಗೂ ಇವರಲ್ಲಿ ಅನೇಕರು ಟಿಕೆಟ್ ಗಿಟ್ಟಿಸುವಲ್ಲಿ ಯಶಸ್ವಿ ಆಗಿದ್ದಾರೆ. ಬಿಜೆಪಿಯು ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನು ಘೋಷಣೆ ಮಾಡಿಲ್ಲ. ಇಂಡಿಯಾ ಕೂಟ ಗೆದ್ದರೆ, ಹೇಮಂತ್ ಸೊರೇನ್ ಮುಖ್ಯಮಂತ್ರಿಯಾಗಿ ಮುಂದುವರಿಯುವುದರಲ್ಲಿ ಯಾವುದೇ ಸಂಶಯವಿಲ್ಲ.


ಜಾರ್ಖಂಡ್ ಚುನಾವಣೆಯ ಒಂದು ವೈಶಿಷ್ಟ್ಯವೆಂದರೆ, ಕಡಿಮೆ ಅಂತರದಲ್ಲಿ ಅಭ್ಯರ್ಥಿಗಳು ಗೆಲ್ಲುವುದು. 2019ರಲ್ಲಿ 9 ಕ್ಷೇತ್ರಗಳಲ್ಲಿ (2014ರಲ್ಲಿ ಈ ಸಂಖ್ಯೆ 19 ಇತ್ತು) ಗೆಲುವಿನ ಅಂತರ 5,000 ಮತಗಳಿಗೂ ಕಡಿಮೆಯಿತ್ತು. ಅತ್ಯಂತ ಕಡಿಮೆ ಅಂತರ ಇದ್ದದ್ದು ಸಿಮ್‌ಡೆಗ ಎನ್ನುವ ಕ್ಷೇತ್ರದಲ್ಲಿ– ಬರೀ 285 ಮತಗಳು. ಹಾಗಾಗಿ, ಈ ಎಲ್ಲೆಡೆ ಪ್ರತಿ ಮತಕ್ಕೂ ಸೆಣಸಾಟ ಇರುತ್ತದೆ. ರಾಜ್ಯದ 2.60 ಕೋಟಿ ಮತದಾರರಲ್ಲಿ 1.31 ಕೋಟಿ ಪುರುಷರು, 1.29 ಕೋಟಿ ಮಹಿಳೆಯರಿದ್ದಾರೆ. ಅನೇಕ ಕ್ಷೇತ್ರಗಳಲ್ಲಿ ಮಹಿಳಾ ಮತದಾರರ ಸಂಖ್ಯೆಯು ಪುರುಷರಿಗಿಂತ ಹೆಚ್ಚಾಗಿದೆ. ಹೀಗಾಗಿ, ಮಹಿಳಾ ಮತಗಳನ್ನು ಸೆಳೆಯಲು ಎರಡೂ ಮೈತ್ರಿಕೂಟಗಳು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿವೆ. ರಾಜ್ಯ ಸರ್ಕಾರದ 'ಮೈಯಾ ಸಮ್ಮಾನ್ ಯೋಜನಾ' ಮೂಲಕ 50 ಲಕ್ಷ ಮಹಿಳೆಯರಿಗೆ ಪ್ರತಿ ತಿಂಗಳು ₹ 1,000 ನೀಡಲಾಗುತ್ತಿದೆ. ಆಡಳಿತಾರೂಢ ಜೆಎಂಎಂ ಇದನ್ನು ₹ 2,500ಕ್ಕೆ ಏರಿಸುವ ಭರವಸೆ ನೀಡಿದ್ದರೆ, ಬಿಜೆಪಿಯು ಮಹಿಳೆಯರ ಖಾತೆಗೆ ₹ 2,100 ಜಮಾ ಮಾಡುವ ಭರವಸೆ ಇತ್ತಿದೆ.

ಐದಾರು ತಿಂಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಕೈ ಮೇಲಾಗಿದ್ದರೂ ಪ್ರಸಕ್ತ ವಿಧಾನಸಭೆ ಚುನಾವಣಾ ಕಣದಲ್ಲಿ ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟದ ನಡುವೆ ತೀವ್ರ ಸೆಣಸಾಟ ನಡೆಯುವ ಸಂಭವವಿದೆ.



ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ



ಸವಾಲ್– ಜವಾಬ್

• ಡಿ.ಎಸ್.ಲಿಂಗರಾಜು

ಊರಾಗಿನ ಜಮೀನಿಗೆ ಯಾವುದನ್ನಾ ಬೋರ್ಡಿನೋರು ಬೇಲಿ ಹಾಕ್ಯಂದವ್ರ ನೋಡಿ ಬರಮು ಅಂತ ಬಸ್ಸತ್ತಿದ್ದೆ. ಕಂಡಕ್ಟರ್ ಟಿಕೆಟ್ ಅಂತ ಒಬ್ಬಕೀನ್ನ ಕೇಳಿದಾಗ, ಆಕೆ ಆಧಾರ್ ತೆಗೆದು ಕಂಡಕ್ಟರ್ ಮಕ್ಕೆ ಹಿಡಿದಳು. 'ಈಗ ದೊರೆಸಾನಿಯಂಗೆ ಆಧಾರ್ ತೋರುಸ್ತೀಯಲ್ಲ, ನಾಳಾಕೆ ಫ್ರೀ ಶಕ್ತಿ ರದ್ದು ಮಾಡ್ತಾರಂತೆ ಆಗೇನು ಮಾಡೀಯೆ?' ಅಂತ ತಿವಿದ.

'ಅಲ್ಲಕಲಾ, ನಂಗೂ ಫ್ರೀ, ನಿಂಗೂ ಫ್ರೀ ಅಂತ ಕೊಟ್ಟುದರಿ. ನಾವೇನು ನಿಮಗೆ ಜುಲುಮೆ ಮಾಡಿದ್ವಾ' ಅಂದು ಸಪೋರ್ಟಿಗೆ ನನ್ನ ಕಡೆ ನೋಡಿದಳು. ನಾನು ಈ ಉಸಾಬರಿ ನನಗ್ಯಾಕೆ ಅಂತ ಪಕ್ಕದೇಲಿ ಕುಂತಿದ್ದ ಇಬ್ಬರ ಮಾತು ಕೇಳಿಸಿಕಂದು ಕೂತುದ್ದೆ.

'ಅಲ್ಲ ಕಾ ಅಣ್ತಮ್ಮ, ಗೇಮೆ ಮಾಡದು ಬುಟ್ಟು ಎತ್ತಗೆ ಹೊಂಟದೀಲಾ?' ಒಬ್ಬ ಕೇಳಿದ.

'ಗೇದು ಯಾಕೆ ಮೈನೋವು ಮಾಡಿಕ್ಯತ್ತೀರಿ ಅಂತ ಎಲ್ಲಾ ಫ್ರೀ ಕೊಡ್ತಾವ್ರಲ್ಲ ಮಾವ. ಈಗ ಎಲೆಕ್ಷನ್ ಬಂದದಲ್ಲಾ, ಸಂತೆ ಬಯಲಿಗೆ ಹೋಗಿ ನಿಂತುಗಂದರೆ ಲಾರೀಲಿ ಪ್ರಚಾರಕ್ಕೆ ಕರಕೋಗಿ ಸಂದೆಗೆ ಬಿರಿಯಾನಿ ಕೊಟ್ಟು ಕೈಗೆ ಏಡು ಸಾವಿರ ಕೊಡ್ತರೆ' ಅಂದ ಇನ್ನೊಬ್ಬ.

'ಯಂಗದೆ ಎಲೆಕ್ಷನ್ನು?'

'ಒಬ್ಬ ಕಣ್ಣಗೆ ನೀರಾಕ್ಯತನೆ. ಇನ್ನೊಬ್ಬ 'ನನಗಾಗಿರೋ ಅನ್ನೇಯ ಸರಿಮಾಡಕ್ಕೆ ನನಗೇ ವೋಟಾಕ್ರಿ' ಅಂತ ಕೊಸರಾಡತಾವ್ನೆ ಮಾವೋ. ಇನ್ನು ಮೂರು ವರ್ಸದೇಲಿ ಕಂಡಾಬಟ್ಟೆ ಅಭಿವೃದ್ಧಿ ಮಾಡಾರಂತೆ. ಎಲ್ಲಾರಿಗೂ ಇದೇ ಕರ್ಮಭೂಮಿಯಂತೆ'.

'ಕಾಸು-ಹೆಂಡ ಕೊಟ್ಟು ತೆವಲು ಹತ್ತಿಸ್ಯವರೆ, ಕರ್ಮ ನಮ್ಮದು ಕಪ್ಪಾ!'

'ಅದೀಯೆ, ನಾಳಾಕೆ ಏನನ್ನ ಜಂಬರ ಅಂತ ಇವರ ಮನೆ ಬಾಗಿಲಿಗೋದ್ರೆ ಇದ್ದೂ ಇಲ್ಲ ಅನ್ನಿಸಿಗ್ಯತರೆ. ಜಬರಿಸಿ ಕೇಳಕ್ಕೋದ್ರೆ ಮ್ಯಾಲೆ ನಾಯಿ ಬುಡ್ತರೆ. ಇವರ ಸವಾಲ್- ಜವಾಬ್ ಜಗಳವೇ ನಡೀತಾದೆ'.

'ಎಲ್ಲ ಪಕ್ಸದೋರೂ ಜಗಳಾಡಿಕ್ಯಲೀ ಬುಡ್ಲಾ, ಸತ್ಯ ಆಚೆಗೆ ಬತ್ತದೆ' ಅಂದ ಮಾವನ ಮಾತಿಗೆ ನನ್ನ ಮುಖದಲ್ಲೂ ನಗು ಕಾಣಿಸಿತು.

ಸಂಗತ

ಕೂಡಿ ಕಲಿ, ಉಂಡು ನಲಿ!

ಮಕ್ಕಳ ಊಟದ ಡಬ್ಬಿಗಳಲ್ಲಿ ಜಂಕ್‌ಫುಡ್ ಮತ್ತು ಹೋಟೆಲ್ ಆಹಾರ ಪದಾರ್ಥಗಳೇ ಹೆಚ್ಚಾಗಿ ಇರುವುದು ಅವರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ಶಿಕ್ಷಣ ಸಂಸ್ಥೆಯೊಂದರ ಮುಖ್ಯ ಅಧ್ಯಾಪಕರನ್ನು ಭೇಟಿಯಾಗಲು ಶಾಲೆಗೆ ಹೋಗಿದ್ದೆ. ಅವರು ಪರೀಕ್ಷಾ ಸಿದ್ಧತೆಯ ಸಭೆಯಲ್ಲಿ ಭಾಗಿಯಾಗಿದ್ದರು. ಸ್ವಲ್ಪ ಸಮಯ ಶಾಲೆಯ ಉಪವನದಲ್ಲಿ ಸುತ್ತಾಡತೊಡಗಿದೆ. ವಿದ್ಯಾರ್ಥಿಗಳು ಡಬ್ಬಿ ತೆರೆದು ಊಟ ಮಾಡುತ್ತಿದ್ದರು. ಹಲವು ಮಕ್ಕಳ ಡಬ್ಬಿಯಲ್ಲಿ ಬ್ರೆಡ್, ಬನ್, ಬಿಸ್ಕತ್ತು, ಚಾಕೊಲೇಟ್ ಇದ್ದವು. ಕೆಲವು ಮಕ್ಕಳ ಡಬ್ಬಿಗಳಲ್ಲಿ ಹೋಟೆಲ್ ತಿಂಡಿಗಳಿದ್ದವು. ಚಪಾತಿ, ರೊಟ್ಟಿ, ಪಲಾವ್, ಕಾಳು, ಮೊಟ್ಟೆ, ಅನ್ನದ ಪದಾರ್ಥ ತಂದಿದ್ದ ಮಕ್ಕಳ ಸಂಖ್ಯೆ ಕಡಿಮೆ ಇತ್ತು. ಬೆಳೆಯುತ್ತಿರುವ ಮಕ್ಕಳು ಗುಣಮಟ್ಟದ ಆಹಾರ ಸೇವನೆಯಿಂದ ವಂಚಿತರಾಗುತ್ತಿರುವುದನ್ನು ಕಂಡು ಬಹಳ ಬೇಸರವಾಯಿತು.

ಸ್ವಲ್ಪ ಸಮಯದ ನಂತರ ಮುಖ್ಯ ಅಧ್ಯಾಪಕರು ಭೇಟಿಯಾದರು. ಅವರ ಮುಂದೆ ಈ ವಿಷಯ ಪ್ರಸ್ತಾಪಿಸಿದೆ. ಅದಕ್ಕೆ ಅವರು, 'ಪಾಲಕರು ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಬೇಕೆಂದು ವಿಪರೀತ ಶ್ರಮಪಡುತ್ತಾರೆ. ಆದರೆ ಒಳ್ಳೆಯ ಆಹಾರ ಕೊಡುವುದರತ್ತ ಗಮನ ಕೊಡುವುದಿಲ್ಲ. ಮಕ್ಕಳ ಮಧ್ಯಾಹ್ನದ ಊಟಕ್ಕೆ ಮನೆಯಲ್ಲಿ ಸಿದ್ಧಪಡಿಸಿದ ಪೌಷ್ಟಿಕ ಆಹಾರ ಕಳಿಸಬೇಕು, ಜಂಕ್‌ಫುಡ್ ಕೊಡಬಾರದು ಎಂದು ಸುತ್ತೋಲೆಯ ಮೂಲಕ ಪಾಲಕರಿಗೆ ಸೂಚನೆ ನೀಡಿದ್ದೆ. ನಾನು ಎರಡನೆಯ ಬಾರಿ ಖಡಕ್ ಸೂಚನೆ ನೀಡಿದ ಮೇಲೆ ಪಾಲಕರ ದೊಡ್ಡ ಗುಂಪು ಸ್ಕೂಲಿಗೆ ಬಂದು, 'ಬೆಳಿಗ್ಗೆ 8 ಗಂಟೆಗೇ ಊಟ ಸಿದ್ಧಪಡಿಸಲು ಆಗುವುದಿಲ್ಲ. ನಮಗೆ ಕೆಲಸಕ್ಕೆ ಹೋಗುವ ಅವಸರ ಇರುತ್ತದೆ. ಒಳ್ಳೆಯ ಹೋಟೆಲ್ ಅಥವಾ ಬೇಕರಿಯಿಂದ ಆಹಾರ ಪದಾರ್ಥಗಳನ್ನು ತಂದು ಲಂಚ್ ಬಾಕ್ಸ್‌ಗಳಲ್ಲಿ ಹಾಕಿ ಕಳಿಸುತ್ತೇವೆ. ಮಕ್ಕಳು ಬಹಳ ಇಷ್ಟಪಡುತ್ತಾರೆ' ಎಂದು ಸಬೂಬು ಹೇಳಿಹೋದರು' ಎಂದು ತಮ್ಮ ಅಸಹಾಯಕತೆಯನ್ನು ವಿವರಿಸಿದರು.

ಖಾಸಗಿ ಶಾಲೆಗಳಲ್ಲಿ ಓದುವ ಮಕ್ಕಳ ಊಟದ ಡಬ್ಬಿಗಳು ಬಹಳ ಆಕರ್ಷಕವಾಗಿರುತ್ತವೆ. ಆದರೆ ಅನೇಕ ಮಕ್ಕಳ ಡಬ್ಬಿಗಳಲ್ಲಿ ಊಟ ಇರುವುದಿಲ್ಲ, ಬದಲಾಗಿ ಹೋಟೆಲ್ ಅಥವಾ ಬೇಕರಿ ತಿನಿಸುಗಳು ತುಂಬಿಕೊಂಡಿರುತ್ತವೆ. ಮುಂಜಾನೆ ಶಾಲೆಯ ಬಸ್ ಬರುವ ವೇಳೆಗೆ ಬಿಸಿ ಅಡುಗೆ ಸಿದ್ಧಪಡಿಸುವುದು ಪಾಲಕರಿಗೆ ಸಾಧ್ಯವಾಗದ್ದರಿಂದ ಅವರು ಇಂತಹ ಆಹಾರ ಪದಾರ್ಥಗಳನ್ನು ಕಳಿಸುತ್ತಾರೆ. ಆದರೆ ಇದರಿಂದ ಮಕ್ಕಳ ಆರೋಗ್ಯದ ಮೇಲೆ ಆಗುವ ವಿಪರೀತ ಪರಿಣಾಮಗಳ ಬಗ್ಗೆ ಅವರು ಗಮನ ಕೊಡದಿರುವುದು ಬಹಳ ನೋವಿನ ಸಂಗತಿ.

1990ರ ದಶಕದವರೆಗೆ ನಗರಗಳಲ್ಲಿ ಇದ್ದು ಕಲಿಯುತ್ತಿದ್ದ ವಿದ್ಯಾರ್ಥಿಗಳು ತಮ್ಮ ಹಳ್ಳಿಗಳಿಂದ ಬಸ್‌ಗಳ ಮೂಲಕ ಬುತ್ತಿ ತರಿಸಿಕೊಳ್ಳುತ್ತಿದ್ದರು. ಆಗ 'ಬಸ್ ಬುತ್ತಿ ಪಾಸ್' ವ್ಯವಸ್ಥೆ ಇತ್ತು. ನಾನು 70– 80ರ ದಶಕದಲ್ಲಿ ಗೋಕಾಕಿನಲ್ಲಿ ಓದುವಾಗ, ಊರಿನಿಂದ ಬುತ್ತಿ ತರಿಸಿ ಸಹಪಾಠಿಗಳೊಂದಿಗೆ ಹಂಚಿಕೊಂಡು ಊಟ ಮಾಡುತ್ತಿದ್ದೆ. ಈಗ ಆ ಸೊಬಗು ಮಾಯವಾಗಿದೆ. ಊಟವು ಮಕ್ಕಳಿಗೆ ಸಂಭ್ರಮವಾಗಬೇಕು. ಊಟ ಮಾಡಿದ ಕೂಡಲೇ ಉತ್ಸಾಹ ಹೆಚ್ಚಿ ಅವರ ಮುಖದ ಮೇಲೆ ಕಳೆ ಮೂಡಬೇಕು.

ಪೌಷ್ಟಿಕ ಸಮತೋಲಿತ ಆಹಾರವು ಮಕ್ಕಳ ಕಲಿಕೆ ಮತ್ತು ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಗತ್ಯ ಆಹಾರ ಪೋಷಕಾಂಶಗಳಿಂದ ವಂಚಿತರಾಗುವ ಮಕ್ಕಳು ಏಕಾಗ್ರತೆ, ಜ್ಞಾಪಕಶಕ್ತಿ ಮತ್ತು ಉತ್ಸಾಹದ ಕೊರತೆಯಿಂದ ಬಳಲುತ್ತಾರೆ. ಜಂಕ್ ಫುಡ್ ಮತ್ತು ಹೋಟೆಲ್ ಆಹಾರ ಪದಾರ್ಥಗಳನ್ನು ಉಪಾಹಾರ ಹಾಗೂ ಊಟವಾಗಿ ಮಕ್ಕಳು ಸೇವಿಸುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಇದು ಅಧಿಕ ತೂಕ, ಸ್ಥೂಲಕಾಯ, ರೋಗನಿರೋಧಕ ಶಕ್ತಿಯ ಕೊರತೆಗೆ ಕಾರಣವಾಗುತ್ತದೆ. ತಾಳ್ಮೆ, ಹೊಂದಾಣಿಕೆಯ ಮನೋಭಾವ ಕಡಿಮೆಯಾಗಿ ಬದುಕಿನ ಬಗ್ಗೆ ಆಸಕ್ತಿ ಕಳೆದುಕೊಳ್ಳುವ ಅಪಾಯ ಕೂಡ ಇರುತ್ತದೆ.

ಇನ್ನೊಂದು ನೋವಿನ ಸಂಗತಿ ಎಂದರೆ, ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಶಾಲಾ ಕಾಲೇಜುಗಳ ಆವರಣದಲ್ಲಿ ವಿದ್ಯಾರ್ಥಿಗಳಿಗಾಗಿ ಕ್ಯಾಂಟೀನ್‌ಗಳನ್ನು ನಡೆಸುತ್ತಿವೆ. ಇವುಗಳಲ್ಲಿ ಕೆಲವು ಕ್ಯಾಂಟೀನ್‌ಗಳ 'ಸೇವೆ' ಇನ್ನೂ ಭಯಾನಕವಾಗಿದೆ. ಇವುಗಳಿಗೆ ಆಹಾರ ಪದಾರ್ಥಗಳನ್ನು ಕೆಲವು ಏಜೆನ್ಸಿಗಳು ಪೂರೈಸುತ್ತಿವೆ. ನಸುಕಿನಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು ಪುನಃ ಬಿಸಿ ಮಾಡಿ ಮಕ್ಕಳಿಗೆ ದಿನವಿಡೀ ನೀಡಲಾಗುತ್ತದೆ. ಈ ಪದಾರ್ಥಗಳು ರುಚಿ ಮತ್ತು ಪೌಷ್ಟಿಕತೆಯನ್ನು ಕಳೆದುಕೊಂಡಿರುತ್ತವೆ.



ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಕ್ಕಳಿಗೆ ಪೂರೈಸುವ ಬಿಸಿಯೂಟ ಅವರ ಆರೋಗ್ಯ ಮತ್ತು ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಖಾಸಗಿ ಶಾಲೆಯಲ್ಲಿ ಓದುವ ಮಕ್ಕಳಿಗೂ ಉತ್ತಮ ಊಟ ಸಿಗುವ ವ್ಯವಸ್ಥೆಯನ್ನು ಪಾಲಕರು ಮತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುವವರು ಕಡ್ಡಾಯವಾಗಿ ಮಾಡಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿ ಎಸ್.ಆರ್.ಮನಹಳ್ಳಿ ಅವರು ಹೇಳುವ ಮಾತನ್ನು ಎಲ್ಲರೂ ಪಾಲಿಸಬೇಕಾಗಿದೆ.

ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಲಿ ಎಂಬ ಹಂಬಲದಿಂದ ಹೆಚ್ಚು ಹಣ ಸುರಿದು ಖಾಸಗಿ ಶಾಲೆಗಳಿಗೆ ಸೇರಿಸುವ ಪಾಲಕರು, ಅವರ ಊಟ, ಉಪಾಹಾರ, ಆರೋಗ್ಯದ ಬಗ್ಗೆಯೂ ಗಮನಕೊಡಬೇಕಾದ ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ಇದಕ್ಕೆ ಕಟ್ಟುನಿಟ್ಟಾಗಿ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಖಾಸಗಿ ಶಾಲೆಗಳು ಕೂಡ ಗುಣಮಟ್ಟದ ಬಿಸಿಯೂಟ ತಯಾರಿಸಿ ಮಕ್ಕಳಿಗೆ ಉಣಬಡಿಸುವ ಯೋಜನೆ ರೂಪಿಸುವುದು ಅವಶ್ಯ. 'ಊಟವು ಆರೋಗ್ಯ, ಆಯುಷ್ಯ, ಸಂತೋಷವನ್ನು ನಿರ್ಧರಿಸುತ್ತದೆ. ಆರೋಗ್ಯಪೂರ್ಣ ಯುವಜನ ದೇಶದ ಸಂಪತ್ತು' ಎನ್ನುವ ಮಾತನ್ನು ಮರೆಯದಿರೋಣ.

ವಾಚಕರ ವಾಣಿ

ರೈತ ವಿರೋಧಿಯಲ್ಲ, ತರ್ಕಬದ್ಧ ನಡೆ

ಸಾಲ ಮರುಪಾವತಿಸದ ರೈತರಿಗೆ ತಿಳಿವಳಿಕೆ ಪತ್ರ ನೀಡಿ, ಅದಕ್ಕೆ ಅವರು ಸ್ಪಂದಿಸದೇ ಇದ್ದರೆ ಅವರ ವಿರುದ್ಧ ದಾವೆ ದಾಖಲಿಸುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ನಾನೊಬ್ಬ ರೈತನಾಗಿ ಹೀಗೆ ಹೇಳುವುದು ರೈತ ವಿರೋಧಿಯಾಗಿ ಕಾಣಬಹುದು. ಆದರೆ ಇದು ನಿಜಕ್ಕೂ ತರ್ಕಬದ್ಧವಾದುದು.

ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ, ಇತರ ಸಹಕಾರ ಸಂಸ್ಥೆಗಳಲ್ಲಿ ಶೇಕಡ 3ರ ಬಡ್ಡಿ ದರದಲ್ಲಿ ಸರ್ಕಾರ ಸಾಲ ನೀಡುತ್ತಿದೆ. ಇಷ್ಟು ಕಡಿಮೆ ಬಡ್ಡಿಯಲ್ಲಿ ಬೇರೆ ಎಲ್ಲೂ ರೈತರಿಗೆ ಸಾಲ ಸಿಗುವುದಿಲ್ಲ. ಸರಿಯಾಗಿ ಕಟ್ಟಿದರೆ ಮತ್ತೆ ಸಾಲ ಸಿಗುತ್ತದೆ. ಈ ಸವಲತ್ತನ್ನು ಅವರು ಸರಿಯಾಗಿ ಬಳಸಿಕೊಳ್ಳದೇ ಸುಸ್ತಿಯಾಗಿ ಸಹಕಾರಿ ಸಂಸ್ಥೆಗಳ ಅವನತಿಗೆ ಕಾರಣವಾಗುವುದು ಸರಿಯೇ? ಸಣ್ಣ ಮತ್ತು ಅತಿ ಸಣ್ಣ ರೈತರು ಸರಿಯಾಗಿ ಪಾವತಿ ಮಾಡುತ್ತಿರುತ್ತಾರೆ. ಶ್ರೀಮಂತ ರೈತರೇ ಸಾಲಮನ್ನಾದ ಆಸೆಗೆ ಬಲಿಬಿದ್ದು, ಕಟ್ಟಲು ಶಕ್ತಿ ಇದ್ದರೂ ಹಾಗೇ ಉಳಿಸಿಕೊಂಡಿರುತ್ತಾರೆ. ಇದು ಖಂಡಿತ ಅಕ್ಷಮ್ಯ. ಆದ್ದರಿಂದ ಯಾವುದೇ ಮುಲಾಜಿಲ್ಲದೆ ಸಾಲ ವಸೂಲು ಮಾಡುವ ಸರ್ಕಾರದ ಈ ಕ್ರಮ ಒಳ್ಳೆಯದೇ. ಆದರೆ ಇದು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕಷ್ಟೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಚಿತ್ರರಂಗದ ಪ್ರತಿಭಾವಂತರಿಗೆ ಬೇಕು ಅಭಯ

ಪ್ರತಿಭಾವಂತ ನಿರ್ದೇಶಕ ಗುರುಪ್ರಸಾದ್ ಅವರ ಅಕಾಲಿಕ ವಿದಾಯವು ಚಲನಚಿತ್ರ ರಂಗದ ಕಷ್ಟಕಾರ್ಪಣ್ಯಗಳ ಪ್ರತಿಬಿಂಬವಾಗಿದೆ. ಮಚ್ಚು, ಲಾಂಗು, ಅದ್ದೂರಿಯನ್ನೇ ನೆಚ್ಚಿಕೊಳ್ಳುತ್ತಾ ಗ್ಲಾಮರ್ ಛಾಯೆಯೊಳಗೆ ಬದುಕುವ ಅನಿವಾರ್ಯದೊಂದಿಗೆ ಚಿತ್ರರಂಗ ಹೋರಾಡುತ್ತಿದೆ. ಚಿತ್ರ ನಿರ್ಮಾಣಕ್ಕಾಗಿ ಮನೆಮಠ ಕಳೆದುಕೊಂಡವರ ಸಂಖ್ಯೆಯೇನೂ ಕಡಿಮೆಯಿಲ್ಲ. 'ಅಭಿಮಾನ್' ಸ್ಟುಡಿಯೊ ನಿರ್ಮಿಸಿದ ಹಾಸ್ಯನಟ ಬಾಲಕೃಷ್ಣ ಅವರು ಸಾಲ ತೀರಿಸಲಾಗದೆ ನೋವಿನಲ್ಲೇ ಅಂತ್ಯವಾದರು. ಸರ್ಕಾರದಿಂದಲೂ ಅವರಿಗೆ ಸಕಾಲಕ್ಕೆ ಸಹಾಯ ದೊರೆಯಲಿಲ್ಲ. ದ್ವಾರಕೀಶ್ ಅವರ ಕತೆ ಇದಕ್ಕಿಂತ ಭಿನ್ನವಾಗಿರಲಿಲ್ಲ. ಕನ್ನಡಕ್ಕೆ ಉತ್ತಮ ಚಿತ್ರಗಳನ್ನು ಕೊಟ್ಟ ದ್ವಾರಕೀಶ್ ಅವರೂ ಸಾಲದ ಕಾರಣದಿಂದ, ಕಷ್ಟಪಟ್ಟು ದುಡಿದ ಆಸ್ತಿಯನ್ನೆಲ್ಲ ಕಳೆದುಕೊಂಡರು. ಇಂತಹ ಉದಾಹರಣೆಗಳ ಸಾಲಿನಲ್ಲಿ ಇನ್ನಷ್ಟು ನಿರ್ಮಾಪಕರು ಇದ್ದಾರೆ. ಸಾಮಾಜಿಕ ಮೌಲ್ಯಗಳನ್ನು ಎತ್ತರಿಸುವ ಉದ್ದೇಶದಿಂದ ಮಾಡಿದ ಚಿತ್ರಗಳು ನೆಲಕಚ್ಚುತ್ತಿವೆ. ಮೌಢ್ಯ, ದೃಶ್ಯವೈಭವ, ಮಸಾಲೆ ಅಂಶಗಳಿಂದ ಕೂಡಿದ ಕೆಲವು ಚಿತ್ರಗಳು ನಾಲ್ಕು ಕಾಸು ಮಾಡುತ್ತಿವೆ. ಚಿತ್ರನಿರ್ಮಾಪಕರಿಗೆ ಸಾಲ ಕೊಡಲಿಕ್ಕಾಗಿಯೇ ಕೆಲವು ವಲಯಗಳಿವೆ. ಆ ವಲಯದವರು ವಿಪರೀತ ಬಡ್ಡಿ ವಿಧಿಸುತ್ತಾರೆ. ಭಯದ ವಾತಾವರಣ ಸೃಷ್ಟಿಸಿ ವಸೂಲಿ ಮಾಡುತ್ತಾರೆ.

ಚಿತ್ರರಂಗದ ಪ್ರತಿಭಾವಂತ ನಿರ್ದೇಶಕರು, ಬದ್ಧತೆಯುಳ್ಳ ನಿರ್ಮಾಪಕರನ್ನು ಆತಂಕದಿಂದ ಪಾರು ಮಾಡುವ ಕ್ರಮಗಳತ್ತ ಸಂಬಂಧಿಸಿದ ಸಂಸ್ಥೆಗಳು, ಸರ್ಕಾರ ಚಿಂತಿಸಬೇಕು. ನಮ್ಮ ಚಿತ್ರರಂಗ ನಮ್ಮ ಆಸ್ತಿ. ಅದರ ಭಾಗವಾಗಿರುವ ನಿರ್ದೇಶಕ, ನಿರ್ಮಾಪಕರನ್ನು ಉಳಿಸಿಕೊಳ್ಳುವ ಕೆಲಸ ಆಗಬೇಕು.

ತಿರುಪತಿ ನಾಯಕ್, ಕಲಬುರಗಿ

ರಸ್ತೆ ಮಾಡಿಸಿದ ದುಡ್ಡು ಯಾರದ್ದು?

'ನನ್ನ ಅಪ್ಪ ಮಾಡಿಸಿದ್ದ ಗುಣಮಟ್ಟದ ರಸ್ತೆಯಲ್ಲಿಯೇ ಈಗ ಕಾಂಗ್ರೆಸ್‌ನವರು ಪ್ರಚಾರ ನಡೆಸುತ್ತಿದ್ದಾರೆ' ಎಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ಹೇಳಿರುವುದು (ಪ್ರ.ವಾ., ನ. 4) ಹಾಸ್ಯಾಸ್ಪದ ಹಾಗೂ ಅಪ್ರಬುದ್ಧ ನುಡಿ. ಭರತ್ ಅವರ ತಂದೆ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಅವರು ಈ ಹಿಂದೆ ಶಿಗ್ಗಾವಿ ಕ್ಷೇತ್ರದ ಶಾಸಕರಾಗಿದ್ದಾಗ ರಸ್ತೆಗಳನ್ನು ಮಾಡಿಸಿರಬಹುದು. ಆದರೆ 'ಆ ರಸ್ತೆಯನ್ನು ಮಾಡಿಸಲು ಬಳಸಿರುವ ಹಣ ಯಾರದ್ದು?' ಎಂದು ಯಾರಾದರೂ ಪ್ರಶ್ನಿಸಿದರೆ ಅದು ಖಂಡಿತ ಉದ್ಧಟತನವಾಗದು.

ಇದು ಪ್ರಜಾಪ್ರಭುತ್ವ. ಜನಪ್ರತಿನಿಧಿ ತಾನು ಗೆದ್ದ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕು. ಅದು ಅವರ ಕರ್ತವ್ಯ. ಮಾಡಿರುವ ಕರ್ತವ್ಯವನ್ನು ಹೇಳಿಕೊಳ್ಳಲು ಅಡ್ಡಿಯೇನೂ ಇರದು. ಆದರೆ ಅದನ್ನೀಗ ಕಾಂಗ್ರೆಸ್ಸಿನವರು ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ಮಾತ್ರ ಆಕ್ಷೇಪಾರ್ಹ. ಹಾಗಾದರೆ ಬಿಜೆಪಿಯವರು ಮಾತ್ರ ಓಡಾಡಲು ರಸ್ತೆಯನ್ನು ಮಾಡಿಸಿದ್ದರೇ ಎಂಬ ಪ್ರಶ್ನೆಯೂ ಏಳುತ್ತದೆ. ಅಲ್ಲದೆ ಕ್ಷೇತ್ರದ ಅಭಿವೃದ್ಧಿಗೆ ಸ್ವಂತ ಜೇಬಿನಿಂದ ಹಣವನ್ನೇನೂ ಭರಿಸುವುದಿಲ್ಲ. ಇದನ್ನೆಲ್ಲ ಸರ್ಕಾರದ ಅಂದರೆ ಸಾರ್ವಜನಿಕರ ತೆರಿಗೆಯ ಹಣದಿಂದಲೇ ಮಾಡಿರುವುದು. ಬಡ ಬೋರೇಗೌಡನ ಹಣವೂ ಅದರಲ್ಲಿ ಸೇರಿರುತ್ತದೆ. ಇದರ ಅರಿವಿದ್ದರೆ, ಭರತ್ ಬೊಮ್ಮಾಯಿ ಅವರು ಈ ರೀತಿ ಬಾಲಿಶವಾಗಿ ಮಾತನಾಡುತ್ತಿರಲಿಲ್ಲವೇನೊ!

ಆರ್.ಎಸ್.ಅಯ್ಯರ್, ತುಮಕೂರು

ಕಲಿಸಬೇಕಿದೆ ಜೀವನಾವಶ್ಯಕ ವಿದ್ಯೆ

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಕಮ್ಮತ್ತನಹಳ್ಳಿಯ ಕುಂಟೆಯಲ್ಲಿ ಮುಳುಗಿ ಒಂದೇ ಕುಟುಂಬದ ಮೂವರು ಸಾವಿಗೀಡಾಗಿರುವುದು ವರದಿಯಾಗಿದೆ. ಸತ್ತವರಲ್ಲಿ ಇಬ್ಬರು ಯುವಕರು ಮತ್ತು ಒಬ್ಬ ಯುವತಿ ಸೇರಿದ್ದಾರೆ. ಇವರೆಲ್ಲ ವಿದ್ಯಾವಂತರು. ಆದರೆ, ಈಜು ಕಲಿಯುವುದನ್ನು ಮರೆತವರು. ಜೀವನಕ್ಕೆ ಅಗತ್ಯವಾದ ವಿದ್ಯೆಗಳನ್ನು ಕಲಿಯದೇ ಹೋದರೆ ಪ್ರಾಣವನ್ನೇ ಬಲಿಕೊಡಬೇಕಾಗಬಹುದು ಎಂಬುದಕ್ಕೆ ಇದು ನಿದರ್ಶನವಾಗಿದೆ. ನಾವೆಲ್ಲ ಪ್ರಾಥಮಿಕ ಶಾಲೆಯಲ್ಲಿ ಇದ್ದಾಗಲೇ ಮರ ಏರುವುದು, ಸೈಕಲ್ ತುಳಿಯುವುದು, ಈಜು ಹೊಡೆಯುವುದು, ಲಾಗ ಹಾಕುವುದನ್ನೆಲ್ಲ ಕಲಿತಿದ್ದೆವು.

ಭೂಮಿಯ ಮೇಲೆ ನೀರೇ ಹೆಚ್ಚಾಗಿ ಇರುವುದು. ಕಡಲಲ್ಲಿ ಯಾವಾಗ ಬೇಕಾದರೂ ಸುನಾಮಿ ಏಳಬಹುದು, ಆಗಾಗ ಸುರಿಯುವ ಅತಿಯಾದ ಮಳೆಯಿಂದ ನಗರಗಳಲ್ಲೇ ಪ್ರವಾಹದಂತಹ ಸ್ಥಿತಿ ಸೃಷ್ಟಿಯಾಗಬಹುದು. ಆಗೆಲ್ಲ ಪ್ರಯೋಜನಕ್ಕೆ ಬರುವುದು ಈಜಿನಂತಹ ವಿದ್ಯೆಯೇ ವಿನಾ ಪದವಿಗಳಲ್ಲ. ಕೋವಿಡ್‌ನಂತಹ ಸಂದರ್ಭಗಳಲ್ಲಿ ಪೆಟ್ರೋಲ್, ಡೀಸೆಲ್ ಸಿಗದೆ ಇರುವ ಸಾಧ್ಯತೆಯೂ ಸೃಷ್ಟಿಯಾಗಬಹುದು. ಆಗ ನಮ್ಮ ನೆರವಿಗೆ ಬರುವುದು ಸೈಕಲ್. ಹಾಗಾಗಿ, ಇಂದಿನ ಮಕ್ಕಳಿಗೆ ಈಜು, ಸೈಕಲ್ ತುಳಿಯುವಂತಹ ವಿದ್ಯೆಗಳನ್ನು ಕಲಿಸುವುದೂ ಮುಖ್ಯವಾಗುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಮೆರಿಕ ಚುನಾವಣೆ ಕೌತುಕ

ವಲಸೆ ವಿರೋಧಿ ಡೊನಾಲ್ಡ್ ಟ್ರಂಪ್ ವಿರುದ್ಧ ವಲಸಿಗ ದಂಪತಿ ಮಗಳು ಕಮಲಾ ಹ್ಯಾರಿಸ್ ಸ್ಪರ್ಧೆ

ಇಂದು (ನ.5) ಅಮೆರಿಕದ ಅಧ್ಯಕ್ಷೀಯ ಚುನಾವಣೆ. ವಿಶ್ವದ 'ದೊಡ್ಡಣ್ಣ' ಎನಿಸಿರುವ ಅಮೆರಿಕದ ಆಡಳಿತ ಚುಕ್ಕಾಣಿ ಹಿಡಿಯಲು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಮತ್ತು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ನಡುವಿನ ಹೋರಾಟ ಅಂತಿಮ ಘಟ್ಟ ತಲುಪಿದೆ. ಆಕ್ರಮಣಕಾರಿ ಸ್ವಭಾವದ ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾಗುವರೇ ಅಥವಾ ವರ್ಣೀಯ ಮಹಿಳೆ ಕಮಲಾ ಹ್ಯಾರಿಸ್ ಆಯ್ಕೆ ಆಗುವ ಮೂಲಕ ಅಮೆರಿಕದಲ್ಲಿ ಇತಿಹಾಸ ಸೃಷ್ಟಿಯಾಗುವುದೇ ಎನ್ನುವ ಕುತೂಹಲ ಮೂಡಿದೆ



ಕಮಲಾ ಹ್ಯಾರಿಸ್ | ಡೊನಾಲ್ಡ್ ಟ್ರಂಪ್

2020ರಲ್ಲಿ ನಡೆದಿದ್ದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಜೋ ಬೈಡನ್ ವಿರುದ್ಧ ಸೋಲು ಕಂಡಿದ್ದ ಡೊನಾಲ್ಡ್ ಟ್ರಂಪ್ ಅವರ ರಾಜಕೀಯ ಭವಿಷ್ಯ ಮುಗಿದೇಹೋಯಿತು ಎಂದೇ ಬಹುತೇಕರು ಭಾವಿಸಿದ್ದರು. ಆದರೆ, ಅಂಥವರ ನಿರೀಕ್ಷೆ ಹುಸಿಯಾಗಿದೆ. ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಲು ಮೂರನೇ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಕಮಲಾ ಹ್ಯಾರಿಸ್ ವಿರುದ್ಧ ಜಿದ್ದಾಜಿದ್ದಿನ ಹೋರಾಟ ನಡೆಸಿದ್ದಾರೆ. ಇಬ್ಬರ ನಡುವೆ ಸಮಬಲದ ಹೋರಾಟ ಏರ್ಪಟ್ಟಿದೆ ಎಂದು ಹೆಚ್ಚಿನ ಸಮೀಕ್ಷೆಗಳು ಅಂದಾಜಿಸಿವೆ.

ಟ್ರಂಪ್ ವಿರುದ್ಧ ನಾಲ್ಕು ಕ್ರಿಮಿನಲ್ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳು ನ್ಯಾಯಾಲಯಗಳಲ್ಲಿವೆ. ನೀಲಿ ಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರಿಗೆ ತಮ್ಮ ಕಂಪನಿಯಿಂದ ಹಣ ವರ್ಗಾಯಿಸಿದ್ದ ಪ್ರಕರಣದಲ್ಲಿ ಅವರು ದೋಷಿ ಎಂದು ನ್ಯಾಯಾಲಯ ಈಗಾಗಲೇ ತೀರ್ಪು ನೀಡಿದೆ. ಜತೆಗೆ ಚುನಾವಣಾ ಪ್ರಚಾರದ ವೇಳೆ ಎರಡು ಬಾರಿ ಅವರ ಹತ್ಯೆ ಯತ್ನ ನಡೆದಿದೆ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಛಲ ಬಿಡದ ಟ್ರಂಪ್, ಗೆಲುವಿಗಾಗಿ ಸರ್ವಪ್ರಯತ್ನವನ್ನೂ ನಡೆಸಿದ್ದಾರೆ. ಟ್ರಂಪ್ ಹೋರಾಟ ಎಷ್ಟು ತೀವ್ರವಾಗಿತ್ತೆಂದರೆ, ಪ್ರತಿಸ್ಪರ್ಧಿಯಾಗಿದ್ದ ಜೋ ಬೈಡನ್ ದುರ್ಬಲ ಅನ್ನಿಸಿಕೊಂಡು ಕಣದಿಂದಲೇ ನಿರ್ಗಮಿಸಬೇಕಾಯಿತು. ಆಗ ಟ್ರಂಪ್‌ಗೆ ಎದುರಾಳಿಯಾಗಿ ಬಂದವರು ವಕೀಲರಾದ ಭಾರತ ಮೂಲದ ಕಮಲಾ ಹ್ಯಾರಿಸ್.

ಟ್ರಂಪ್ ವಲಸೆ ವಿರೋಧಿ. ಕಮಲಾ ಹ್ಯಾರಿಸ್ ವಲಸಿಗ ದಂಪತಿಯ ಪುತ್ರಿ. ಅವರ ತಾಯಿ ಭಾರತ ಮೂಲದವರಾದರೆ, ತಂದೆ ಜಮೈಕಾ ಮೂಲದವರು. ಬ್ರಿಟನ್ನಿನ ಮಾಜಿ ಪ್ರಧಾನಿ ರಿಷಿ ಸುನಕ್ ಭಾರತದೊಂದಿಗಿನ ತಮ್ಮ ನಂಟನ್ನು ಬಹಿರಂಗವಾಗಿ ಹೇಳಿಕೊಂಡಿದ್ದರು. ಆದರೆ, ಕಮಲಾ ಅವರು ಆಫ್ರಿಕನ್ ಕೆರೀಬಿಯನ್ ಮೂಲದ ಬಗ್ಗೆ ಹೇಳಿಕೊಂಡಷ್ಟು ಭಾರತ ಮೂಲದ ಬಗ್ಗೆ ಹೇಳಿಕೊಂಡಿಲ್ಲ. ಆದರೂ ಅವರ ಭಾರತ ಮೂಲವನ್ನು ಉಲ್ಲೇಖಿಸಿ ಪ್ರಚಾರ ಮಾಡಲಾಗುತ್ತಿದೆ.

ಈ ಬಾರಿಯ ಚುನಾವಣಾ ಅಖಾಡದಲ್ಲಿ ಹಲವು ವಿಚಾರಗಳು ಹೆಚ್ಚು ಚರ್ಚೆಗೆ ಒಳಗಾಗಿವೆ. ಹಣದುಬ್ಬರ, ವಲಸೆ ನೀತಿ, ವಿದೇಶಾಂಗ ನೀತಿ, ತೆರಿಗೆ, ಗರ್ಭಪಾತ ಚುನಾವಣೆ ಮೇಲೆ ಪ್ರಭಾವ ಬೀರುವ ಅಂಶಗಳಾಗಿವೆ. ಇವುಗಳ ಜತೆಗೆ, ವ್ಯಾಪಾರ, ಹವಾಮಾನ, ಆರೋಗ್ಯ ಸೇವೆ, ಮಾದಕ ವಸ್ತು, ಬಂದೂಕು ಕೂಡ ಮುಖ್ಯ ವಿಷಯಗಳಾಗಿವೆ. ಬಂದೂಕು, ಮಾದಕ ದ್ರವ್ಯದಂಥ ವಿಚಾರಗಳಲ್ಲಿ 'ಜನಸ್ನೇಹಿ' ನೀತಿ ಅನುಸರಿಸುವುದಾಗಿಯೂ, ಗರ್ಭಪಾತದಂಥ ವಿಚಾರದಲ್ಲಿ ನ್ಯಾಯಾಲಯದ ಆದೇಶ ಪಾಲಿಸುವುದಾಗಿಯೂ ಟ್ರಂಪ್ ಆಕ್ರಮಣಕಾರಿ ಶೈಲಿಯಲ್ಲಿ ತಮ್ಮ ಭರವಸೆಗಳನ್ನು ಮತದಾರರ ಮುಂದಿಟ್ಟಿದ್ದಾರೆ. ವಲಸೆ ವಿಚಾರದಲ್ಲಿ ಅವರ ಕಠಿಣ ನಿಲುವಿಗೆ ಅವರ ಹಿಂದಿನ ಆಡಳಿತವೇ ನಿದರ್ಶನವಾಗಿದೆ. ಕಮಲಾ ಅವರು ಗರ್ಭಪಾತದ ಹಕ್ಕಿನ ಪರವಾಗಿರುವುದು ಸೇರಿದಂತೆ ಮುಖ್ಯ ವಿಷಯಗಳಲ್ಲಿ ತಮ್ಮ ನಿಲುವುಗಳೇನು ಎನ್ನುವುದನ್ನು ಜನರ ಮುಂದಿಟ್ಟು ಮತ ಯಾಚನೆ ಮಾಡಿದ್ದಾರೆ.

ಅಮೆರಿಕದಲ್ಲಿ 50 ರಾಜ್ಯಗಳಿದ್ದು, ಏಳು ರಾಜ್ಯಗಳ– ಅರಿಜೋನಾ, ಪೆನ್ಸಿಲ್ವೇನಿಯಾ, ನಾರ್ತ್ ಕೆರೊಲಿನಾ, ನೆವಾಡಾ, ಜಾರ್ಜಿಯಾ, ಮಿಷಿಗನ್ ಮತ್ತು ವಿಸ್ಕಾನ್‌ಸಿನ್– ಮತಗಳು ನಿರ್ಣಾಯಕವಾಗಿವೆ. ಟ್ರಂಪ್ ಮತ್ತು ಕಮಲಾ ಇಬ್ಬರೂ ಸಮಬಲದಿಂದ ಹೋರಾಟ ನಡೆಸಿದ್ದು, ಗೆಲುವಿಗಾಗಿ ಕೊನೆಯ ಹಂತದ ಕಸರತ್ತುಗಳಲ್ಲಿ ತೊಡಗಿದ್ದಾರೆ.

ಜಗತ್ತಿನ ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರುವ 'ದೊಡ್ಡಣ್ಣ' ಅಮೆರಿಕ. ಇಂಥ ದೊಡ್ಡಣ್ಣನ ಅಧಿಕಾರದ ಚುಕ್ಕಾಣಿ ಹಿಡಿಯುವ ಪ್ರತಿಷ್ಠೆಯ ಹೋರಾಟದಲ್ಲಿ ಅಂತಿಮವಾಗಿ ಯಾರ ಕೈ ಮೇಲಾಗಲಿದೆ ಎಂದು ಇಡೀ ವಿಶ್ವವೇ ಕಾತರದಿಂದ ನಿರೀಕ್ಷಿಸುತ್ತಿದೆ. ಚೀನಾದ ಆಕ್ರಮಣಕಾರಿ ಮನೋಭಾವ, ರಷ್ಯಾ–ಉಕ್ರೇನ್ ಸಂಘರ್ಷ, ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಮುಂತಾದ ಕಾರಣಗಳಿಂದ ಚುನಾವಣೆಯಲ್ಲಿ ಯಾರು ಗೆಲ್ಲಲಿದ್ದಾರೆ ಎನ್ನುವುದು ಮಹತ್ವದ್ದೆನಿಸಿದೆ.

ಈ ಬಾರಿಯ ಚುನಾವಣೆಯಲ್ಲಿ ಟ್ರಂಪ್ ಮತ್ತು ಕಮಲಾ ಇಬ್ಬರಲ್ಲಿ ಯಾರೇ ಗೆದ್ದರೂ ಅದು ಐತಿಹಾಸಿಕವಾಗಲಿದೆ. ಎರಡು ಬಾರಿ ಸಂಸತ್ತಿನಲ್ಲಿ ವಾಗ್ದಂಡನೆಗೆ ಗುರಿಯಾಗಿರುವ, ನ್ಯಾಯಾಲಯದಲ್ಲಿ ಹಲವು ಪ್ರಕರಣಗಳನ್ನು ಎದುರಿಸುತ್ತಿರುವ, ಒಂದು ಪ್ರಕರಣದಲ್ಲಿ ತಪ್ಪಿತಸ್ಥ ಎಂದು ಸಾಬೀತಾಗಿರುವ ಟ್ರಂಪ್ ಈ ಬಾರಿ (ಎರಡನೆಯ ಬಾರಿ) ಗೆದ್ದರೆ, ಅದು ದಾಖಲೆಯಾಗಲಿದೆ; ಅವರು ಸೋತು, ವರ್ಣೀಯರಾದ ಕಮಲಾ ಆಯ್ಕೆಯಾದರೆ, ಶ್ವೇತಭವನ ಪ್ರವೇಶಿಸುವ ಮೊದಲ ಮಹಿಳೆ ಎನ್ನುವ ಇತಿಹಾಸ ಸೃಷ್ಟಿಯಾಗಲಿದೆ.

ಆಧಾರ ಪಿಟಿಐ, ಬಿಬಿಸಿ, ರಾಯಿಟರ್ಸ್, ಅಮೆರಿಕ ಸರ್ಕಾರದ ವೆಬ್‌ಸೈಟ್

4 ವರ್ಷ ಅಮೆರಿಕದ ಅಧ್ಯಕ್ಷರ ಅಧಿಕಾರಾವಧಿ

5 ಈ ವರ್ಷದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು

15.5 ಕೋಟಿ ಮತದಾರರ ಸಂಖ್ಯೆ

538 ಅಧ್ಯಕ್ಷರನ್ನು ಆಯ್ಕೆ ಮಾಡುವ ಎಲೆಕ್ಟರ್‌ಗಳ ಸಂಖ್ಯೆ

270 ಅಧ್ಯಕ್ಷರಾಗಲು ಗಳಿಸಬೇಕಾದ ಮತಗಳು

ಅಮೆರಿಕ ಅಧ್ಯಕ್ಷರ ಆಯ್ಕೆ ಹೇಗೆ?

ಅಮೆರಿಕದ ಮತದಾರರು ಅಧ್ಯಕ್ಷರ ಆಯ್ಕೆಗಾಗಿ ಮತ ಹಾಕಿದರೂ ಅವರು ನೇರವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುವುದಿಲ್ಲ. ಅಲ್ಲಿನ ಸಂವಿಧಾನದ ಪ್ರಕಾರ, ಪರೋಕ್ಷ ಮತದಾನದ ವ್ಯವಸ್ಥೆ ಅನುಸರಿಸಲಾಗುತ್ತದೆ.

- ಅಧ್ಯಕ್ಷರ ಚುನಾವಣೆಗೆ ಒಂದು ವರ್ಷವಿರುವಾಗಲೇ ಪ್ರಕ್ರಿಯೆ ಆರಂಭವಾಗುತ್ತದೆ
- ಪಕ್ಷಗಳು ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸುವ ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತವೆ. ಇಲ್ಲೂ ಮತದಾನ ನಡೆಯುತ್ತದೆ. ಕೊನೆಯಲ್ಲಿ ರಾಷ್ಟ್ರೀಯ ಮಟ್ಟದ ಸಮಾವೇಶ ಹಮ್ಮಿಕೊಂಡು ಒಬ್ಬ ಅಭ್ಯರ್ಥಿಯ ಹೆಸರನ್ನು ಅಂತಿಮಗೊಳಿಸಲಾಗುತ್ತದೆ
- ಅಧ್ಯಕ್ಷೀಯ ಅಭ್ಯರ್ಥಿಯು ಉಪಾಧ್ಯಕ್ಷ ಹುದ್ದೆಗೆ ಅಭ್ಯರ್ಥಿಯನ್ನು ಆಯ್ಕೆ ಮಾಡುತ್ತಾರೆ
- ಅಧ್ಯಕ್ಷೀಯ ಹುದ್ದೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಅಮೆರಿಕದ ಎಲ್ಲ ರಾಜ್ಯಗಳಿಗೆ ತೆರಳಿ ಪ್ರಚಾರ ನಡೆಸುತ್ತಾರೆ. ಸುದ್ದಿವಾಹಿನಿ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಾರೆ
- ಮತದಾನದ ದಿನ ದೇಶದ ಮತದಾರರು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ತಮ್ಮ ಹಕ್ಕು ಚಲಾಯಿಸುತ್ತಾರೆ (ಆನ್‌ಲೈನ್ ಮತಪತ್ರದ ಮೂಲಕ ಮತ್ತು ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವುದಕ್ಕೆ ಅವಕಾಶ ಇದೆ). ಪ್ರತಿ ಅಧ್ಯಕ್ಷೀಯ ಚುನಾವಣೆಯಲ್ಲೂ ನವೆಂಬರ್ ತಿಂಗಳ ಮೊದಲ ಮಂಗಳವಾರ ಮತದಾನ ನಡೆಯುತ್ತದೆ. 1845ರಲ್ಲಿ ನಡೆದ ಮೊದಲ ಅಧ್ಯಕ್ಷೀಯ ಚುನಾವಣೆಯಿಂದಲೇ ಈ ಸಂಪ್ರದಾಯ ಚಾಲ್ತಿಯಲ್ಲಿದೆ
- ಮತದಾರರು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಮತದಾನ ಮಾಡಿದರೂ ಅಂತಿಮವಾಗಿ ಇಬ್ಬರನ್ನೂ ಆಯ್ಕೆ ಮಾಡುವುದು ಎಲೆಕ್ಟರಲ್‌ಗಳು (ಜನಪ್ರತಿನಿಧಿಗಳು). ಈ ವ್ಯವಸ್ಥೆಯನ್ನು ಎಲೆಕ್ಟರಲ್ ಕಾಲೇಜ್ (ಚುನಾಯಕರ ಕೂಟ) ಎಂದು ಕರೆಯಲಾಗುತ್ತದೆ. ಅಮೆರಿಕದ ಕಾಂಗ್ರೆಸ್‌ನಲ್ಲಿ ಪ್ರತಿರಾಜ್ಯ ಹೊಂದಿರುವ ಪ್ರಾತಿನಿಧ್ಯದ ಆಧಾರದ ಮೇಲೆ ಪ್ರತೀ ರಾಜ್ಯಗಳ ಎಲೆಕ್ಟರ್‌ಗಳ ಸಂಖ್ಯೆಯನ್ನು ನಿಗದಿಪಡಿಸಲಾಗುತ್ತದೆ. ಪ್ರಸ್ತುತ ಎಲೆಕ್ಟರ್‌ಗಳ ಸಂಖ್ಯೆ 538 ಇದೆ
- ಡಿಸೆಂಬರ್ ಮೂರನೇ ವಾರದಲ್ಲಿ ಎಲೆಕ್ಟರ್‌ಗಳು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ಮತದಾನ ಮಾಡುತ್ತಾರೆ. ಅಮೆರಿಕದ ಅಧ್ಯಕ್ಷರಾಗಲು ಕನಿಷ್ಠ 270 ಎಲೆಕ್ಟರ್‌ಗಳ ಬೆಂಬಲ ಬೇಕು (ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಚುನಾವಣೆಯಲ್ಲಿ ನಿರ್ದಿಷ್ಟ ಅಭ್ಯರ್ಥಿ ಪರವಾಗಿ ಹೆಚ್ಚು ಮತಗಳು ಬಂದರೂ ಅವರು ಅಧ್ಯಕ್ಷರಾಗುವುದಿಲ್ಲ. ಎಲೆಕ್ಟರ್‌ಗಳ ಮತಗಳಿಂದಷ್ಟೇ ಅವರು ಆಯ್ಕೆಯಾಗುತ್ತಾರೆ)
- ಜನವರಿ 20ರಂದು ಹೊಸ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಅಧಿಕಾರ ಸ್ವೀಕರಿಸುತ್ತಾರೆ
- ಒಬ್ಬ ವ್ಯಕ್ತಿ ಗರಿಷ್ಠ ಎರಡು ಬಾರಿ ಅಧ್ಯಕ್ಷರಾಗುವುದಕ್ಕೆ ಅವಕಾಶ ಇದೆ


ಚೇಸ್ ಒಲಿವರ್ | ಕಾರ್ನೆಲ್ ವೆಸ್ಟ್ | ಜಿಲ್ ಸ್ಟೇನ್

ಕಣದಲ್ಲಿ ಐವರು

ಈ ಸಲದ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ (60 ವರ್ಷ) ಮತ್ತು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ (78 ವರ್ಷ) ನಡುವೆ ನೇರ ಹಣಾಹಣಿ ಇದ್ದರೂ, ಅಧ್ಯಕ್ಷೀಯ ಹುದ್ದೆಯ ಸ್ಪರ್ಧೆಯಲ್ಲಿ ಇನ್ನೂ ಮೂವರು ಅಭ್ಯರ್ಥಿಗಳಿದ್ದಾರೆ. ಲಿಬರ್ಟೇರಿಯನ್ ಪಾರ್ಟಿಯಿಂದ ಚೇಸ್ ಒಲಿವರ್ (39 ವರ್ಷ) ಮತ್ತು ಗ್ರೀನ್ ಪಾರ್ಟಿಯಿಂದ ಜಿಲ್ ಸ್ಟೇನ್ (74 ವರ್ಷ) ಕಣಕ್ಕಿಳಿಸಿದ್ದಾರೆ. ಈ ಹಿಂದೆ ಗ್ರೀನ್ ಪಾರ್ಟಿಯಲ್ಲಿ ಗುರುತಿಸಿಕೊಂಡಿದ್ದ ಕಾರ್ನೆಲ್ ವೆಸ್ಟ್ (71 ವರ್ಷ) ಅವರು ಸ್ವತಂತ್ರ ಅಭ್ಯರ್ಥಿಯಾಗಿ ಅಖಾಡಕ್ಕೆ ಇಳಿದಿದ್ದಾರೆ.

ಬಂಗಾಳಿ ಭಾಷೆಯಲ್ಲೂ ಮತಪತ್ರ

ನ್ಯೂಯಾರ್ಕ್‌ನಲ್ಲಿ ನಡೆಯುವ ಮತದಾನದಲ್ಲಿ ಬಳಸಲಾಗುತ್ತಿರುವ ಮತಪತ್ರಗಳಲ್ಲಿ ಬಂಗಾಳಿ ಭಾಷೆಯಲ್ಲೂ ವಿವರಗಳನ್ನು ಮುದ್ರಿಸಲಾಗುತ್ತದೆ.

ಇಂಗ್ಲಿಷ್, ಬಂಗಾಳಿ ಮಾತ್ರವಲ್ಲದೆ ಚೀನಿ, ಸ್ಪ್ಯಾನಿಶ್ ಮತ್ತು ಕೊರಿಯಾ ಭಾಷೆಗಳಲ್ಲೂ ಮತಪತ್ರಗಳನ್ನು ಮುದ್ರಿಸಲಾಗುತ್ತದೆ.

ಅದು ಕಾನೂನು ಪ್ರಕಾರ ತೆಗೆದುಕೊಳ್ಳುತ್ತಿರುವ ಅನಿವಾರ್ಯ ಕ್ರಮವಾಗಿದೆ.

ಕಾನೂನಿನ ಪ್ರಕಾರ, ನ್ಯೂಯಾರ್ಕ್ ಸಿಟಿಯ ಕೆಲವು ಕಡೆಗಳಲ್ಲಿ ಬಂಗಾಳಿ ಭಾಷೆಯಲ್ಲಿ ಮತಪತ್ರಗಳನ್ನು ಮುದ್ರಿಸುವುದು ಕಡ್ಡಾಯ. ಮತಪತ್ರ ಮಾತ್ರವಲ್ಲ, ಬಂಗಾಳಿ ಮಾತನಾಡುವ ಮತದಾರರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಇತರೆ ಚುನಾವಣಾ ಪರಿಕರಗಳಲ್ಲೂ ಬಂಗಾಳಿಯಲ್ಲಿ ವಿವರ ಇರಬೇಕಾಗಿದೆ.


ಭಾರತದಲ್ಲಿ ಬಳಕೆಯಲ್ಲಿರುವ ಭಾಷೆಯನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಬಳಸುವ ಬಗ್ಗೆ ಈ ಹಿಂದೆ ಕಾನೂನು ಹೋರಾಟ ನಡೆದಿತ್ತು. ಅಂತಿಮವಾಗಿ ಬಂಗಾಳಿ ಭಾಷೆಯನ್ನು ಆಯ್ಕೆ ಮಾಡಲಾಗಿತ್ತು. 2013ರಿಂದ ಮತಪತ್ರದಲ್ಲಿ ಬಂಗಾಳಿಯನ್ನೂ ಬಳಸಲಾಗುತ್ತಿದೆ.

ಸಿನಿ ಬಿಟ್ಸ್

'ಗಜರಾಮ'ನೊಟ್ಟಿಗೆ ರಾಗಿಣಿ ಹೆಜ್ಜೆ

ಸುನಿಲ್ ಕುಮಾರ್ ವಿ.ಎ. ನಿರ್ದೇಶನದ, 'ಬಿಚ್ಚುಗತ್ತಿ' ಸಿನಿಮಾ ಖ್ಯಾತಿಯ ರಾಜವರ್ಧನ್ ನಾಯಕರಾಗಿ ನಟಿಸಿರುವ 'ಗಜರಾಮ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಈ ಹೊಸ್ತಿಲಲ್ಲಿ ಸಿನಿಮಾದ 'ಸಾರಾಯಿ ಶಾಂತಮ್ಮ' ಹಾಡು ಬಿಡುಗಡೆಯಾಗಿದೆ. ಹಾಡಿಗೆ ನಟ ರಾಗಿಣಿ ಹೆಜ್ಜೆ ಹಾಕಿದ್ದಾರೆ.

ಈ ಹಾಡಿನ ಸಾಹಿತ್ಯವನ್ನು ಚಿನ್ಮಯ್ ಭಾವಿಕೆರೆ ಬರೆದಿದ್ದು, ಮಂಗ್ಲಿ ಹಾಗೂ ಕುನಾಲ್ ಗಾಂಜಾವಾಲಾ ಧ್ವನಿಯಾಗಿದ್ದಾರೆ. ಮನೋಮೂರ್ತಿ ಸಂಗೀತ ನೀಡಿರುವ ಈ ಹಾಡಿನಲ್ಲಿ ರಾಜವರ್ಧನ್ ಹಾಗೂ ರಾಗಿಣಿ ಹೆಜ್ಜೆ ಹಾಕಿದ್ದಾರೆ. ಮಾಸ್ ಸಿನಿಮಾವೊಂದಕ್ಕೆ ಮನೋಮೂರ್ತಿ ಅವರು ಸಂಗೀತ ನೀಡುತ್ತಿರುವುದು ವಿಶೇಷ ಎಂದಿದೆ ಚಿತ್ರತಂಡ. ಸಿನಿಮಾದಲ್ಲಿ ರಾಜವರ್ಧನ್‌ಗೆ ಜೋಡಿಯಾಗಿ ತಪಸ್ವಿನಿ ಪೂಣಚ್ಚ ಬಣ್ಣ ಹಚ್ಚಿದ್ದಾರೆ. ಪೊಲೀಸ್ ಅಧಿಕಾರಿ ಪಾತ್ರದಲ್ಲಿ ದೀಪಕ್ ನಟಿಸಿದ್ದು, ಕಬೀರ್ ಸಿಂಗ್ ಖಳನಾಯಕನ ಪಾತ್ರ ನಿರ್ವಹಿಸಿದ್ದಾರೆ. ಚಿತ್ರಕ್ಕೆ ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ. ಮಠದ್ ಸಂಕಲನ, ಧನಂಜಯ್ ಅವರ ನೃತ್ಯ ನಿರ್ದೇಶನ, ಚಿನ್ಮಯ್ ಭಾವಿಕೆರೆ, ಜಯಂತ ಕಾಯ್ಕಿಣಿ ಅವರ ಸಾಹಿತ್ಯವಿದೆ. ಲೈಫ್ ಲೈನ್ ಫಿಲ್ಮ್ ಪ್ರೊಡಕ್ಷನ್ ಅಡಿಯಲ್ಲಿ ನರಸಿಂಹಮೂರ್ತಿ 'ಗಜರಾಮ' ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಡಿ.27ಕ್ಕೆ ಸಿನಿಮಾ ಬಿಡುಗಡೆಯಾಗುತ್ತಿದೆ.


ರಾಜವರ್ಧನ್, ರಾಗಿಣಿ

'ಕರಾವಳಿ' ಪ್ರವೇಶಿಸಿದ ರಮೇಶ್ ಇಂದಿರಾ

'ಸಪ್ತ ಸಾಗರದಾಚೆ ಎಲ್ಲೋ', 'ಕೋಟಿ' ಸಿನಿಮಾಗಳಲ್ಲಿ ಮಿಂಚಿದ್ದ ನಟ ರಮೇಶ್ ಇಂದಿರಾ ಇದೀಗ 'ಕರಾವಳಿ' ಪ್ರವೇಶಿಸಿದ್ದು, ಮತ್ತೊಂದು ರಗಡ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಗುರುದತ್ ಗಾಣಿಗ ನಿರ್ದೇಶಿಸುತ್ತಿರುವ 'ಕರಾವಳಿ' ಸಿನಿಮಾದಲ್ಲಿ ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸುತ್ತಿದ್ದು, ಸಂಪದ ಇವರಿಗೆ ಜೋಡಿಯಾಗಿದ್ದಾರೆ. ಹಾಸ್ಯನಟನಾಗಿ ಗಮನಸೆಳೆದಿರುವ ನಟ ಮಿತ್ರ ಅವರು ಈ ಸಿನಿಮಾದಲ್ಲಿ ಭಿನ್ನವಾದ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದು, ಇದೀಗ ರಮೇಶ್ ಇಂದಿರಾ ಅವರ ಪಾತ್ರವನ್ನು ಚಿತ್ರತಂಡ ಪರಿಚಯಿಸಿದೆ.

'ಇಡೀ ಕರಾವಳಿಯೇ ಇವರನ್ನು ದೊಡ್ಡವರು ಎಂದು ಗುರುತಿಸುತ್ತದೆ. ಇಡೀ ಕಂಬಳ ಪ್ರಪಂಚ ಇವರನ್ನು ಗೌರವಿಸುತ್ತದೆ ಹಾಗೂ ಇಡೀ ಕರಾವಳಿಯೇ ಇವರೆಂದರೆ ಭಯ ಮತ್ತು ಭಕ್ತಿ ಹೊಂದಿದೆ' ಎಂದು ಚಿತ್ರತಂಡ ಪಾತ್ರವನ್ನು ವಿವರಿಸಿದೆ. ಈಗಾಗಲೇ ಚಿತ್ರದ ಶೇಕಡ 60ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಕರಾವಳಿ ಭಾಗದಲ್ಲೇ ಶೂಟಿಂಗ್ ನಡೆದಿದೆ. ವಿ.ಕೆ. ಫಿಲ್ಮಂ ಸಹಯೋಗದಲ್ಲಿ ಗುರುದತ್ ಗಾಣಿಗ ತಮ್ಮದೇ ಗಾಣಿಗ ಫಿಲ್ಮ್ಸ್ ನಡಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.


ರಮೇಶ್ ಇಂದಿರಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೇರಳದ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ನಾಮಪತ್ರ ಸಲ್ಲಿಸುವಾಗ ನಡೆದ ಮೆರವಣಿಗೆಯಲ್ಲಿ ಪಾಕಿಸ್ತಾನದ ಧ್ವಜಗಳನ್ನು ಪ್ರದರ್ಶಿಸಲಾಗಿದೆ ಎಂದು ಹೇಳಿಕೊಳ್ಳುತ್ತಾ, ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ಘೋಷಣೆ ಕೂಗುತ್ತಿರುವ, ಹಸಿರು ಧ್ವಜಗಳನ್ನು ಪ್ರದರ್ಶಿಸುತ್ತಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳ ಬಳಕೆದಾರರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ನಿಜವಲ್ಲ.

ವಿಡಿಯೊವನ್ನು ಇನ್‌ವಿಡ್ ಟೂಲ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ, ವಿಡಿಯೊವನ್ನು 2019ರ ಜೂನ್ 10ರಂದು ಯುಟ್ಯೂಬ್‌ನಲ್ಲಿ ಹಂಚಿಕೊಂಡಿರುವುದು ಸಿಕ್ಕಿತು. ವಿಡಿಯೊ ಶೀರ್ಷಿಕೆಯಲ್ಲಿ ಕೇರಳದ ಐಯುಎಂಎಲ್ (ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್) ಪಕ್ಷವನ್ನು ಉಲ್ಲೇಖಿಸಲಾಗಿತ್ತು. ಇದರ ಆಧಾರದಲ್ಲಿ ಪಕ್ಷದ ವೆಬ್‌ಸೈಟ್‌ಗೆ ಭೇಟಿ ನೀಡಿ ಪರಿಶೀಲಿಸಿದಾಗ, ವಿಡಿಯೊದಲ್ಲಿರುವ ಧ್ವಜವೂ, ವೆಬ್‌ಸೈಟ್‌ನಲ್ಲಿರುವ ಧ್ವಜವೂ ಒಂದೇ ಎಂಬುದು ದೃಢಪಟ್ಟಿತು. ವಿಡಿಯೊದಲ್ಲಿ ಕಂಡು ಬಂದ ಅಂಗಡಿಯ ಹೆಸರನ್ನು ಗೂಗಲ್ ಮ್ಯಾಪ್‌ನಲ್ಲಿ ಹಾಕಿ ಹುಡುಕಿದಾಗ, ಅದು ಕೇರಳದ ಕಾಸರಗೋಡಿನಲ್ಲಿರುವುದು ತಿಳಿಯಿತು. ನಂತರ ನಿರ್ದಿಷ್ಟ ಪದಗಳನ್ನು ಬಳಸಿ ಇಂಟರ್‌ನೆಟ್ ಜಾಲಾಡಿದಾಗ, 2019ರ ಲೋಕಸಭಾ ಚುನಾವಣೆಯಲ್ಲಿ ಕಾಸರಗೋಡಿನಿಂದ ಗೆದ್ದಿದ್ದ ಐಯುಎಂಎಲ್ –ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ರಾಜಮೋಹನ್ ಉನ್ನಿತಾನ್ ಅವರನ್ನು ಬೆಂಬಲಿಸಿ ನಡೆದ ರ್‍ಯಾಲಿಯ ವಿಡಿಯೊ ಎಂಬುದು ಸ್ಪಷ್ಟವಾಯಿತು. ವಿಡಿಯೊದಲ್ಲಿರುವ ಧ್ವಜವು ಪಾಕಿಸ್ತಾನದ್ದಲ್ಲ; ಮುಸ್ಲಿಂ ಲೀಗ್ ಪಕ್ಷದ್ದು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಆರೋಗ್ಯವೇ ನಿಜವಾದ ಸಂಪತ್ತು!



ನುಡಿ ಬೆಳಗು — ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 59

ಬಹಳ ದುಡ್ಡಿದ್ದರೆ ಸಂತೋಷವಾಗಿರಬಹುದು ಎಂದು ನಮಗ ಅನಿಸತೈತಿ. ದುಡ್ಡಿದ್ದರೆ ತುಂಬಾ ಪುಸ್ತಕ ಖರೀದಿ ಮಾಡಬಹುದು. ಆದರೆ, ಜ್ಞಾನ ಖರೀದಿ ಮಾಡಲು ಆಗವಲ್ದು. ದುಡ್ಡಿದ್ದರೆ ಔಷಧಿ ಖರೀದಿಸಬಹುದು. ಆದರೆ ಆರೋಗ್ಯ ಖರೀದಿ ಮಾಡಲು ಆಗವಲ್ದು. ಹಾಸಿಗೆ ಕೊಳ್ಳಬಹುದು ನಿದ್ದೆಯನ್ನಲ್ಲ. ದುಡ್ಡಿನಿಂದ ಸಾಮಾನು ಖರೀದಿಸಬಹುದೇ ವಿನಾ ಸಂತೋಷ ಖರೀದಿ ಸಾಧ್ಯವಿಲ್ಲ.

ನಿಜವಾದ ಶ್ರೀಮಂತ ಯಾರು? ಸಂಪತ್ತು ನಿಜವಾದ ಸಂಪತ್ತಲ್ಲ. ಆರೋಗ್ಯವೇ ನಿಜವಾದ ಸಂಪತ್ತು. ಮನ್ಯಾಗ ನೋಟಿನ ಕಟ್ಟುಗಳಿದ್ದವ ಶ್ರೀಮಂತನಲ್ಲ. ದುಡ್ಯಾಕೆ ಕೈಕಾಲು ಗಟ್ಟಿದ್ದವ ಶ್ರೀಮಂತ. ಸಂತೋಷವನ್ನು ಅನುಭವಿಸಬೇಕಾದರೆ ನಿರೋಗ ಕಾಯವೇ ಪ್ರಥಮ ಸೂತ್ರ. ಸಂತೋಷ ಇರಬೇಕಾದರೆ ಮೊದಲು ಆರೋಗ್ಯ ಇರಬೇಕು. ಈ ಶತಮಾನದ ದೊಡ್ಡ ಸಮಸ್ಯೆ ಎಂದರೆ ನಾವು ಆದಾಯದ ಬೆನ್ನತ್ತಿ ಆರೋಗ್ಯ ಕಳಕೊಂಡೇವಿ. ಸಂಪತ್ತಿನ ಬೆನ್ನು ಹತ್ತಿ ಸಂತೋಷ ಕಳಕೊಂಡೇವಿ. ಭಾಗ್ಯವಂತ ಯಾರು? ಡೈನಿಂಗ್ ಟೇಬಲ್ ಮ್ಯಾಲೆ ಹೋಳಿಗೆ, ಸೀಕರಣಿ, ಲಾಡು ಮುಂತಾದ ತರಹೇವಾರಿ ಆಹಾರ ಪದಾರ್ಥ ಇಟಗೊಂಡವ ಭಾಗ್ಯವಂತ ಅಲ್ಲ. ಹಸಿವಿದ್ದವನೇ ನಿಜವಾದ ಭಾಗ್ಯವಂತ. ಹಾಸಿಗೆ ಇದ್ದವ ಭಾಗ್ಯವಂತ ಅಲ್ಲ. ನಿದ್ದೆ ಇದ್ದವ ಭಾಗ್ಯವಂತ. ನಾವು ವಸ್ತುಗಳನ್ನು ಪ್ರೀತಿಸ್ತೀವಿ. ಅದಕ್ಕೆ ಸಂತೋಷ ಗೊತ್ತಾಗವಲ್ದು.

ಒಬ್ಬಳು ತಾಯಿ ಪ್ರತಿ ದಿನ ಕೆಲಸಕ್ಕೆ ಹೋಗುವ ಮುನ್ನ ತಿಜೋರಿ ಇರುವ ಕೊಠಡಿಗೆ ಬೀಗ ಹಾಕಿ ಬೀಗದ ಕೈ ತನ್ನ ಬಳಿ ಇಟ್ಟುಕೊಂಡು ತನ್ನ ಮಗುವನ್ನು ಆಯಾಳಿಗೆ ಒಪ್ಪಿಸಿ ಹೋಗುತ್ತಿದ್ದಳು. ಒಂದು ದಿನ ಮಗು, 'ದಿನಾಲು ಕೊಠಡಿಗೆ ಬೀಗ ಹಾಕಿ ಚಾವಿ ತಗೊಂಡು ಹೋಗ್ತೀಯಲ್ಲ. ಅದನ್ನು ಆಯಾಳ ಕೈಗೆ ಕೊಡಬಾರದೇನು?' ಎಂದು ಕೇಳಿತು. ಅದಕ್ಕೆ ತಾಯಿ 'ಕೊಠಡಿಯಲ್ಲಿರುವ ತಿಜೋರಿಯಲ್ಲಿ ಬಹಳ ಕಿಮ್ಮತ್ತಿನ ಸಾಮಾನುಗಳು ಅದಾವ. ಅದಕ್ಕೆ ಚಾವಿ ಆಕಿ ಕೈಗೆ ಕೊಡಲ್ಲ' ಎಂದಳು. ಮತ್ತೆ ಮಗು 'ನನ್ನನ್ನ ಆಯಾಳ ಬಳಿ ಬಿಟ್ಟು ಹೋಗ್ತಿ. ತಿಜೋರಿ ಚಾವಿ ಮಾತ್ರ ತಗಂಡು ಹೋಗ್ತಿ. ಅದರೊಳಗೆ ಬಹಳ ಕಿಮ್ಮತ್ತಿನ ವಸ್ತು ಐತಿ ಅಂತಿ. ಅಂದರೆ ನನಗೇನು ಕಿಮ್ಮತ್ತಿಲ್ಲೇನು?' ಎಂದು ಕೇಳಿತು. ಅಂದ್ರೆ ನಾವು ವಸ್ತುಗಳನ್ನು ಪ್ರೀತಿಸುತ್ತೀವಿ. ವಸ್ತುಗಳು ಇರೋದು ಬಳಸಾಕ, ಜನ ಇರೋದು ಪ್ರೀತಿಸಾಕ ಅನ್ನುವುದನ್ನು ತಿಳಕೊಬೇಕು ಮನುಷ್ಯ.

ಒಬ್ಬ ತತ್ವಜ್ಞಾನಿ, 'ನಿನ್ನ ಮಕ್ಕಳಿಗೆ ಹೇಗೆ ಶ್ರೀಮಂತರಾಗುವುದು ಎನ್ನುವುದನ್ನು ಕಲಿಸಬೇಡ. ಆರೋಗ್ಯದಿಂದ ಸಂತೋಷದಿಂದ ಇರೋದು ಹೇಗೆ ಎನ್ನುವುದನ್ನು ಮೊದಲು ಕಲಿಸು' ಅಂತಾನೆ. ಹಾಗಾದರೆ ಆರೋಗ್ಯ ಅಂದರೆ ಏನು? ನನ್ನ ದೇಹ ನನಗ ಹಿತಕೊಡುತ್ತಿರಬೇಕು. ಅದು ಆರೋಗ್ಯ. ನನ್ನ ಕೈ, ಕಾಲು, ಕಣ್ಣು, ಮನಸ್ಸು, ದೇಹ ಎಲ್ಲವೂ ನನಗ ಹಿತ ಅನಸ್ತಿರಬೇಕು. ದೇಹ ಗಟ್ಟಿಮುಟ್ಟಾಗಿರಬೇಕು. ಇದು ಆರೋಗ್ಯದ ಮೊದಲ ಲಕ್ಷಣ. ಜಿಮ್ಮಿಗೆ ಹೋಗಿ ಬರುವವರು ಮಾತ್ರ ಗಟ್ಟಿ ಇರ್ತಾರೆ ಅಂದಕೋಬೇಡಿ. ಬೆಳಿಗ್ಗೆ ಎದ್ದು ಜಮೀನಿಗೆ ಹೋಗಿ ಬರುವ ರೈತರೂ ಅವರಿಗಿಂತ ಗಟ್ಟಿ ಇರ್ತಾರ. ದೇಹ ಗಟ್ಟಿ ಇದ್ದರ ಸಾಲದು. ಮನಸ್ಸೂ ಸರಿ ಇರಬೇಕು. ಅಷ್ಟೇ ಇದ್ದರೂ ಸಾಲದು. ಉತ್ಸಾಹ ಅಥವಾ ಚೈತನ್ಯ ಇರಬೇಕು. ದೇಹ, ಮನಸ್ಸು ಮತ್ತು ಆತ್ಮ ಈ ಮೂರೂ ಪ್ರಸನ್ನವಾಗಿದ್ದರ ಅವನಿಗೆ ಆರೋಗ್ಯವಂತ ಎನ್ನಬಹುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ನವೆಂಬರ್ 5, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ಥಿ ಗಂ. 24-17 ನಕ್ಷತ್ರ: ಜ್ಯೇಷ್ಠ ಗಂ. 09-45 ಯೋಗ: ಅತಿಗಂಡ ಗಂ. 11-27 ಕರಣ: ವಣಿಜ ಗಂ. 11-55, ತುಲಾ ಮಾಸದ 19 ನೇ ದಿನ, ಮಳೆನಕ್ಷತ್ರ: ಸ್ವಾತಿ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-30 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 02 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 6, 7

ಮೇಷ: ರಾಜಕೀಯ ವ್ಯಕ್ತಿಗಳಿಗೆ ವಿರೋಧ ಪಕ್ಷದವರಿಂದ ಅಥವಾ ಶತ್ರುಗಳಿಂದ ತೊಂದರೆಗಳು ಆಗಬಹುದು. ವ್ಯವಹಾರದಿಂದ ದೂರ ಉಳಿಯುವುದು ಉತ್ತಮ. ಶೀತಬಾಧೆ ಉಂಟಾಗುವುದು.

ವೃಷಭ: ತಾಂತ್ರಿಕ ಕ್ಷೇತ್ರದಲ್ಲಿನ ಸಲಹೆ ಸೂಚನೆಗಳಿಗೆ ಅಧಿಕಾರಿ ವರ್ಗದವರಲ್ಲಿ ಹೆಚ್ಚು ಮನ್ನಣೆ ಸಿಗಲಿದೆ. ಇಂದು ಪ್ರಚಲಿತ ವಿದ್ಯಮಾನಗಳ ಚರ್ಚಾ ವಿಷಯಗಳಲ್ಲಿ ಪಾಲ್ಗೊಳ್ಳುವಿರಿ.

ಮಿಥುನ: ನೆರೆಹೊರೆಯವರು ಸರಳತೆಯನ್ನು ದುರುಪಯೋಗ ಪಡೆಸಿಕೊಂಡಾರು ಗಮನವಿರಲಿ. ಮನೋಬಲದಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಿರಿ. ಕಾರ್ಯಕ್ಷೇತ್ರದಲ್ಲಿ ಶ್ರಮಕ್ಕೆ ತಕ್ಕ ಅಭಿವೃದ್ಧಿಯಾಗಲಿದೆ.

ಕರ್ಕಾಟಕ: ವಿದೇಶ ವ್ಯವಹಾರದಿಂದಾಗಿ ಅಧಿಕ ಸಮಯವನ್ನು ವೃತ್ತಿಜೀವನಕ್ಕೆ ಮೀಸಲಿಡಬೇಕಾಗುತ್ತದೆ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ಭರವಸೆ ಮರೆಯದಿರಿ. ಆಸ್ತಿ ಲಭ್ಯವಾಗಲಿದೆ.

ಸಿಂಹ: ಸ್ನೇಹಿತರಲ್ಲಿ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುವುದು ಸರಿಯಲ್ಲ ಎಂದು ಅನಿಸುವುದು. ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲು ಇದು ಸೂಕ್ತ ಕಾಲ. ಸುಖ ಭೋಜನ ಇರುವುದು.

ಕನ್ಯಾ: ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲಸದಲ್ಲಿ ಪೂರ್ವ ತಯಾರಿ ಮಾಡಲು ಸೂಕ್ತದಿನ. ಶುಭ ಸಮಾರಂಭಕ್ಕಾಗಿ ವಸ್ತ್ರಾಭರಣ ಖರೀದಿಸುವ ಯೋಗವಿದೆ. ಈ ದಿನ ಎದುರಾಳಿಗಳೊಂದಿಗೆ ಸಂಧಾನ ಮಾಡಿಕೊಳ್ಳುವುದು ಸರಿಯಲ್ಲ.

ತುಲಾ: ಹಲವು ವರ್ಷಗಳಿಂದ ಯೋಚಿಸುತ್ತಿದ್ದ ಕಾರ್ಯವು ದೇವತಾನುಗ್ರಹದಿಂದ ನಡೆಯಲಿದೆ. ವೈದ್ಯಕೀಯ ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ. ಮಕ್ಕಳಿಗೆ ಶ್ರಮ ವಹಿಸಿ ವಿದ್ಯಾಭ್ಯಾಸ ಮಾಡಲು ತಿಳಿಸಿ.

ವೃಶ್ಚಿಕ: ದ್ರವರೂಪದ ವಸ್ತುವಿನ ಅದರಲ್ಲೂ ತೈಲಗಳ ಮಾರಾಟದಲ್ಲಿ ಅಧಿಕ ಲಾಭ. ರಾಜಕೀಯ ರಂಗ ಪ್ರವೇಶಿಸಲು ತೀರ್ಮಾನಿಸುವುದಕ್ಕೆ ಸೂಕ್ತ ಕಾಲ. ಧಾನ್ಯ ವರ್ತಕರಿಗೆ ನಿರೀಕ್ಷಿತ ಲಾಭ.

ಧನು: ಸೇವಕ ವರ್ಗದವರಲ್ಲಿ ಪ್ರೀತಿ ವಿಶ್ವಾಸದಿಂದ ವ್ಯವಹರಿಸಿ. ಸೇವಕ ವರ್ಗದ ಜನರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಹೆಚ್ಚಿನ ಅನುಕೂಲ. ಮೇಲಧಿಕಾರಿಗಳೊಂದಿಗಿನ ಮಾತುಕತೆಯು ಹೆಚ್ಚಿನ ಫಲ ನೀಡಲಿದೆ.

ಮಕರ: ಕೌಟುಂಬಿಕ ವಿಚಾರವಾಗಿ ತೆಗೆದುಕೊಳ್ಳುವ ಪ್ರತಿ ಹೆಜ್ಜೆಯೂ ಮುಂದಿನ ದಿನಗಳಲ್ಲಿ ಕೀರ್ತಿಯನ್ನು ಹೆಚ್ಚಿಸುತ್ತದೆ. ಸ್ನೇಹಿತರಿಂದ ಸಹಾಯ ಸಹಕಾರಗಳು ಸಕಾಲದಲ್ಲಿ ದೊರೆಯಲಿವೆ.

ಕುಂಭ: ಕೈಗಾರಿಕೋದ್ಯಮಿಗಳು ಕಂಪನಿಯ ತಯಾರಿಕಾ ಘಟಕದ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಗಮನಹರಿಸಬಹುದು. ಶಿವನ ಆರಾಧನೆಯಿಂದಾಗಿ ಅಭೀಷ್ಟ ಪ್ರಾಪ್ತಿ. ಪಾಲುದಾರಿಕೆಯಲ್ಲಿ ಲಾಭ ಗಳಿಸುವಿರಿ.


ಮೀನ: ವಿದ್ಯಾರ್ಥಿಗಳು ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರಿಯಲು ಅವಕಾಶಗಳು ಸೃಷ್ಟಿಯಾಗುತ್ತವೆ. ಆಹಾರ ಬೆಳೆಗಳು ರೈತರಿಗೆ ನಿರೀಕ್ಷೆಗೂ ಮೀರಿದ ಆದಾಯ ತರಲಿದೆ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ.

ಪದಬಂಧ 5852

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ದೇವನೊಲಿದರೆ ಕೊರಡಿನಲ್ಲೂ ಚಿಗುರು! (3)
4. ಅರ್ಥವಿಲ್ಲದ ಅನಿಷ್ಟ! (3)
5. ಚದುರಂಗದಾಟದಲ್ಲಿ ಗೆದ್ದ ಜಾಣ! (3)
6. ಖುಷಿಯನ್ನು ನೋಡಿ ಹೀಗೆ ಕೋಪಗೊಳ್ಳು! (2)
8. ಸತಿ ಹತ್ತಿರವೇ ಬಂದಿಹಳಲ್ಲಈ ಸಪತ್ನಿ? (3)
10. ಲವಣ ಹಿಡಿದಿದ್ದಾನಲ್ಲಾ ಕುಶನ ಸಹೋದರ (2)
12. ಮರುದಿನವೇ ನಡೆದ ವಿವಾಹ! (3)
14. ಹಗರಣದ ನಡುವಿರುವ ದುಷ್ಟ ಶಕ್ತಿ ಕಾಣುತ್ತಿದೆಯೇ? (2)
16. ಶುಕದ ಹತ್ತಿರವಿರುವ ನಾಯಿ (3)
18. ಬಡಿವಾರ ತೋರಿದಾಗಲೇ ಈ ದುರ್ಭಿಕ್ಷ! (2)
20. ಕಾವು ಇದ್ದಾಗಲೇ ಬಲು ಡೌಲು! (3)
22. ಒಲುಮೆಯಿಂದ ಮಾಡಿದ ಒತ್ತಾಯ (3)
23. ಸರ ತಂದವನಿಗೆ ತೋರಿದ ಆದರ (3)

ಮೇಲಿಂದ ಕೆಳಕ್ಕೆ
1. ಕೋಲನ್ನು ಹಿಡಿದು ವಾಲುತ್ತಿರುವವನೇ ಕೋಟೆ ರಕ್ಷಕ! (4)
2. ಮುಸುಗುಟ್ಟುತ್ತಾ ಕಟ್ಟಿರುವ ಶುಲ್ಕ (3)
3. ಲಂಚ ಪಡೆದವನೇರಿದ ಪಲ್ಲಂಗ (2)
4. ಅರಸುತ್ತಿದ್ದಾಗ ಕಾಣಿಸಿದ ರಾಜ (3)
7. ಮಗನಿಗೆ ಕಲಿಸಿರುವ ವೇದ (3)
9. ವನದಲ್ಲಿರುವ ಕ್ರೂರಮೃಗ (4)
11. ವರ್ತಕನು ನೀಡಿದ್ದು ಈಗಿನ ಸುದ್ದಿ (4)
13. ಬವಣೆ ಪಟ್ಟು ಒಟ್ಟಿದಾಗ ತಿರುವು ಮುರುವಾದ ಮದೆ (3)
15. ರತ್ನಗಳು ಅಡಗಿರುವ ಶರಧಿ (4)
17. ಹೆಚ್ಚು ಪದದ ವಿರುದ್ಧ (3)
19. ಸಕ್ಕರೆ ನೀಡುತ್ತಿರುವ ಅಸುರ (3)
21. ಹಾವುಗೆ ಹತ್ತಿರವಿರುವ ಸರ್ಪ ತಿರುಗಿದೆಯಲ್ಲಾ? (2)



5851ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚರಕ 3.ಪತಾಕೆ 5.ಕಚ 6.ಚಾವಣಿ 7.ನೆಪ 9.ವನಚರಿ 10.ಪರಿಭವ 11.ಸೆಹ 13.ಕಕ್ಷವೀ 14.ಆನೆ 15.ರಕ್ಷಕ 16.ನರ್ತನ

ಮೇಲಿಂದ ಕೆಳಕ್ಕೆ:
1.ಚಮಚ 2.ಕತ್ತೆಚಾಕರಿ 3.ಪಹಣಿ 4.ಕೆರನೆ 5.ಕತ್ತಿವರಸೆ 8.ಪರಿವರ್ತನೆ 10.ಪದವೀದಾನ 12.ಹಜಾರ 13.ಕಟುಕ 14.ಆನನ

ಸುಡೊಕು 6237

2				7			4	
		4	6	2	8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6236 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,304
ಇಂದಿನ ಅಂತ್ಯ	23,995
▼	309
ದಿನದ ಕನಿಷ್ಠ	23,816

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹259-558
ದ್ವಿತಳಿ (ಬಿ.ವಿ)	₹370-653

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹166

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)



ಎಪಿ	₹17600
ಎಸಿ	₹11390
ಆರ್‌ಪಿ	₹18500
ಆರ್‌ಸಿ	₹10000

ಮುಂಬೈ ಧಾರಣೆ

ಶೇಂಗಾ

04-11-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1565)
ಒಂದು ವಾರದ ಡೆಲಿವರಿ	1555 (1560)
ಪಾಮ್ ವಾರದ ಡೆಲಿವರಿ	1358 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1310)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹78,100 (78,700)

ಬೆಳ್ಳಿ ಕೆ.ಜಿ ₹94,400 (95,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹12000-14000
ದಾವಣಗೆರೆ	₹8700-8800
ಕೆ.ಆರ್.ಪೇಟೆ	₹13000-13000
ಪುತ್ತೂರು	₹6800-13300
ತಿಪಟೂರು	₹13800-14701
ತುರುವೇಕೆರೆ	₹14300-14300

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1555)
ಸೋಯಾ (ರಿಫೈನ್ಡ್)	₹1360 (1320)
ಸೂರ್ಯಕಾಂತಿ (ರಿಫೈನ್ಡ್)	₹1390 (1340)
ಪಾಮೋಲಿನ್	₹1360 (1320)

ಹೊಸ ಆರ್ಡರ್‌ಗಳ ಹೆಚ್ಚಳದಿಂದ ಸೂಚ್ಯಂಕ ಏರಿಕೆ: ಎಸ್ ಆ್ಯಂಡ್ ಪಿ

ತಯಾರಿಕಾ ವಲಯ: ಪ್ರಗತಿ ಏರಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಅಕ್ಟೋಬರ್‌ನಲ್ಲಿ ಬೆಳವಣಿಗೆ ದಾಖಲಿಸಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಸೋಮವಾರ ತಿಳಿಸಿದೆ.

ಸೆಪ್ಟೆಂಬರ್‌ನಲ್ಲಿ ಸೂಚ್ಯಂಕವು 56.5 ದಾಖಲಾಗಿತ್ತು. ಇದು ಎಂಟು ತಿಂಗಳ ಕನಿಷ್ಠ ಮಟ್ಟವಾಗಿತ್ತು. ಆದರೆ, ಅಕ್ಟೋಬರ್‌ನಲ್ಲಿ ಸೂಚ್ಯಂಕವು 57.5ಕ್ಕೆ ಏರಿಕೆಯಾಗಿದೆ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ತಿಳಿಸಿದೆ. ಆಗಸ್ಟ್‌ನಲ್ಲಿ ಸೂಚ್ಯಂಕ 57.5ರಷ್ಟಿತ್ತು. 2023ರ ಅಕ್ಟೋಬರ್‌ನಲ್ಲಿ 55.5 ದಾಖಲಾಗಿತ್ತು.


ಸೂಚ್ಯಂಕಗಳು 50 ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಪ್ರಗತಿ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಹೆಚ್ಚಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

'ಹೊಸ ಬೇಡಿಕೆಗಳು ಮತ್ತು ಅಂತರರಾಷ್ಟ್ರೀಯ ಮಾರಾಟದಲ್ಲಿನ ತ್ವರಿತ ಏರಿಕೆಯು ದೇಶದ ತಯಾರಿಕಾ ವಲಯದ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಸೂಚಿಸುತ್ತದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಹೊಸ ಉತ್ಪನ್ನಗಳು ಮತ್ತು ಯಶಸ್ವಿ ಮಾರುಕಟ್ಟೆ ತಂತ್ರಗಾರಿಕೆಯು ಮಾರಾಟ ಹೆಚ್ಚಳವಾಗಲು ನೆರವಾಯಿತು. ಏಷ್ಯಾ, ಯುರೋಪ್, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಬೇಡಿಕೆ ಹೆಚ್ಚಳವಾಗಿದೆ. ಹೆಚ್ಚಿದ ಬೇಡಿಕೆಯಿಂದ ಕಂಪನಿಗಳು ಸಿಬ್ಬಂದಿ ನೇಮಕಕ್ಕೆ ಮುಂದಾದವು. ಸರಕುಗಳ ಬೆಲೆ ಏರಿಕೆ ಮತ್ತು ಸಾಗಣೆ ವೆಚ್ಚದ ಹೆಚ್ಚಳದಿಂದ ತಯಾರಿಕೆ ಮತ್ತು ಉತ್ಪಾದನೆ ವೆಚ್ಚದ ಬೆಲೆ ಏರಿಕೆಯಾದವು ಎಂದು ಭಂಡಾರಿ ಹೇಳಿದ್ದಾರೆ.

ಗ್ರಾಹಕರಿಂದ ಹೆಚ್ಚಿದ ಬೇಡಿಕೆ, ಹೊಸ ಉತ್ಪನ್ನಗಳ ಬಿಡುಗಡೆ ಮತ್ತು ಮಾರಾಟದಿಂದ ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ವ್ಯಾಪಾರ ಹೆಚ್ಚಳವಾಗುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.

ತಯಾರಿಕಾ ವಲಯದ ಸೂಚ್ಯಂಕ



ಸಂಕ್ಷಿಪ್ತ ಸುದ್ದಿ

ನಾಳೆ ಸ್ವಿಗ್ಗಿ ಐಪಿಒ ಶುರು



ಬೆಂಗಳೂರು: ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳಿಂದ ಜನರ ಮನೆ ಬಾಗಿಲಿಗೆ ಆಹಾರ ತಲುಪಿಸುವ ಸ್ವಿಗ್ಗಿ ಕಂಪನಿಯ ಸಾರ್ವಜನಿಕರಿಂದ ಷೇರು ಬಂಡವಾಳ ಸಂಗ್ರಹವು (ಐಪಿಒ) ನವೆಂಬರ್ 6ರಿಂದ ಶುರುವಾಗಲಿದೆ.

ಪ್ರತಿ ಈಕ್ವಿಟಿ ಷೇರಿಗೆ ₹371ರಿಂದ ₹390ರಂತೆ ನಿಗದಿಪಡಿಸಲಾಗಿದೆ. ನವೆಂಬರ್ 6ರಂದು ಚಂದಾದಾರಿಕೆ ಆರಂಭವಾಗಲಿದ್ದು, 8ರಂದು ಮುಕ್ತಾಯಗೊಳ್ಳಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) 5ರಂದು ಬಿಡ್ ಸಲ್ಲಿಸಬಹುದಾಗಿದೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

17.50 ಕೋಟಿ ಈಕ್ವಿಟಿ ಷೇರು ಮಾರಾಟಕ್ಕೆ ಮುಂದಾಗಿದೆ. ಇದರಲ್ಲಿ 7.50 ಲಕ್ಷ ಷೇರುಗಳನ್ನು ಕಂಪನಿಯ ಅರ್ಹ ಉದ್ಯೋಗಿಗಳಿಗೆ ಮೀಸಲು ಇರಿಸಲಾಗಿದೆ ಎಂದು ತಿಳಿಸಿದೆ.

ಎಚ್‌ಎಸ್‌ಆರ್‌ಪಿ: 30ರವರೆಗೆ ಅವಧಿ ವಿಸ್ತರಣೆ

ಬೆಂಗಳೂರು: ಹಳೇ ವಾಹನಗಳಿಗೆ 'ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಲು ನ. 30ರವರೆಗೆ ಸಾರಿಗೆ ಇಲಾಖೆ ಅವಕಾಶ ನೀಡಿದೆ.

ಎಚ್‌ಎಸ್‌ಆರ್‌ಪಿಗೆ ಸಂಬಂಧಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ಹೈಕೋರ್ಟ್ ನ. 20ಕ್ಕೆ ಮುಂದೂಡಿತ್ತು. ಅಲ್ಲಿವರೆಗೆ ಎಚ್‌ಎಸ್‌ಆರ್‌ಪಿ ಅಳವಡಿಸದೇ ಇರುವ ವಾಹನ ಸವಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ತಿಳಿಸಿತ್ತು.

2019ರ ಏಪ್ರಿಲ್ 1ಕ್ಕಿಂತ ಮೊದಲು ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು ಇದೀಗ ಸಾರಿಗೆ ಇಲಾಖೆಯು ಮತ್ತೆ 10 ದಿನಗಳ ಹೆಚ್ಚುವರಿ ಅವಧಿಯನ್ನು ನೀಡಿದ್ದು, ಅಲ್ಲಿವರೆಗೆ ದಂಡ ವಿಧಿಸುವುದಿಲ್ಲ ಎಂದು ತಿಳಿಸಿದೆ.

ಜಿಇಎಂ ಪೋರ್ಟಲ್‌ನಲ್ಲಿ 8 ಸಾವಿರ ತಳಿ ಬಿತ್ತನೆ ಬೀಜ ಲಭ್ಯ

ನವದೆಹಲಿ (ಪಿಟಿಐ): ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಗುಣಮಟ್ಟದ ಬಿತ್ತನೆ ಬೀಜಗಳನ್ನು ಸಿಗುವಂತೆ ಮಾಡುವ ಉದ್ದೇಶದಿಂದ 8 ಸಾವಿರ ತಳಿಗಳ ಬೀಜಗಳನ್ನು ಸರ್ಕಾರಿ ಇ-ಮಾರುಕಟ್ಟೆ (ಜಿಇಎಂ) ಪೋರ್ಟಲ್‌ಗಳಲ್ಲಿ ಲಭ್ಯವಾಗುವಂತೆ ಮಾಡಲಾಗುವುದು. ಅದಕ್ಕಾಗಿ ಬಿತ್ತನೆ ಬೀಜಗಳನ್ನು 170 ವಿಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಜಿಇಎಂನ ಡೆಪ್ಯುಟಿ ಸಿಇಒ ರೋಲಿ ಖರೆ ಹೇಳಿದ್ದಾರೆ.

ಈ ಹೊಸ ವಿಭಾಗಗಳಲ್ಲಿ ಸಾವಿರಾರು ವಿಧದ ಬಿತ್ತನೆ ಬೀಜಗಳು ಲಭ್ಯವಿವೆ. ಇವುಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ದೇಶದ ವಿವಿಧ ಭಾಗಗಳಿಂದ ಇತರೆ ಸರ್ಕಾರಿ ಸಂಸ್ಥೆಗಳು ಸಂಗ್ರಹಿಸುತ್ತವೆ.

ರಾಜ್ಯದ ಬೀಜ ನಿಗಮಗಳು ಮತ್ತು ಸಂಶೋಧನಾ ವಿಭಾಗಗಳು ಸೇರಿದಂತೆ ತಜ್ಞರೊಂದಿಗೆ ಸಮಾಲೋಚಿಸಿದ ನಂತರ, ಬೀಜ ಸಂಗ್ರಹಣೆಗೆ ನಿಯಮಗಳನ್ನು ರೂಪಿಸಲಾಗಿದೆ. ಅದರ ಭಾಗವಾಗಿ ಹೊಸ ಇಲಾಖೆಗಳನ್ನು ರಚಿಸಲಾಗಿದೆ. ಕೇಂದ್ರ ಸರ್ಕಾರವು ನಿಗದಿಪಡಿಸಿದ ನಿಯಮಗಳು ಮತ್ತು ನಿಬಂಧನೆಗಳು ಬೀಜ ಸಂಗ್ರಹಣೆಯ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ ಎಂದು ಹೇಳಿದ್ದಾರೆ.

ಸರ್ಕಾರದ ಟೆಂಡರ್‌ಗಳಲ್ಲಿ ಮುಕ್ತವಾಗಿ ಭಾಗವಹಿಸಲು ಮತ್ತು ಬಿತ್ತನೆ ಬೀಜಗಳನ್ನು ಪೂರೈಸಲು ಮಾರಾಟಗಾರರನ್ನು ಆಹ್ವಾನಿಸುತ್ತೇವೆ. ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಬೀಜಗಳನ್ನು ಖರೀದಿಸಲು ಈ ಹೊಸ ವರ್ಗಗಳ ಅನುಕೂಲವನ್ನು ಬಳಸಿಕೊಳ್ಳಲು ಬೀಜ ಕಂಪನಿಗಳು ಮತ್ತು ರಾಜ್ಯ ಇಲಾಖೆಗಳನ್ನು ಪ್ರೋತ್ಸಾಹಿಸಲಾಗುವುದು ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಷೇರು ಸೂಚ್ಯಂಕ ಕುಸಿತ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಬ್ಯಾಂಕಿಂಗ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು ಹಾಗೂ ವಿದೇಶಿ ಬಂಡವಾಳದ ಹೊರಹರಿವಿನಿಂದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಕುಸಿದಿವೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹6 ಲಕ್ಷ ಕೋಟಿಯಷ್ಟು ಕರಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮೌಲ್ಯ ₹442 ಲಕ್ಷ ಕೋಟಿಗೆ ಇಳಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 941 ಅಂಶ (ಶೇ 1.18) ಇಳಿಕೆಯಾಗಿ, 78,782ಕ್ಕೆ ಅಂತ್ಯಗೊಂಡಿದೆ. ಇದು ಮೂರು ತಿಂಗಳ ಕನಿಷ್ಠ ಮಟ್ಟವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 309 ಅಂಶ (ಶೇ 1.27) ಕಡಿಮೆಯಾಗಿ, 23,995ಕ್ಕೆ ಕೊನೆಗೊಂಡಿತು.



ಅದಾನಿ ಪೋರ್ಟ್ಸ್, ರಿಲಯನ್ಸ್ ಇಂಡಸ್ಟ್ರೀಸ್, ಸನ್ ಫಾರ್ಮಾ, ಬಜಾಜ್ ಫಿನ್‌ಸರ್ವ್, ಎನ್‌ಟಿಪಿಸಿ, ಟಾಟಾ ಮೋಟರ್ಸ್, ಎಕ್ಸಿಸ್ ಬ್ಯಾಂಕ್ ಮತ್ತು ಟೈಟನ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಟೆಕ್ ಮಹೀಂದ್ರ, ಎಸ್‌ಬಿಐ, ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್ ಮತ್ತು ಇಂಡಸ್‌ಇಂಡ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯು ವಿವಿಧ ಮಾರುಕಟ್ಟೆಗಳಲ್ಲಿ ಅಸ್ಥಿರತೆಗೆ ಕಾರಣವಾಗಿದೆ. ಜೊತೆಗೆ, ಮುಂದಿನ ಹಣಕಾಸು ನೀತಿಯನ್ನು ನಿರ್ಧರಿಸಲು ಇದೇ ವಾರದಲ್ಲಿ ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಸಭೆ ಸೇರಲಿದೆ. ಹೀಗಾಗಿ ಷೇರು ಹೂಡಿಕೆದಾರರು ಎಚ್ಚರಿಕೆಯ ನಡೆ ಇಟ್ಟಿದ್ದಾರೆ. ಚೀನಾ ಮಾರುಕಟ್ಟೆಯತ್ತ ವಿದೇಶಿ ಹೂಡಿಕೆದಾರರು ಆಕರ್ಷಿತರಾಗಿರುವುದರಿಂದ ದೇಶದ ಸೂಚ್ಯಂಕಗಳು ಇಳಿದಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹4,600 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಸೋಮವಾರ ಭಾರಿ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹4,600 ಇಳಿಕೆಯಾಗಿ, ₹94,900ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು ₹1,300 ಕಡಿಮೆಯಾಗಿ ₹81,100ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಇಳಿಕೆಗೆ ಕಾರಣಗಳೇನು?: ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಿಂದಾಗಿ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಬೇಡಿಕೆ ಕಡಿಮೆ ಆಗಿದ್ದರಿಂದ ಧಾರಣೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು, ಅಮೆರಿಕದ ಅಧ್ಯಕ್ಷೀಯ ಚುನಾವಣಾ ಫಲಿತಾಂಶದ ಅನಿಶ್ಚಿತತೆಯು ಸಹ ಬೆಲೆ ಇಳಿಕೆಗೆ ಕಾರಣವಾದವು ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	41500-49500
ಚಿತ್ರದುರ್ಗ	
ಅಪಿ	49100-49500
ಬೆಟ್ಟೆ	32600-33000
ಕೆಂಪುಗೋಟು	26600-27000
ರಾಶಿ	48600-49000
ಕುಮಟ	
ಚಿಪ್ಪು	23009-25899
ಕೋಕ	5069-22019
ಫ್ಯಾಕ್ಟರಿ	3019-16829
ಹಳೆಚಾಲಿ	36999-38699
ಹೊಸಚಾಲಿ	30519-34199
ಪುತ್ತೂರು	
ಹೊಸತು	26000-33000
ಹಳತು	32000-49500
ಸಾಗರ	
ಬಿಳಿಗೋಟು	16819-23699
ಚಾಲಿ	27199-32599
ಕೋಕ	8099-18699
ಕೆಂಪುಗೋಟು	26899-31399
ರಾಶಿ	38509-49599
ಸಿಪ್ಪೆಗೋಟು	6299-16001
ಶಿವಮೊಗ್ಗ	
ಬೆಟ್ಟೆ	49000-56479
ಗೊರಬಲು	19829-33009
ಹೊಸತು	46509-49819
ರಾಶಿ	37669-50121
ಸರಕು	53366-57619
ಸಿದ್ದಾಪುರ	
ರಾಶಿ	34999-44299
ತಟ್ಟಿಬೆಟ್ಟೆ	26289-26289
ಬಿಳಿಗೋಟು	23509-26119
ಚಾಲಿ	30889-34239
ಕೋಕ	20909-23899
ಶಿರಸಿ	
ರಾಶಿ	40899-41208
ಬಿಳಿಗೋಟು	22199-27429
ಚಾಲಿ	32850-35139
ಯಲ್ಲಾಪುರ	
ಬಿಳಿಗೋಟು	18619-28030
ಚಾಲಿ	29269-35340
ಕೋಕ	4120-17510
ಕೆಂಪುಗೋಟು	14899-24035
ರಾಶಿ	38099-56150
ತಟ್ಟಿಬೆಟ್ಟೆ	26099-35299

ಏಕಗವಾಕ್ಷಿ ವ್ಯವಸ್ಥೆಗೆ 'ಉಮಾ' ಅಭಿವೃದ್ಧಿ

ಯೋಜನೆಗಳ ಕ್ಷಿಪ್ರ ಅನುಮೋದನೆಗೆ ತಂತ್ರಾಂಶ– ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಕಗವಾಕ್ಷಿ ಯೋಜನೆಯಡಿ ಹಸಿರು ನಿಶಾನೆ ನೀಡಲಾಗಿರುವ ಕೈಗಾರಿಕಾ ಯೋಜನೆಗಳಿಗೆ ಗರಿಷ್ಠ 100 ದಿನಗಳ ಒಳಗೆ ಅಗತ್ಯವಿರುವ ಎಲ್ಲ ಅನುಮೋದನೆಗಳನ್ನು ನೀಡಲು ಮೈಕ್ರೋಸಾಫ್ಟ್ ಕಂಪನಿಯ ನೆರವಿನಿಂದ 'ಉಮಾ' (ಉದ್ಯೋಗ ಮಿತ್ರ ಅಸಿಸ್ಟೆಂಟ್) ಎಂಬ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಫೆಬ್ರುವರಿ ತಿಂಗಳಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಲೋಕಾರ್ಪಣೆ ಮಾಡಲಾಗುವುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಏಕಗವಾಕ್ಷಿ ಯೋಜನೆ ಜಾರಿ ಸಂಬಂಧ ಮೈಕ್ರೋಸಾಫ್ಟ್ ಸಂಸ್ಥೆಯ ಪ್ರತಿನಿಧಿಗಳು ನೀಡಿದ ಪ್ರಾತ್ಯಕ್ಷಿಕೆ ವೀಕ್ಷಿಸಿದ ನಂತರ ಸಚಿವರು ಈ ಪ್ರತಿಕ್ರಿಯೆ ನೀಡಿದರು.

'ಕೆಲವು ರಾಜ್ಯಗಳಲ್ಲಿ ಕೈಗಾರಿಕಾ ಹೂಡಿಕೆ ಯೋಜನೆಗಳಿಗೆ ಎಲ್ಲ ಅನುಮೋದನೆಗಳನ್ನು 60-70 ದಿನಗಳಲ್ಲಿ ನೀಡಲಾಗುತ್ತಿದೆ. ಆದರೆ, ನಮ್ಮ ರಾಜ್ಯದಲ್ಲಿ ಸರಾಸರಿ 300 ದಿನ ತೆಗೆದುಕೊಳ್ಳಲಾಗುತ್ತಿದೆ. ಇದನ್ನು 60-70 ದಿನಗಳಿಗೆ ಇಳಿಸಬೇಕೆಂಬುದು ಗುರಿ. ಇಲ್ಲದೆ ಹೋದರೆ ನಾವು ಹೂಡಿಕೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಇದಕ್ಕಾಗಿ ತಂತ್ರಜ್ಞಾನದ ನೆರವು ನೀಡುವಂತೆ ಮೈಕ್ರೋಸಾಫ್ಟ್ ಕಂಪನಿಗೆ ಜವಾಬ್ದಾರಿ ವಹಿಸಲಾಗಿತ್ತು' ಎಂದು ಅವರು ಹೇಳಿದ್ದಾರೆ.



ಏಕಗವಾಕ್ಷಿ ಯೋಜನೆ ಜಾರಿ ಸಂಬಂಧ ಮೈಕ್ರೋಸಾಫ್ಟ್ ಸಂಸ್ಥೆ ಪ್ರತಿನಿಧಿಗಳ ಜೊತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸಭೆ ನಡೆಸಿದರು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೆಐಎಡಿಬಿ ಆಯುಕ್ತ ಡಾ. ಮಹೇಶ, ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ, ಮೈಕ್ರೋಸಾಫ್ಟ್‌ನ ಯೋಜನಾ ನಿರ್ದೇಶಕ ಪುನೀತ್ ಸಭೆಯಲ್ಲಿದ್ದರು

'ಕೈಗಾರಿಕಾ ಯೋಜನೆಗಳಿಗೆ ರಾಜ್ಯದಲ್ಲಿ ಅಗ್ನಿಶಾಮಕ, ಕಾನೂನು, ಅರಣ್ಯ ಮುಂತಾದ 33 ಇಲಾಖೆಗಳ ಅನುಮೋದನೆ ಬೇಕಾಗುತ್ತದೆ. ಜತೆಗೆ 147 ಬಗೆಯ ಸೇವೆಗಳಿವೆ. ಅವುಗಳನ್ನು ಒಂದೇ ಕಡೆ ತರಬೇಕಾಗಿದೆ. ಈ ತಂತ್ರಾಂಶ ಈ ಕೆಲಸ ಮಾಡಲಿದೆ. ಜತೆಗೆ ಉದ್ಯಮಿಗಳು ಕೂಡ ಕುಳಿತಲ್ಲಿಯೇ ತಮ್ಮ ಯೋಜನೆ ಯಾವ ಹಂತದಲ್ಲಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೂ ಇದು ನೆರವಾಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

'ಕರ್ನಾಟಕದಲ್ಲಿ ಹೂಡಿಕೆ ಏಕೆ ಮಾಡಬೇಕು? ಹೇಗೆ ಮಾಡಬೇಕು? ಇತ್ಯಾದಿ ವಿಷಯಗಳ ಬಗ್ಗೆ ಎಲ್ಲ ಭಾಷೆಗಳಲ್ಲಿ ಈ ತಂತ್ರಾಂಶ ಮಾಹಿತಿ ನೀಡಲಿದೆ. ಇದಕ್ಕೆ ಕೃತಕ ಬುದ್ಧಿಮತ್ತೆಯ ನೆರವು ಕೂಡ ಪಡೆಯಲಾಗಿದೆ. ಧ್ವನಿ ಮಾಧ್ಯಮದಲ್ಲೂ ಕೂಡ ಉದ್ಯಮಿಗಳು ತಮ್ಮಿಚ್ಛೆಯ ಭಾಷೆಯಲ್ಲಿ ಮಾಹಿತಿ ಪಡೆದುಕೊಳ್ಳಬಹುದು. ದೇಶದಲ್ಲೇ ಈ ರೀತಿಯ ವ್ಯವಸ್ಥೆ ಹೊಂದುವ ರಾಜ್ಯ ನಮ್ಮದಾಗಲಿದೆ' ಎಂದು ಅವರು ಹೇಳಿದ್ದಾರೆ.

ಶಾಲೆ ನವೀಕರಣ ಅರ್ಜಿ: ಪರಿಗಣಿಸಲು ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ತೆರಿಗೆ ಪಾವತಿಯಿಂದ ವಿನಾಯಿತಿ ಹೊಂದಿದ್ದೇವೆ ಎಂಬುದನ್ನು ಖುಜುವಾತು ಪಡಿಸುವ ಶಾಲೆಗಳ ಮಾನ್ಯತಾ ನವೀಕರಣ ಅರ್ಜಿಗಳನ್ನು ಪರಿಗಣಿಸಿ' ಎಂದು ಹೈಕೋರ್ಟ್ ಶಿಕ್ಷಣ ಇಲಾಖೆಗೆ ನಿರ್ದೇಶಿಸಿದೆ.

'ಶಾಲೆಗಳ ಮಾನ್ಯತಾ ನವೀಕರಣಕ್ಕೆ ಷರತ್ತುಗಳನ್ನು ವಿಧಿಸಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು 2024ರ ಜುಲೈ 24ರಂದು ಹೊರಡಿಸಿರುವ ಸುತ್ತೋಲೆ ರದ್ದುಪಡಿಸಬೇಕು' ಎಂದು ಕೋರಿ 'ಕೃಪಾ' ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು ಸಂಘದ ಅಧ್ಯಕ್ಷ ಎಸ್. ಲೋಕೇಶ್ವರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಪ್ರತಿವಾದಿಗಳಾದ ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ವಾದ ಮಂಡಿಸಿದರು.

'ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಕಲಂ 36 ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) ನಿಯಮಗಳು-1999ರ ನಿಯಮ 3ರ ಅನ್ವಯ ಶಾಲೆಗಳ ಮಾನ್ಯತಾ ನವೀಕರಣಕ್ಕೆ ಆಡಳಿತ ಮಂಡಳಿಗಳು ಪ್ರತಿ ವರ್ಷ ಅರ್ಜಿ ಸಲ್ಲಿಸಬೇಕು ಎಂಬುದೂ ಸೇರಿದಂತೆ ತೆರಿಗೆ ಪಾವತಿ, ನಿವೇಶನ ಪತ್ರ, ಖಾತಾ ಪತ್ರ ಹಾಗೂ ಕಂದಾಯ ರಸೀದಿ ಸಲ್ಲಿಸಬೇಕು' ಎಂದು ಷರತ್ತುಗಳನ್ನು ವಿಧಿಸಿ ಶಾಲಾ ಶಿಕ್ಷಣ ಇಲಾಖೆಯು 2024ರ ಜುಲೈ 24ರಂದು ಸುತ್ತೋಲೆ ಹೊರಡಿಸಿದೆ.

ಕೆಸೆಟ್: ದಾಖಲೆ ಪರಿಶೀಲನೆಗೆ ಮತ್ತೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆಸೆಟ್)-2023 ಪರೀಕ್ಷೆಯಲ್ಲಿ ಅರ್ಹತೆ ಪಡೆದು, ಇದುವರೆಗೂ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗದವರು ಇದೇ 12ರಂದು ಬೆಳಿಗ್ಗೆ 10 ಗಂಟೆಗೆ ಕಚೇರಿಗೆ ಬಂದು ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಹಲವು ಬಾರಿ ಮೂಲ ದಾಖಲೆಗಳ ಪರಿಶೀಲನೆ ಮಾಡಿದ್ದರೂ ಇನ್ನೂ 228 ಮಂದಿ ದಾಖಲೆ ಪರಿಶೀಲನೆಗೆ ಬಂದಿಲ್ಲ. ಹೀಗಾಗಿ ಅಭ್ಯರ್ಥಿಗಳ ಕೋರಿಕೆ ಮೇರೆಗೆ ಮತ್ತೊಂದು ಅವಕಾಶ ನೀಡಲಾಗಿದೆ. ಇನ್ನು ಮುಂದೆ ದಾಖಲೆ ಪರಿಶೀಲನೆ ಇರುವುದಿಲ್ಲ. ಹಾಗೆಯೇ ದಾಖಲೆ ಪರಿಶೀಲನೆಗೆ ಹಾಜರಾಗದೆ ಇರುವ ಅಭ್ಯರ್ಥಿಗಳನ್ನು ಅರ್ಹತಾ ಪಟ್ಟಿಯಿಂದ ಕೈಬಿಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ದಾಖಲಾತಿ ಪರಿ ಶೀಲನೆ ಪೂರ್ಣಗೊಂಡು, ಕೆಸೆಟ್ ಪ್ರಮಾಣಪತ್ರ ಪಡೆಯದಿರುವ ಅಭ್ಯರ್ಥಿಗಳು ಕೂಡ ನ. 12ರಂದು ಹಾಜರಾಗಬಹುದು ಎಂದಿದ್ದಾರೆ.

ಜೀತ ನಿಗ್ರಹಕ್ಕೆ 52 ಅಧಿಕಾರಿಗಳನ್ನು ನೇಮಿಸಿದ ರಾಜ್ಯಸರ್ಕಾರ

11 ಜಿಲ್ಲೆಗಳಲ್ಲಿ ಜೀತ ಪದ್ಧತಿ ಜೀವಂತ

• ಭರತ್ ಜೋಶಿ

ಬೆಂಗಳೂರು: ಜೀತ ಪದ್ಧತಿ ನಿಷೇಧಿಸಿ 48 ವರ್ಷಗಳು ಕಳೆದರೂ ಬೆಂಗಳೂರು ಮತ್ತು ರಾಜ್ಯದ ಇತರ 10 ಜಿಲ್ಲೆಗಳಲ್ಲಿ ಈ ಪದ್ಧತಿ ಇನ್ನೂ ಜೀವಂತವಾಗಿದೆ.

ಜೀತ ಕಾರ್ಮಿಕ ಪದ್ಧತಿಯನ್ನು ಪತ್ತೆ ಮಾಡಿ ಅದನ್ನು ಕೊನೆಗಾಣಿಸಲೆಂದು ರಾಜ್ಯ ಸರ್ಕಾರ ಹೊಸದಾಗಿ 52 ಅಧಿಕಾರಿಗಳನ್ನು ನೇಮಿಸಿದ್ದು, 'ಜೀತ ನಿಗ್ರಹ ಅಧಿಕಾರಿಗಳು' ಎಂದು ಅವರನ್ನು ಕರೆಯಲಾಗಿದೆ.

ಎಲ್ಲೆಲ್ಲಿ ಜೀತ ಕಾರ್ಮಿಕ ಪದ್ಧತಿ ಇದೆ ಎಂಬುದನ್ನು ಪತ್ತೆ ಮಾಡಿ, ಅದಕ್ಕೆ ಸಾಕ್ಷ್ಯಗಳನ್ನು ಸಂಗ್ರಹಿಸಿ ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸುವುದು ಮತ್ತು ಸಾರ್ವಜನಿಕರು ಹಾಗೂ ವಾಣಿಜ್ಯೋದ್ಯಮ ವಲಯದಲ್ಲಿ ಅರಿವು ಮೂಡಿಸುವುದು ಈ ಅಧಿಕಾರಿಗಳ ಕೆಲಸವಾಗಿದೆ.

ರಾಜ್ಯದಲ್ಲಿ 2016 ರಿಂದ 2024ರ ಅವಧಿಯಲ್ಲಿ 2,631 ಜೀತ ಕಾರ್ಮಿಕ ಪ್ರಕರಣಗಳು ವರದಿಯಾಗಿವೆ. ಇದೇ ಅವಧಿಯಲ್ಲಿ ಜೀತ ಮುಕ್ತರಾದ 4,397 ಕಾರ್ಮಿಕರಿಗೆ ಸರ್ಕಾರ ಪಿಂಚಣಿಯನ್ನು ನೀಡಿದೆ. ಜೀತ ಮುಕ್ತರಿಗೆ ಪಿಂಚಣಿ ಮೊತ್ತವನ್ನು ₹1,000 ರಿಂದ ₹2,000 ಕ್ಕೆ ಹೆಚ್ಚಿಸಲಾಗಿದೆ.

ಜೀತ ಕಾರ್ಮಿಕರು ಹೆಚ್ಚಿರುವ ಜಿಲ್ಲೆಗಳು

ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಹಾಸನ, ಮಂಡ್ಯ, ಮೈಸೂರು, ಚಿಕ್ಕಮಗಳೂರು, ಬೆಳಗಾವಿ, ಬಾಗಲಕೋಟೆ, ರಾಮನಗರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಜೀತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೃಷಿ, ರೇಷ್ಮೆ, ಕೊಳವೆಬಾವಿ ತೋಡುವುದು, ಸಣ್ಣ ಕೈಗಾರಿಕೆ, ಜವಳಿ ಘಟಕಗಳು, ಹೋಟೆಲ್‌ಗಳು, ಕ್ವಾರಿ, ಮಾಂಸ ಸಂಸ್ಕರಣ ಘಟಕಗಳು, ಇಟ್ಟಿಗೆ ಭಟ್ಟಿಗಳಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ.

ಅಲ್ಲದೇ, ಕೇಂದ್ರ ಸರ್ಕಾರ ಜೀತ ಮುಕ್ತರ ಪುನರ್ವಸತಿಗಾಗಿ ಪುರುಷರಿಗೆ ತಲಾ ₹1 ಲಕ್ಷ, ಮಹಿಳೆಯರು ಮತ್ತು ಮಕ್ಕಳಿಗೆ ₹2 ಲಕ್ಷ, ತೀವ್ರ ಶೋಷಣೆಗೊಳಗಾದವರಿಗೆ ₹3 ಲಕ್ಷ ನೀಡುತ್ತದೆ. ಆದರೆ, ಸಕ್ಷಮ ನ್ಯಾಯಾಲಯದಿಂದ ಅಂತಿಮ ತೀರ್ಪು ಹೊರಬಿದ್ದ ಬಳಿಕವೇ ಈ ಮೊತ್ತ ಸಂದಾಯವಾಗುತ್ತದೆ.

ರಾಜ್ಯದಲ್ಲಿ ಜೀತ ಪದ್ಧತಿಯನ್ನು ಸಂಪೂರ್ಣ ತೊಡೆದು ಹಾಕುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ 2024–25ರ ಬಜೆಟ್ ಭಾಷಣದಲ್ಲಿ ಭರವಸೆ ನೀಡಿದ್ದರು. ಈ ಹಿನ್ನೆಲೆಯಲ್ಲಿ 52 ಜೀತ ನಿರ್ಬಂಧ ಅಧಿಕಾರಿಗಳನ್ನು ನೇಮಿಸಲಾಗಿದೆ. ಈ ತಂಡದಲ್ಲಿ ಪೊಲೀಸ್, ಶಿಕ್ಷಣ, ಕಾರ್ಮಿಕ, ಸಮಾಜ ಕಲ್ಯಾಣ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮುಂತಾದ ಇಲಾಖೆ ಅಧಿಕಾರಿಗಳು ಇದ್ದಾರೆ.

'ಜೀತ ಪದ್ಧತಿ ನಿರ್ಮೂಲನೆಗೆ ಈಗಾಗಲೇ ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರವನ್ನು ನೀಡಲಾಗಿದೆ. ಹೊಸದಾಗಿ ಜೀತ ನಿಗ್ರಹ ಅಧಿಕಾರಿಗಳ ನೇಮಿಸುವ ಅಗತ್ಯ ಏನಿತ್ತು? ಇರುವ ಅಧಿಕಾರವನ್ನು ಪರಿಣಾಮಕಾರಿಯಾಗಿ ಬಳಸಿ ಈ ಪಿಡುಗನ್ನು ನಿಗ್ರಹಿಸಬಹುದಾಗಿದೆ. ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ 1976 ಅತ್ಯಂತ ಪರಿಣಾಮಕಾರಿ ಕಾಯ್ದೆ. ಅದನ್ನು ಸರಿಯಾಗಿ ಜಾರಿ ಮಾಡಿದರೂ ಸಾಕು' ಎಂದು ಜೀತ ಕಾರ್ಮಿಕರ ವಿಮುಕ್ತಿಗಾಗಿ ಕಾರ್ಯ ನಿರ್ವಹಿಸುತ್ತಿರುವ 'ಜೀವಿಕ' ಸಂಘಟನೆಯ ಕಿರಣ್ ಕಮಲ್ ಪ್ರಸಾದ್ ಪ್ರತಿಪಾದಿಸಿದ್ದಾರೆ.

ಬಂಜಾರ ಅಕಾಡೆಮಿಗೆ ಲೋಗೊ ರಚನೆಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಗೆ ಸೂಕ್ತ ಲೋಗೊ ರಚಿಸಿಕೊಡುವಂತೆ ಅಕಾಡೆಮಿ ಆಹ್ವಾನಿಸಿದೆ.

ಲೋಗೊದಲ್ಲಿ ಬಂಜಾರ ಸಮುದಾಯದ ಸಂಪ್ರದಾಯಗಳು, ಆಚಾರ ವಿಚಾರಗಳು, ವೇಷಭೂಷಣಗಳ ಸೇರಿ ಸಮಗ್ರ ವಿಷಯಗಳನ್ನು ಒಳಗೊಂಡಿರಬೇಕು.

ಆಸಕ್ತರು ಒಂದು ಲೋಗೊವನ್ನು ಮೂರು ವಿಭಿನ್ನ ರೀತಿಯಲ್ಲಿ ರಚಿಸಿ ನ.15ರೊಳಗೆ ಅಕಾಡೆಮಿಯ ಕಚೇರಿಗೆ ತಲುಪಿಸಬೇಕು.

ಆಯ್ಕೆಯಾದ ಒಂದು ಲೋಗೊಕ್ಕೆ ₹ 25 ಸಾವಿರ ಬಹುಮಾನ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಅಧ್ಯಕ್ಷರು, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕನ್ನಡ ಭವನ, ಒಂದನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-560 002, ದೂರವಾಣಿ : 080-29917745

ಪುನರಾಗಮನದ ನಂತರವೂ ಮಸುಕಾಗದ ವಿಕೆಟ್ ಕೀಪರ್– ಬ್ಯಾಟರ್ ಆಟ

ಪಂದ್ಯ ಸೋತರೂ ಮನಗೆದ್ದ ಪಂತ್

• ರೋಷನ್ ತ್ಯಾಗರಾಜನ್



ರಿಷಭ್ ಪಂತ್ –ಪಿಟಿಐ ಚಿತ್ರ

ಮುಂಬೈ: ಸುಮಾರು ಎರಡು ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ರಿಷಭ್ ಪಂತ್ ಗಂಭೀರ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿ ಕ್ರಿಕೆಟ್‌ಗೆ ಮರಳಿದ್ದೇ ರೋಚಕ. ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯ ಮೂರನೇ ಪಂದ್ಯದಲ್ಲಿ ಅವರು ಭಾರತ ತಂಡವನ್ನು ಮುಖಭಂಗದಿಂದ ಪಾರು ಮಾಡಲು ತಮ್ಮೆಲ್ಲಾ ಯತ್ನ ನಡೆಸಿದರು. ಸ್ವಲ್ಪದರಲ್ಲಿ ಅವರ ಹೋರಾಟ ವಿಫಲವಾಯಿತು.

ಮುಂಬೈಗೆ ಬರುವ ಮೊದಲೇ ಭಾರತ ತಂಡ ಸರಣಿ ಸೋತಿತ್ತು. ಆದರೆ ಅಲ್ಲೂ ಸೋತು ವೈಟ್‌ವಾಷ್‌ಗೆ ಒಳಗಾಗಿದ್ದು, ತವರಿನಲ್ಲಿ ಭಾರತ ತಂಡದ ಪ್ರದರ್ಶನ ಮಟ್ಟ ಹಿಂದೆಂದೂ ಕಾಣದಷ್ಟು ಕುಸಿತ ಕಂಡಿತು.

ಮುಂಬೈ ಟೆಸ್ಟ್ ಪಂದ್ಯದ ಮೊದಲ ಎರಡು ದಿನ ಭಾರತ ತಂಡ ಮರಳಿ ಗೆಲುವಿನ ದಾರಿಗೆ ಬರುವಂತೆ ಕಂಡಿತ್ತು. ಮೂರನೇ ದಿನ 147 ರನ್‌ಗಳ ಗುರಿ ಎದುರಿಸಿದ ಭಾರತ 43 ಎಸೆತಗಳ ನಂತರ 29 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು. ಈ ವೇಳೆ ಆಡಲಿಳಿದ ಪಂತ್ ಭಾರತದ ಪಾಳಯದಲ್ಲಿ ಮೊದಲ ಬಾರಿ ಆಶಾಕಿರಣ ಮೂಡಿಸಿದ್ದರು.

2022ರ ಡಿಸೆಂಬರ್‌ನಲ್ಲಿ ನಡೆದ ಕಾರು ಅಪಘಾತದಲ್ಲಿ ಅವರು ಬದುಕುಳಿದಿದ್ದೇ ಪವಾಡ. ಅವರ ಸ್ಥಿತಿ ನೋಡಿ ಒಂದು ಕಾಲನ್ನು ಕತ್ತರಿಸಬೇಕಾಗಬಹುದು ಎಂದು ವೈದ್ಯರೂ ಲೆಕ್ಕಿಸಿದ್ದರು. ಪಂತ್‌ಗೆ ಮುಂದೆ ನಡೆದಾಡಲು ಆಗಬಹುದೇ ಎಂಬ ಸಂದೇಹವೂ ಅವರಲ್ಲಿ ಮೂಡಿತ್ತು. ಆದರೆ ಗಟ್ಟಿ ಮನೋಬಲ ಹೊಂದಿದ್ದ ಅವರು ನಿರೀಕ್ಷೆ ಮೀರಿ ಚೇತರಿಸಿಕೊಂಡರು. ಒಂದೂವರೆ ವರ್ಷ ಆಗುವುದರೊಳಗೆ ಕ್ರೀಡಾಂಗಣಕ್ಕೆ ಇಳಿದರು. ಅಮೆರಿಕದಲ್ಲಿ ಟಿ20 ವಿಶ್ವಕಪ್ ಆಡಲು ವಿಮಾನವೇರಿದರು. ಶ್ರೀಲಂಕಾ ವಿರುದ್ಧ ಏಕದಿನ ಸರಣಿ ಆಡಿದರು. ಪುನರಾಗಮನದ ಬಳಿಕ ಬಾಂಗ್ಲಾದೇಶ ವಿರುದ್ಧ ಮೊದಲ ಟೆಸ್ಟ್ ಸರಣಿ ಆಡಿದರು.

ಅವರ ಅಗತ್ಯ ಏನೆಂದು ಭಾರತ ತಂಡಕ್ಕೆ ತಿಳಿದಿತ್ತು. ಆದರೆ ಎಷ್ಟೊಂದು ಅಗತ್ಯ ಎಂಬುದು ಕಿವೀಸ್ ವಿರುದ್ಧ ಸರಣಿಯಲ್ಲಿ ಜಾಹೀರಾಯಿತು.

ಆಪತ್ಬಾಂಧವ: ಮೂರನೇ ಟೆಸ್ಟ್‌ನ ಎರಡನೇ ದಿನ ಮೊದಲ ಇನಿಂಗ್ಸ್‌ನಲ್ಲಿ ಪಂತ್ ಆಡಲು ಇಳಿದಾಗ, ಭಾರತ ನ್ಯೂಜಿಲೆಂಡ್ (235) ಮೊತ್ತಕ್ಕಿಂತ 149 ರನ್ ಹಿಂದಿತ್ತು. ಹಿಂದಿನ ದಿನ ಕೇವಲ ಒಂದು ಎಸೆತ ಆಡಿದ್ದರು. ಅವರು ಮರುದಿನ ತಮ್ಮದೇ ಲಹರಿಯಲ್ಲಿ ಆಡತೊಡಗಿದರು. ತಿರುಗಿದ, ನೇರವಾಗಿ ಬಂದ ಎಸೆತಗಳು ಅವರ ಆಟಕ್ಕೆ ಭಂಗ ತರಲಿಲ್ಲ. ಎದುರಾಳಿಗಳ ಪ್ರಮುಖ ಅಸ್ತ್ರ ಎಜಾಜ್ ಪಟೇಲ್ ಅವರನ್ನೂ ಲೆಕ್ಕಿಸಲಿಲ್ಲ. ಅವರ 60 ರನ್‌ಗಳ ನೆರವಿನಿಂದ ಭಾರತಕ್ಕೆ ಇನಿಂಗ್ಸ್ ಮುನ್ನಡೆ ದೊರೆಯಿತು.

ಭಾನುವಾರ, ಎರಡನೇ ಇನಿಂಗ್ಸ್‌ನಲ್ಲಿ ಭಾರತ ಗೆಲುವಿಗೆ 147 ರನ್‌ಗಳ ಸಣ್ಣ ಗುರಿ ಎದುರಿಸಿತ್ತು. ಭಾರತ 18 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿತ್ತು. ಆದರೆ ಇಂಥ ಪರಿಸ್ಥಿತಿ ಅವರನ್ನು ವಿಚಲಿತಗೊಳಿಸಲಿಲ್ಲ. ಎದುರಿಸಿದ ಮೂರನೇ ಎಸೆತವನ್ನು (ಎಜಾಜ್ ಆಗ ಬೌಲರ್) ಸಿಕ್ಸರ್‌ಗೆತ್ತಿದರು. ಇನ್ನೊಂದು ಕಡೆಯಿಂದ ಒತ್ತಡ ಹೆಚ್ಚುತ್ತಿತ್ತು. ಜೈಸ್ವಾಲ್, ಪಂತ್ ಮೂರು ಎಸೆತಗಳ ಅಂತರದಲ್ಲಿ ವಾಪಸಾಗಿದ್ದರು. ಸ್ಕೋರ್ 5ಕ್ಕೆ 29.

ಜಡೇಜ ಅವರಲ್ಲಿ ಸೂಕ್ತ ಜೊತೆಗಾರರನ್ನು ಕಂಡ ಪಂತ್, ತಂಡವನ್ನು ಗೆಲುವಿನ ದಾರಿಯಲ್ಲಿ ಮುನ್ನಡೆಸುವಂತೆ ಕಂಡಿತು. ಆದರೆ ಈ ಹಂತದಲ್ಲಿ ಜಡೇಜ ಶಾರ್ಟ್‌ಲೆಗ್‌ನಲ್ಲಿ ಕ್ಯಾಚಿತ್ತರು. ಇದು ಇನ್ನೊಂದು ತುದಿಯಲ್ಲಿದ್ದ ಪಂತ್ ಅವರನ್ನು ಹತಾಶೆಗೆ ದೂಡಿತು. ಮತ್ತೆ 35 ಎಸೆತಗಳನ್ನು ಆಡಿದ ಪಂತ್, ಕೊನೆಗೂ ಔಟ್ ಆದರು. ಅದೂ ವಿವಾದಾತ್ಮಕ ತೀರ್ಪಿಗೆ. ಅಂಥ ಸಂದರ್ಭದಲ್ಲೂ ಅವರು ಪೆವಿಲಿಯನ್‌ಗೆ ಮರಳುವಾಗ ಪ್ರೇಕ್ಷಕರು ಕರತಾಡನದ ಮೆಚ್ಚುಗೆ ನೀಡಿದರು. ಭಾರತ ಸೋತಿತು. ಆದರೆ ಪಂತ್ ಆಟ ಸೋಲಲಿಲ್ಲ. ಅವರು ಭಾರತದ ಕ್ರಿಕೆಟ್‌ನ ಭವಿಷ್ಯ ಎಂಬುದು ಮತ್ತೆ ಸಾಬೀತಾಯಿತು. ಬಿಕ್ಕಟ್ಟಿನಲ್ಲೂ ತಮ್ಮ ಸಹಜ ಆಟದಿಂದ ಪಂತ್ ದೂರ ಸರಿಯಲಿಲ್ಲ.

ಪಂತ್ ಕೊನೆಯ ಐದು ಟೆಸ್ಟ್‌ಗಳಲ್ಲಿ ಒಂದು ಶತಕ, ಮೂರು ಅರ್ಧ ಶತಕ ಸೇರಿದಂತೆ 422 ರನ್ ಪೇರಿಸಿದ್ದಾರೆ.

ಕ್ರಿಕೆಟ್‌ಗೆ ವೃದ್ಧಿಮಾನ್ ವಿದಾಯ

ರಣಜಿ ಋತುವಿನ ಬಳಿಕ ಬಂಗಾಳದ ಆಟಗಾರನ ನಿವೃತ್ತಿ

ನವದೆಹಲಿ (ಪಿಟಿಐ): ಹಿರಿಯ ವಿಕೆಟ್ ಕೀಪರ್– ಬ್ಯಾಟರ್ ವೃದ್ಧಿಮಾನ್ ಸಹಾ ಅವರು ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಹಾಲಿ ರಣಜಿ ಋತು ತಮ್ಮ ಪಾಲಿನ ಕೊನೆಯದು ಎಂದು ಭಾನುವಾರ ತಡರಾತ್ರಿ ಘೋಷಿಸಿದ್ದಾರೆ.

40 ವರ್ಷ ವಯಸ್ಸಿನ ವೃದ್ಧಿಮಾನ್ ಅವರು 2010ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿ 40 ಟೆಸ್ಟ್ ಮತ್ತು 9 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

‘ಕ್ರಿಕೆಟ್‌ನ ಸುಮಧುರ ಪಯಣದಲ್ಲಿ ಈ ಋತು ನನ್ನ ಪಾಲಿನ ಕೊನೆಯದು. ಕೊನೆಯ ಬಾರಿ ಬೆಂಗಾಲ ತಂಡವನ್ನು ಪ್ರತಿನಿಧಿಸುತ್ತಿರುವುದು ನನಗೆ ಗೌರವದ ವಿಷಯ. ರಣಜಿ ನಂತರ ಕ್ರಿಕೆಟ್‌ನಿಂದ ನಿವೃತ್ತನಾಗುತ್ತೇನೆ’ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಈ ಋತುವನ್ನು ಸ್ಮರಣೀಯವಾಗಿಸೋಣ’ ಎಂದು ಅವರು ಭಾನುವಾರ ತಡರಾತ್ರಿ ಹಾಕಿದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಅವರು ಮಹೇಂದ್ರ ಸಿಂಗ್ ಧೋನಿ ರೀತಿಯ ಪ್ರಭಾವಳಿ ಹೊಂದಿರಲಿಲ್ಲ. ಅಥವಾ ರಿಷಭ್ ಪಂತ್ ಅವರಂತೆ ಆಕ್ರಮಣಕಾರಿ ಆಟದಿಂದ ಹೆಸರು ಮಾಡಲಿಲ್ಲ. ಆದರೆ ವಿಕೆಟ್ ಕೀಪರ್ ಆಗಿ ಅವರು ತಮ್ಮ ಕೆಲಸದಲ್ಲಿ ಅಚ್ಚುಕಟ್ಟುತನ ನಿಭಾಯಿಸಿದ್ದರು.



ಅವರು ದೀರ್ಘ ಕಾಲ ಟೆಸ್ಟ್ ತಂಡದ ಭಾಗವಾಗಿದ್ದರು. ಅವರನ್ನು ಕಳೆದ ವರ್ಷ ಕೇಂದ್ರೀಯ ಗುತ್ತಿಗೆಯಿಂದ ಹೊರಗಿಡಲಾಗಿತ್ತು.

2016ರಲ್ಲಿ ನ್ಯೂಜಿಲೆಂಡ್ ತಂಡದ ಭಾರತ ಪ್ರವಾಸದಲ್ಲಿ ಅವರು ಈಡನ್ ಗಾರ್ಡನ್ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಅಜೇಯ ಶತಕ ಬಾರಿಸಿದ್ದರು. ಬೌಲಿಂಗ್ ಪಿಚ್‌ನಲ್ಲಿ ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ, ನೀಲ್ ವ್ಯಾಗ್ನರ್ ಮತ್ತು ಮಿಚೆಲ್ ಸ್ಟಾರ್ಕ್ ಅವರನ್ನು ಒಳಗೊಂಡ ದಾಳಿಯನ್ನು ವಿಶ್ವಾಸದಿಂದ ಎದುರಿಸಿದ್ದರು. ಅವರಿಗೆ ಪಂದ್ಯ ಶ್ರೇಷ್ಠ ಪ್ರಶಸ್ತಿಯೂ ಒಲಿದಿತ್ತು.

ವೃದ್ಧಿಮಾನ್ ಸಹಾ ಸಾಧನೆ (ಅಂತರರಾಷ್ಟ್ರೀಯ ಕ್ರಿಕೆಟ್)	ಟೆಸ್ಟ್	ಏಕದಿನ
ಪಂದ್ಯ	40	9
ರನ್	1353	41
ಸರಾಸರಿ	29.41	13.67
ಶತಕ/ ಅರ್ಧಶತಕ	3/6	0/0
ಗರಿಷ್ಠ	117	16
ಕ್ಯಾಚ್	92	17

ದೇಶಿಯ ಕ್ರಿಕೆಟ್‌ನಲ್ಲಿ ಅವರ ಸಾಧನೆ ಅತ್ಯುತ್ತಮವಾಗಿದೆ. 2007ರಲ್ಲಿ ಬಂಗಾಳ ತಂಡಕ್ಕೆ ಪದಾರ್ಪಣೆ ಮಾಡಿದ ನಂತರ ಅವರು 138 ಪಂದ್ಯಗಳಿಂದ 7013 ರನ್ ಗಳಿಸಿದ್ದಾರೆ.

ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್, ಸನ್‌ರೈಸರ್ಸ್ ಹೈದರಾಬಾದ್ ಮತ್ತು ಗುಜರಾತ್ ಟೈಟನ್ಸ್ ಸೇರಿ ವಿವಿಧ ತಂಡಗಳನ್ನು ಪ್ರತಿನಿಧಿಸಿದ್ದು 170 ಪಂದ್ಯಗಳಲ್ಲಿ ಆಡಿದ್ದಾರೆ. 2014ರ ಫೈನಲ್‌ನಲ್ಲಿ ಅವರು ಪಂಜಾಬ್ ಕಿಂಗ್ಸ್ ಪರ (ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ) 55 ಎಸೆತಗಳಲ್ಲಿ 115 ರನ್ ಬಾರಿಸಿದ್ದು, ಇದು ಐಪಿಎಲ್‌ನಲ್ಲಿ ಅವರ ಏಕೈಕ ಶತಕ.

ಮೊಹಮ್ಮದ್ ಶಮಿ ಮರು ಪ್ರವೇಶ ಇನ್ನಷ್ಟು ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮೊಹಮ್ಮದ್ ಶಮಿ ಅವರು ಪುನರಾಗಮನ ಇನ್ನಷ್ಟು ವಿಳಂಬವಾಗಲಿದೆ. ಕರ್ನಾಟಕ ಮತ್ತು ಮಧ್ಯಪ್ರದೇಶ ವಿರುದ್ಧ ರಣಜಿ ಟ್ರೋಫಿಯ ಎರಡು ಸುತ್ತುಗಳ ಪಂದ್ಯಗಳಿಗೆ ಪ್ರಕಟವಾದ ಬಂಗಾಳ ತಂಡದಲ್ಲಿ ಅವರ ಹೆಸರು ಕಾಣಿಸಿಲ್ಲ.


ಬಂಗಾಳ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾಗುವ ರಣಜಿ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಎದುರಿಸಲಿದೆ. ನಂತರ ನವೆಂಬರ್ 13ರಿಂದ ಇಂದೋರ್‌ನಲ್ಲಿ ನಡೆಯುವ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ ಆಡಲಿದೆ.

ಶಸ್ತ್ರಚಿಕಿತ್ಸೆಗೊಳಗಾದ ಪಾದದಲ್ಲಿ ಬ್ಯಾಂಡೇಜ್ ಇದ್ದುಕೊಂಡೇ ಅವರು ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯ ವೇಳೆ ಮೊದಲ ಸಲ ಪೂರ್ಣ ಪ್ರಮಾಣದ ಬೌಲಿಂಗ್ ಅಭ್ಯಾಸದಲ್ಲಿ ಕಾಣಿಸಿಕೊಂಡಿದ್ದರು. ನೈಜ ಪಂದ್ಯದಲ್ಲಿ ತಮ್ಮ ಫಿಟ್ನೆಸ್ ಪರೀಕ್ಷೆ ಮಾಡಲು ಕರ್ನಾಟಕ ವಿರುದ್ಧ ಶಮಿ ಆಡಬಹುದೆಂಬ ನಿರೀಕ್ಷೆಯಿತ್ತು.

ತಾವು ಶೇಕಡಾ ನೂರರಷ್ಟು ಫಿಟ್ ಆಗಿರುವುದಾಗಿ ಖಾಸಗಿ ಕಾರ್ಯಕ್ರಮವೊಂದರಲ್ಲೂ ಶಮಿ ಹೇಳಿದ್ದರು.

ಬಂಗಾಳ ತಂಡವು, ಆರಂಭ ಆಟಗಾರ ಅಭಿಮನ್ಯು ಈಶ್ವರನ್, ವಿಕೆಟ್ ಕೀಪರ್–ಬ್ಯಾಟರ್ ಅಭಿಷೇಕ್ ಪೊರೆಲ್ ಮತ್ತು ವೇಗದ ಬೌಲರ್ ಮುಕೇಶ್ ಕುಮಾರ್ ಅವರ ಸೇವೆಯನ್ನೂ ಕಳೆದುಕೊಂಡಿದೆ. ಈ ಆಟಗಾರರು ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ‘ಎ’ ತಂಡದಲ್ಲಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯಲ್ಲಿ ಆಡಿದ್ದ ವೇಗಿ ಆಕಾಶ್ ದೀಪ್ ಕೂಡ ತಂಡದಲ್ಲಿಲ್ಲ.

ಕರ್ನಾಟಕ, ಮಧ್ಯ ಪ್ರದೇಶ ವಿರುದ್ಧ ಪಂದ್ಯಕ್ಕೆ ಬಂಗಾಳ ತಂಡ ಇಂತಿದೆ: ಅನುಷ್ಟುಪ್ ಮಜುಂದಾರ್ (ನಾಯಕ), ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಸುದೀಪ್ ಚಟರ್ಜಿ, ಸುದೀಪ್ ಘರಾಮಿ, ಶಾಬಾಝ್ ಅಹ್ಮದ್, ವೃತಿಕ್ ಚಟರ್ಜಿ, ಅವಿಲಿನ್ ಘೋಷ್, ಶುವಮ್ ಡೇ, ಶಾಕಿರ್ ಹಬೀಬ್ ಗಾಂಧಿ, ಪ್ರದೀಪ್ತ ಪ್ರಾಮಾಣಿಕ್, ಅಮೀರ್ ಘನಿ, ಇಶಾನ್ ಪೊರೆಲ್, ಸೂರಜ್ ಸಿಂಧು ಜೈಸ್ವಾಲ್, ಮೊಹಮ್ಮದ್ ಕೈಫ್, ರೋಹಿತ್ ಕುಮಾರ್, ರಿಶವ್ ವಿವೇಕ್.



ಮೊಹಮ್ಮದ್ ಶಮಿ

ಆಸ್ಟ್ರೇಲಿಯಾಕ್ಕೆ ರೋಚಕ ಗೆಲುವು

ಮೆಲ್ಬರ್ನ್ (ಎಎಫ್‌ಪಿ): ಒತ್ತಡದ ನಡುವೆಯೂ ನಾಯಕ ಪ್ಯಾಟ್ ಕಮಿನ್ಸ್ (ಅಜೇಯ 32, 31ಎ, 4x4) ಅವರ ಸಂಯಮದ ಆಟದಿಂದ ಆಸ್ಟ್ರೇಲಿಯಾ ತಂಡ, ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ ಸೋಮವಾರ ಎರಡು ವಿಕೆಟ್‌ಗಳ ರೋಚಕ ಜಯ ಪಡೆಯಿತು.

204 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡ 99 ಎಸೆತಗಳಿರುವಂತೆ ಗೆಲುವಿನ ಕೇಕೆ ಹಾಕಿತು. ಆದರೆ ಅದಕ್ಕೆ ಸ್ವಲ್ಪ ಮೊದಲು ಐದು ಎಸೆತಗಳ ಅಂತರದಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡು ಆತಂಕದ ಕ್ಷಣಗಳನ್ನು ಎದುರಿಸಿತು.

ಎರಡನೇ ಪಂದ್ಯ ಆಡಿಲೇಡ್‌ನಲ್ಲಿ ಶುಕ್ರವಾರ ನಡೆಯಲಿದೆ. ಮೂರನೇ ಹಾಗೂ ಅಂತಿಮ ಪಂದ್ಯ ಭಾನುವಾರ ಪರ್ತ್‌ನಲ್ಲಿ ನಿಗದಿಯಾಗಿದೆ.

ಸ್ಕೋರುಗಳು: ಪಾಕಿಸ್ತಾನ: 46.4 ಓವರುಗಳಲ್ಲಿ 203 (ಬಾಬರ್ ಆಜಂ 37, ಮೊಹಮ್ಮದ್ ರಿಜ್ವಾನ್ 44, ನಸೀಮ್ ಷಾ 40; ಮಿಚೆಲ್ ಸ್ಟಾರ್ಕ್ 33ಕ್ಕೆ3, ಪ್ಯಾಟ್ ಕಮಿನ್ಸ್ 39ಕ್ಕೆ2); ಆಸ್ಟ್ರೇಲಿಯಾ: 33.3 ಓವರುಗಳಲ್ಲಿ 8 ವಿಕೆಟ್‌ಗೆ 204 (ಸ್ಟೀವ್ ಸ್ಮಿತ್ 44, ಜೋಸ್ ಇಂಗ್ಲಿಸ್ 49, ಪ್ಯಾಟ್ ಕಮಿನ್ಸ್ ಔಟಾಗದೆ 32; ಶಾಹಿನ್ ಶಾ ಅಫ್ರೀದಿ 43ಕ್ಕೆ2, ಹ್ಯಾರಿಸ್ ರವೂಫ್ 67ಕ್ಕೆ3). **ಪಂದ್ಯದ ಆಟಗಾರ:** ಮಿಚೆಲ್ ಸ್ಟಾರ್ಕ್.



ಪ್ಯಾಟ್ ಕಮಿನ್ಸ್ –ಎಎಫ್‌ಪಿ ಚಿತ್ರ

ಕೆನಡಾದಲ್ಲಿ ಖಾಲಿಸ್ತಾನಿ ಬೆಂಬಲಿಗರ ಕೃತ್ಯ • ಭಾರತದ ಖಂಡನೆ

ಹಿಂದೂ ದೇಗುಲ ಬಳಿ ಘರ್ಷಣೆ

ಒಟ್ಟಾವ (ಪಿಟಿಐ): ಖಾಲಿಸ್ತಾನ ಧ್ವಜಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಕೆನಡಾದ ಬ್ರಾಂಪ್ಟನ್‌ನಲ್ಲಿರುವ ಹಿಂದೂ ಸಭಾ ದೇವಾಲಯದ ಆವರಣದೊಳಗೆ ಭಾನುವಾರ ನುಗ್ಗಿ, ಅಲ್ಲಿನ ಜನರೊಂದಿಗೆ ಘರ್ಷಣೆ ನಡೆಸಿರುವ ಘಟನೆ ನಡೆದಿದೆ. ಇದನ್ನು ಭಾರತದ ಹೈಕಮಿಷನ್ ಮತ್ತು ಭಾರತ ಸರ್ಕಾರ ತೀವ್ರವಾಗಿ ಖಂಡಿಸಿವೆ. ಅಲ್ಲದೆ ಪ್ರಧಾನಿ ನರೇಂದ್ರ ಮೋದಿ, ವಿಎಚ್‌ಪಿ, ಬಿಜೆಪಿ, ಕಾಂಗ್ರೆಸ್ ನಾಯಕರೂ ಖಂಡಿಸಿದ್ದಾರೆ.

ದಾಳಿ ಕುರಿತ ವಿಡಿಯೊ ವ್ಯಾಪಕವಾಗಿ ಹಂಚಿಕೆಯಾದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ, ‘ಕೆನಡಾದ ಪ್ರತಿಯೊಬ್ಬ ಪ್ರಜೆಗೂ ಧರ್ಮವನ್ನು ಮುಕ್ತ ಮತ್ತು ಸುರಕ್ಷಿತವಾಗಿ ಆಚರಿಸುವ ಹಕ್ಕು ಇದೆ’ ಎಂದು ಹೇಳಿದ್ದಾರೆ.



ಜಸ್ಟಿನ್ ಟ್ರೂಡೊ

ಬ್ರಾಂಪ್ಟನ್‌ನ ಹಿಂದೂ ಸಭಾ ದೇವಾಲಯದಲ್ಲಿ ಭಾನುವಾರ ಈ ಘಟನೆ ನಡೆದಿದೆ. ಖಾಲಿಸ್ತಾನ ಪರ ಬ್ಯಾನರ್‌ಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಇದರಲ್ಲಿ ಭಾಗಿಯಾಗಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊಗಳಲ್ಲಿ ಇದನ್ನು ಕಾಣಬಹುದಾಗಿದೆ ಎಂದು ಪೀಲ್ ಪ್ರದೇಶದ ಪೊಲೀಸರು ತಿಳಿಸಿದ್ದಾರೆ. ದಾಳಿ ಕುರಿತ ವರದಿಯನ್ನು ಕೆನಡಾದ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಮಾಡಿದೆ.

ಹಿಂದೂ ಸಭಾ ಮಂದಿರ ದೇಗುಲದ ಆವರಣದಲ್ಲಿ ಜನರು ಕೈ ಕೈ ಮಿಲಾಯಿಸಿ, ಹೊಡೆದಾಡಿಕೊಂಡಿರುವ ದೃಶ್ಯ ವಿಡಿಯೊದಲ್ಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದ ಹೈಕಮಿಷನ್ ಖಂಡನೆ: ಟೊರಾಂಟೊ ಬಳಿಯ ಬ್ರಾಂಪ್ಟನ್‌ನಲ್ಲಿರುವ ಹಿಂದೂ ಸಭಾ ಮಂದಿರದ ಮೇಲೆ ನಡೆದ ‘ಭಾರತ ವಿರೋಧಿ’ ದಾಳಿಯನ್ನು ಒಟ್ಟಾವದಲ್ಲಿನ ಭಾರತದ ಹೈಕಮಿಷನ್ ಬಲವಾಗಿ ಖಂಡಿಸಿದೆ. ಹಿಂದೂ ಸಭಾ ಮಂದಿರ ಮತ್ತು ಭಾರತದ ದೂತವಾಸ ಕಚೇರಿ ಜಂಟಿಯಾಗಿ ಆಯೋಜಿಸಿದ್ದ ಕಾನ್ಸುಲರ್ ಶಿಬಿರಕ್ಕೆ ಈ ಘಟನೆಯಿಂದ ಅಡ್ಡಿಯಾಯಿತು ಎಂದು ಅದು ‘ಎಕ್ಸ್’ನಲ್ಲಿ ತಿಳಿಸಿದೆ.

ಶನಿವಾರ ಮತ್ತು ಭಾನುವಾರ ವ್ಯಾಂಕೋವರ್ ಮತ್ತು ಸರ್ರೆಯಲ್ಲಿ ನಡೆದ ಕಾನ್ಸುಲರ್ ಶಿಬಿರಗಳಲ್ಲಿಯೂ ಇದೇ ರೀತಿಯ ಅಡಚಣೆಗಳು ನಡೆದಿವೆ ಎಂದಿರುವ ಹೈಕಮಿಷನ್, ಸ್ಥಳೀಯ ಅಧಿಕಾರಿಗಳು ಭದ್ರತಾ ಕ್ರಮಗಳ ಕುರಿತು ಖಾತರಿಪಡಿಸಿದಲ್ಲಿ ಮಾತ್ರ ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಹೇಳಿದೆ.

ವಿದೇಶಾಂಗ ಸಚಿವಾಲಯ ಆಗ್ರಹ: ‘ಉಗ್ರವಾದಿಗಳು ಮತ್ತು ಪ್ರತ್ಯೇಕತಾವಾದಿಗಳು ಹಿಂದೂ ಸಭಾ ದೇವಾಲಯದ ಮೇಲೆ ನಡೆಸಿದ ದಾಳಿ ಖಂಡನೀಯ. ಈ ರೀತಿಯ ದಾಳಿಗಳಿಂದ ಕೆನಡಾದ ಎಲ್ಲ ದೇವಾಲಯಗಳನ್ನು ರಕ್ಷಿಸುವ ಕುರಿತು ಖಾತರಿ ನೀಡುವಂತೆ ಕೆನಡಾ ಸರ್ಕಾರವನ್ನು ಕೇಳುವುದಾಗಿ’ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸ್ವೀಕಾರಾರ್ಹವಲ್ಲ– ಕೆನಡಾ ಪ್ರಧಾನಿ: ಘಟನೆಗೆ ಸಂಬಂಧಿಸಿದಂತೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ, ‘ಬ್ರಾಂಪ್ಟನ್‌ನ ಹಿಂದೂ ಸಭಾ ಮಂದಿರದಲ್ಲಿ ನಡೆದ ಹಿಂಸಾಚಾರ ಸ್ವೀಕಾರಾರ್ಹವಲ್ಲ. ಕೆನಡಾದ ಪ್ರತಿ ಪ್ರಜೆಯೂ ತಮ್ಮ ಧರ್ಮ ಮತ್ತು ನಂಬಿಕೆಯನ್ನು ಮುಕ್ತ ಮತ್ತು ಸುರಕ್ಷಿತವಾಗಿ ಆಚರಿಸುವ ಹಕ್ಕನ್ನು ಹೊಂದಿದ್ದಾರೆ. ಈ ಘಟನೆಗೆ ತಕ್ಷಣವೇ ಪ್ರತಿಕ್ರಿಯಿಸಿ ಸಮುದಾಯವನ್ನು ರಕ್ಷಿಸಿದ ಪೀಲ್ ಪ್ರಾದೇಶಿಕ ಪೊಲೀಸರಿಗೆ ಧನ್ಯವಾದಗಳು’ ಎಂದು ಹೇಳಿದ್ದಾರೆ.

‘ಶಾಂತಿಯುತ ಮತ್ತು ಸುರಕ್ಷಿತ ರೀತಿಯಲ್ಲಿ ಪ್ರತಿಭಟಿಸುವ ಹಕ್ಕನ್ನು ನಾವು ಗೌರವಿಸುತ್ತೇವೆ. ಆದರೆ ಹಿಂಸಾಚಾರ ಮತ್ತು ಅಪರಾಧ ಕೃತ್ಯಗಳನ್ನು ಸಹಿಸುವುದಿಲ್ಲ’ ಎಂದು ಪೀಲ್ ಪ್ರಾದೇಶಿಕ ಪೊಲೀಸ್ ಮುಖ್ಯಸ್ಥ ನಿಶಾನ್ ದುರೈಯಪ್ಪ ‘ಎಕ್ಸ್’ನಲ್ಲಿ ಹೇಳಿದ್ದಾರೆ.

ದಾಳಿಯಲ್ಲಿ ಭಾಗಿಯಾದವರನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಯಾರನ್ನೂ ಬಂಧಿಸಿಲ್ಲ ಎಂದು ಪೀಲ್ ಪೊಲೀಸರು ಸಿಬಿಸಿ ಟೊರಾಂಟೊ ನ್ಯೂಸ್‌ಗೆ ತಿಳಿಸಿದ್ದಾರೆ.

ನ್ಯಾಯ ಖಚಿತಪಡಿಸಿ, ಕಾನೂನು ಎತ್ತಿಹಿಡಿಯಿರಿ: ಮೋದಿ

ನವದೆಹಲಿ (ಪಿಟಿಐ): ‘ಕೆನಡಾದಲ್ಲಿ ಹಿಂದೂ ದೇವಾಲಯದ ಮೇಲಿನ ಉದ್ದೇಶಪೂರ್ವಕ ದಾಳಿ ಮತ್ತು ನಮ್ಮ ರಾಜತಾಂತ್ರಿಕರನ್ನು ಬೆದರಿಸುವ ಹೇಡಿತನದ ಪ್ರಯತ್ನಗಳು ಖಂಡನೀಯ. ಇಂತಹ ಹಿಂಸಾಚಾರದ ಕೃತ್ಯಗಳು ಭಾರತದ ಸಂಕಲ್ಪವನ್ನು ಎಂದಿಗೂ ದುರ್ಬಲಗೊಳಿಸುವುದಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಕೆನಡಾ ಸರ್ಕಾರ ನ್ಯಾಯವನ್ನು ಖಚಿತಪಡಿಸುತ್ತದೆ ಮತ್ತು ಕಾನೂನನ್ನು ಎತ್ತಿಹಿಡಿಯುತ್ತದೆ ಎಂದು ನಿರೀಕ್ಷಿಸುತ್ತೇವೆ’ ಎಂದಿದ್ದಾರೆ.

ಗಂಭೀರವಾಗಿ ಪರಿಗಣಿಸಲು ಕಾಂಗ್ರೆಸ್ ಆಗ್ರಹ: ‘ದೇವಾಲಯಕ್ಕೆ ಹೋಗುವ ಭಕ್ತರನ್ನು ಅಡ್ಡಿಪಡಿಸಲು ಯಾರಿಗೂ ಅವಕಾಶ ನೀಡಬಾರದು. ಭಾರತ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕೆನಡಾದ ಸಂಬಂಧಿಸಿದ ಪ್ರಾಧಿಕಾರದ ಮುಂದೆ ಧ್ವನಿಯೆತ್ತಬೇಕು’ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪ್ರತಿಪಾದಿಸಿದ್ದಾರೆ.

ಉದ್ದೇಶಪೂರ್ವಕ ನಿರ್ಲಕ್ಷ್ಯ: ವಿಎಚ್‌ಪಿ ಆರೋಪ

ನವದೆಹಲಿ: ಕೆನಡಾದ ಹಿಂದೂ ದೇವಾಲಯದ ಮೇಲಿನ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ‘ಭದ್ರತೆ ಒದಗಿಸುವಂತೆ ಭಾರತೀಯ ದೂತವಾಸ ಕಚೇರಿ ಮಾಡಿದ್ದ ಮನವಿಯನ್ನು ಕೆನಡಾ ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಿದೆ’ ಎಂದು ಆರೋಪಿಸಿದೆ.

‘ದೇಗುಲದ ಆವರಣದಲ್ಲಿ ಭಾರತೀಯ ಕಾನ್ಸುಲರ್ ಶಿಬಿರವನ್ನು ಆಯೋಜಿಸಲಾಗಿತ್ತು. ಮೂರು ದಿನಗಳ ಮುನ್ನವೇ ಈ ಬಗ್ಗೆ ಪೊಲೀಸರಿಗೆ ಮಾಹಿತಿಯೂ ರವಾನೆಯಾಗಿತ್ತು. ಭದ್ರತೆ ಅಗತ್ಯವಿದೆ ಎಂದು ಮಾಡಿದ್ದ ಮನವಿಯನ್ನು ಕೆನಡಾ ನಿರ್ಲಕ್ಷ್ಯ ಮಾಡಿತ್ತು. ಅದರಿಂದಾಗಿ ಈ ಘಟನೆ ನಡೆದಿದೆ’ ಎಂದು ವಿಎಚ್‌ಪಿ ಅಂತರರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ದೂರಿದ್ದಾರೆ.

ವಾಂಟೆಡ್ ಲಿಸ್ಟ್‌ನಲ್ಲಿ ಶಾ ಹೆಸರು: ವದಂತಿ

ನವದೆಹಲಿ (ಪಿಟಿಐ): ಭಾರತ ಮತ್ತು ಕೆನಡಾ ಮಧ್ಯದ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆಯೇ ಪಾಕಿಸ್ತಾನ ಮೂಲದ ಹಲವರು, ‘ಇಂಟರ್‌ಪೋಲ್ ಇತ್ತೀಚೆಗೆ ಭಾರತದ ಗೃಹ ಸಚಿವ ಅಮಿತ್ ಶಾ ಅವರನ್ನು ವಾಂಟೆಡ್ ಲಿಸ್ಟ್‌ಗೆ ಸೇರಿಸಿದೆ’ ಎಂದು ಸಾಮಾಜಿಕ ಮಾಧ್ಯಮ ಗಳಲ್ಲಿ ಗ್ರಾಫಿಕ್ ಕಾರ್ಡ್ ಅನ್ನು ಹಂಚಿಕೊಂಡಿದ್ದಾರೆ. ಆದರೆ ಇದು ನಕಲಿ ಎಂಬುದು ಪಿಟಿಐ ಫ್ಯಾಕ್ಟ್‌ಚೆಕ್‌ನಲ್ಲಿ ಗೊತ್ತಾಗಿದೆ.

ಕೆನಡಾದಲ್ಲಿ ಇರುವ ಸಿಖ್ ಪ್ರತ್ಯೇಕತಾವಾದಿಗಳನ್ನು ಗುರಿಯಾಗಿಸಿ ಹಿಂಸಾಚಾರ, ಬೆದರಿಕೆ ಮತ್ತು ಗುಪ್ತಚರ ಸಂಗ್ರಹಣಾ ಕಾರ್ಯಕ್ಕೆ ಅಮಿತ್ ಶಾ ಅವರು ಆದೇಶಿಸಿದ್ದಾರೆ ಎಂದು ಕೆನಡಾದ ಸಚಿವ ಡೇವಿಡ್ ಮಾರಿಸನ್ ಅವರು ಇತ್ತೀಚೆಗೆ ಆರೋಪಿಸಿದ್ದರು. ಅದರ ಬೆನ್ನಲ್ಲೇ ಪಾಕ್‌ನ ಸಾಮಾಜಿಕ ಮಾಧ್ಯಮ ಬಳಕೆದಾರರು ಗ್ರಾಫಿಕ್ ಅನ್ನು ಹಂಚಿಕೊಂಡಿದ್ದಾರೆ.

ಈ ಗ್ರಾಫಿಕ್ ನಕಲಿ ಎಂಬುದನ್ನು ಪಿಟಿಐ ಫ್ಯಾಕ್ಟ್‌ಚೆಕ್ ಡೆಸ್ಕ್ ಪತ್ತೆಮಾಡಿದೆ. ಇಂಟರ್‌ಪೋಲ್ ಈ ರೀತಿಯ ಯಾವುದೇ ಸೂಚನೆಯನ್ನು ನೀಡಿಲ್ಲ ಮತ್ತು ಈ ಸಂಬಂಧ ಪಾಕ್ ಮತ್ತು ಕೆನಡಾದ ಸಾಮಾಜಿಕ ಮಾಧ್ಯಮಗಳ ಬಳಕೆದಾರರು ಮಾಡಿರುವ ಪೋಸ್ಟ್‌ಗಳಲ್ಲಿ ಸತ್ಯಾಂಶ ಇಲ್ಲ ಎಂದು ಪಿಟಿಐ ತಿಳಿಸಿದೆ.

ಅದಾಗ್ಯೂ ಮಾರಿಸನ್ ಅವರ ಆರೋಪಗಳನ್ನು ಅಸಂಬದ್ಧ ಮತ್ತು ಆಧಾರರಹಿತ ಎಂದು ಭಾರತ ತಿರಸ್ಕರಿಸಿದೆ. ಅಲ್ಲದೆ ಈ ರೀತಿಯ ಆರೋಪಗಳು ದ್ವಿಪಕ್ಷೀಯ ಸಂಬಂಧಗಳ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂದು ಎಚ್ಚರಿಸಿದೆ.



ಅಮಿತ್ ಶಾ

ಭಾರತೀಯ ಸೇನೆ ಗಸ್ತು ಪುನರಾರಂಭಕ್ಕೆ ಪ್ರತಿಕ್ರಿಯಿಸಲು ಚೀನಾ ನಿರಾಕರಣೆ

‘ಸೇನೆ ವಾಪಸಾತಿ ಒಪ್ಪಂದ ಸುಗಮ’

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಸೇನಾ ಪಡೆಗಳನ್ನು ಹಿಂಪಡೆಯುವ ಸಂಬಂಧ ಭಾರತದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅನುಷ್ಠಾನವು ಸದ್ಯ ಸುಗಮವಾಗಿ ಸಾಗಿದೆ ಎಂದು ಚೀನಾ ಸೋಮವಾರ ಹೇಳಿದೆ. ಆದರೆ, ಡೆಪ್ಸಾಂಗ್ ಮತ್ತು ಡೆಮ್‌ಚೋಕ್‌ನ ಎರಡು ಘರ್ಷಣಾ ಸ್ಥಳಗಳಲ್ಲಿ ಸೇನಾ ಗಸ್ತು ಪುನರಾರಂಭದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ.

‘ಚೀನಾ ಮತ್ತು ಭಾರತೀಯ ಪಡೆಗಳು, ಗಡಿ ಪ್ರದೇಶದ ಸಮಸ್ಯೆಗಳಿಗೆ ಸಂಬಂಧಿಸಿ ಮಾಡಿಕೊಂಡಿರುವ ಒಪ್ಪಂದವನ್ನು ಕಾರ್ಯಗತಗೊಳಿಸುತ್ತಿವೆ. ಅದು ಸದ್ಯಕ್ಕೆ ಸುಗಮವಾಗಿ ನಡೆಯುತ್ತಿದೆ’ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಆದಾಗ್ಯೂ, ಭಾರತೀಯ ಸೇನಾ ಪಡೆಗಳು ಈ ಎರಡು ಪ್ರದೇಶಗಳಲ್ಲಿ ಗಸ್ತು ಪ್ರಾರಂಭಿಸುವ ಬಗ್ಗೆ ಕೇಳಲಾದ ನಿರ್ದಿಷ್ಟ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು.

ಡೆಪ್ಸಾಂಗ್‌ನಲ್ಲಿ ಭಾರತೀಯ ಸೇನೆಯಿಂದ ಗಸ್ತು

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಡೆಪ್ಸಾಂಗ್‌ನಲ್ಲಿ ಸೋಮವಾರ ಗಸ್ತು ನಡೆಸಲಾಗಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

‘ಈ ಮೂಲಕ ವಾಸ್ತವ ಗಡಿ ರೇಖೆಯಲ್ಲಿ ಶಾಂತಿ ನೆಲಸುವಂತೆ ಮಾಡಲು ಮತ್ತೊಂದು ಸಕಾರಾತ್ಮಕ ಹೆಜ್ಜೆಯನ್ನು ಇಡಲಾಗಿದೆ’ ಎಂದು ಸೇನೆ ‘ಎಕ್ಸ್’ನಲ್ಲಿ ತಿಳಿಸಿದೆ.

ಸೇನಾ ಘರ್ಷಣೆಗೆ ಕಾರಣವಾಗಿದ್ದ ಎರಡನೇ ಸ್ಥಳ, ಪೂರ್ವ ಲಡಾಖ್‌ನ ಡೆಪ್ಸಾಂಗ್‌ನಲ್ಲಿ ಭಾರತೀಯ ಸೇನೆಯು ಗಸ್ತು ಪ್ರಾರಂಭಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ದೆಹಲಿಯಲ್ಲಿ ಶನಿವಾರ ಮಾಧ್ಯಮಗಳಿಗೆ ತಿಳಿಸಿದ್ದರು. ಪೂರ್ವ ಲಡಾಖ್‌ನ ಎರಡು ಘರ್ಷಣೆ ಕೇಂದ್ರಗಳಲ್ಲಿ ಭಾರತ ಮತ್ತು ಚೀನಾ ಪಡೆಗಳನ್ನು ಹಿಂಪಡೆಯುವ ಪ್ರಕ್ರಿಯೆ ಪೂರ್ಣಗೊಂಡ ಒಂದು ದಿನದ ನಂತರ ಶುಕ್ರವಾರ ಡೆಮ್‌ಚೋಕ್‌ನಲ್ಲಿ ಸೇನಾ ಗಸ್ತು ಪ್ರಾರಂಭವಾಯಿತು.

ಸುರಕ್ಷಿತವಾಗಿ ಮರಳಿದ ಚೀನಾ ಗಗನಯಾತ್ರಿಗಳು

ಬೀಜಿಂಗ್ (ಪಿಟಿಐ): ಚೀನಾದ ಬಾಹ್ಯಾಕಾಶ ನಿಲ್ದಾಣದಲ್ಲಿ ಆರು ತಿಂಗಳು ಕಳೆದಿದ್ದ ಚೀನಾದ ಮೂವರು ಗಗನ ಯಾತ್ರಿಗಳು ಶೆಂಝೌ-18ರ ಗಗನ ನೌಕೆಯಲ್ಲಿ ಸೋಮವಾರ ನಸುಕಿನಲ್ಲಿ ಸುರಕ್ಷಿತವಾಗಿ ಭೂಮಿಗೆ ಮರಳಿದ್ದಾರೆ ಎಂದು ಚೀನಾದ ಮಾನವಸಹಿತ ಬಾಹ್ಯಾಕಾಶ ಸಂಸ್ಥೆ (ಸಿಎಂಎಸ್‌ಎ) ತಿಳಿಸಿದೆ.

ಗಗನಯಾತ್ರಿಗಳಾದ ಯೆ ಗುವಾಂಗ್‌ಫು, ಲೀ ಕಾಂಗ್ ಮತ್ತು ಲಿ ಗುವಾಂಗ್‌ಸು ಅವರಿದ್ದ ಶೆಂಝೌ-18 ಬಾಹ್ಯಾಕಾಶ ನೌಕೆಯು ಉತ್ತರ ಚೀನಾದೊಳಗಿನ ಮಂಗೋಲಿಯಾ ಸ್ವಾಯತ್ತ ಪ್ರದೇಶ ಡಾಂಗ್‌ಫೆಂಗ್ ಇಳಿದಾಣದಲ್ಲಿ ನಸುಕಿನ 1.24ಕ್ಕೆ (ಬೀಜಿಂಗ್ ಸಮಯ) ಯಶಸ್ವಿಯಾಗಿ ಭೂಮಿಯನ್ನು ಸ್ಪರ್ಶಿಸಿದೆ. ಚೀನಾ ಕೆಳ ಕಕ್ಷೆಯಲ್ಲಿ ನಿರ್ಮಿಸುತ್ತಿರುವ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಅಭಿವೃದ್ಧಿ ಕಾರ್ಯದಲ್ಲಿ ಈ ಮೂವರು ಗಗನಯಾತ್ರಿಗಳು ನಿರತರಾಗಿದ್ದರು.

ಪ್ರೊ ಕಬಡ್ಡಿ ಲೀಗ್: ಪುಣೇರಿ ಪಲ್ಟನ್‌ಗೆ ಸಾಟಿಯಾಗದ ಗುಜರಾತ್ ಜೈಂಟ್ಸ್

ಬುಲ್ಸ್‌ಗೆ ತಲೆಬಾಗಿದ ತಲೈವಾಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೊನೆಯ ಕ್ಷಣದವರೆಗೂ ಕುತೂಹಲ ಹಿಡಿದಿಟ್ಟ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು ಒತ್ತಡ ಮೆಟ್ಟಿನಿಂತು 36-32ರಿಂದ ತಮಿಳು ತಲೈವಾಸ್ ವಿರುದ್ಧ ಗೆಲುವು ಸಾಧಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡ ನಾಲ್ಕು ಪಾಯಿಂಟ್ಸ್ ಅಂತರದಿಂದ ಗೆದ್ದು, ಟೂರ್ನಿಯಲ್ಲಿ ಎರಡನೇ ಜಯ ದಾಖಲಿಸಿತು. ಈ ಗೆಲುವಿನೊಂದಿಗೆ ಬೆಂಗಳೂರು ತಂಡ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ (12ನೇ) ಸ್ಥಾನದಿಂದ 11ನೇ ಸ್ಥಾನಕ್ಕೆ ಏರಿದೆ. ತಲೈವಾಸ್ ತಂಡಕ್ಕೆ ಇದು ಎರಡನೇ ಸೋಲಾಗಿದ್ದು, ಎರಡನೇ ಸ್ಥಾನದಲ್ಲಿ ಮುಂದುವರಿದಿದೆ.

ಪಂದ್ಯ ಮುಕ್ತಾಯಕ್ಕೆ 5 ನಿಮಿಷಗಳು ಬಾಕಿ ಇರುವಾಗ ತಲೈವಾಸ್ ತಂಡವನ್ನು ಮೊದಲ ಬಾರಿ ಆಲೌಟ್ ಬಲೆಗೆ ಬೀಳಿಸಿದ ಬುಲ್ಸ್ ಆಟಗಾರರು 29-27ರಲ್ಲಿ ಮೇಲುಗೈ ಸಾಧಿಸಿದರು. ಹೀಗಾಗಿ, ಪಂದ್ಯ ಮತ್ತಷ್ಟು ರೋಚಕ ಘಟ್ಟ ತಲುಪಿ ಗೆಲುವನ್ನು ತಮ್ಮದಾಗಿಸಿಕೊಂಡರು.

ಬೆಂಗಳೂರು ಬುಲ್ಸ್ ಪರ ಅಕ್ಷಿತ್ ಮತ್ತು ಅಜಿಂಕ್ಯ ತಲಾ 6 ಅಂಕ ಕಲೆ ಹಾಕಿದರೆ, ಸುರಿಂದರ್ 5 ಅಂಕಗಳ ಕೊಡುಗೆ ನೀಡಿದರು. ತಲೈವಾಸ್ ಪರ ನರೇಂದರ್ ಕಂಡೋಲ 6 ಮತ್ತು ಸಚಿನ್ ತಲಾ 5 ಅಂಕ ಗಳಿಸಿ ತಂಡದ ಹೋರಾಟಕ್ಕೆ ಸಾಕ್ಷಿಯಾದರು.



ತಮಿಳು ತಲೈವಾಸ್ ಆಟಗಾರನನ್ನು ಹಿಡಿಯಲು ಯತ್ನಿಸಿದ ಬೆಂಗಳೂರು ಬುಲ್ಸ್ ಆಟಗಾರರು –ಎಕ್ಸ್ ಚಿತ್ರ

ಪಲ್ಟನ್‌ಗೆ ಜಯ: ದಿನದ ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪುಣೇರಿ ಪಲ್ಟನ್ ತಂಡ ಗುಜರಾತ್ ಜೈಂಟ್ಸ್ ತಂಡವನ್ನು 49–30 ರಲ್ಲಿ 19 ಪಾಯಿಂಟ್‌ಗಳಿಂದ ಸುಲಭವಾಗಿ ಸೋಲಿಸಿತು. ಇದು ಪುಣೇರಿ ತಂಡಕ್ಕೆ ಏಳು ಪಂದ್ಯಗಳಲ್ಲಿ ಐದನೇ ಜಯವಾಗಿದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಈ ಪಂದ್ಯ ಏಕಪಕ್ಷೀಯವಾಯಿತು. ಆಕಾಶ್ ಶಿಂಧೆ 11 ಪಾಯಿಂಟ್ಸ್ ಗಳಿಸಿದರು. ಡಿಫೆಂಡರ್‌ಗಳಾದ ಅಭಿನೇಶ್ ನಟರಾಜನ್, ಗೌರವ್ ಖತ್ರಿ ಮತ್ತು ಅಮನ್ ಎಲ್ಲರೂ ಹೈ ಫೈವ್ ಗಳಿಸಿದರು. ಗುಜರಾತ್ ಜೈಂಟ್ಸ್ ಪರ ರೇಡರ್ ಗುಮನ್ ಸಿಂಗ್ ಹೋರಾಟ ತೋರಿ 13 ಪಾಯಿಂಟ್ಸ್ ಕಲೆಹಾಕಿದರು.

ಸಮರ್ಥನಂ, ವಿನ್ಯಾಸ ಟ್ರಸ್ಟ್‌ಗೆ ಜಯ

ರಾಜ್ಯ ಮಟ್ಟದ ಅಂಧರ ಟಿ10 ಕ್ರಿಕೆಟ್ ಟೂರ್ನಿ: ಒಟ್ಟು 12 ತಂಡಗಳು ಭಾಗಿ

ಪ್ರಜಾವಾಣಿ ವಾರ್ತೆ

ಮೈಸೂರು: ಆತಿಥೇಯ ಮೈಸೂರಿನ ಸಮರ್ಥನಂ ಟ್ರಸ್ಟ್ ಹಾಗೂ ಬೆಂಗಳೂರಿನ ವಿನ್ಯಾಸ ಟ್ರಸ್ಟ್ ತಂಡಗಳು ಸೋಮವಾರ ಇಲ್ಲಿ ಆರಂಭವಾದ ಕರ್ನಾಟಕ ರಾಜ್ಯ ಅಂಧರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ದಿನದ ಎರಡೂ ಪಂದ್ಯ ಗೆಲ್ಲುವ ಮೂಲಕ ಪ್ರಶಸ್ತಿಯತ್ತ ಹೆಜ್ಜೆ ಇಟ್ಟವು

ಇಲ್ಲಿನ ಜೆಎಸ್ಎಸ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಮರ್ಥನಂ ಟ್ರಸ್ಟ್ ತಂಡವು 97 ರನ್‌ಗಳ ಅಂತರದಿಂದ ಮೈಸೂರಿನ ಜೆಎಸ್ಎಸ್ ಪಿಡಿಎ ತಂಡವನ್ನು ಪರಾಭವಗೊಳಿಸಿತು. ಸಮರ್ಥನಂ ಪರ ಹುಸೇನ್ 32 ಎಸೆತಗಳಲ್ಲಿ 72 ರನ್ ಗಳಿಸಿ ಗೆಲುವಿನ ರೂವಾರಿಯಾದರು.

ಇದೇ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆದ ಮತ್ತೊಂದು ಪಂದ್ಯದಲ್ಲಿ ಸಮರ್ಥನಂ ಮೈಸೂರು ತಂಡವು 71 ರನ್ ಅಂತರದಿಂದ ಸಮರ್ಥನಂ ಧಾರವಾಡ ಟ್ರಸ್ಟ್ ಅನ್ನು ಮಣಿಸಿತು.

ರೈಲ್ವೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರಿನ ವಿನ್ಯಾಸ ಟ್ರಸ್ಟ್ 10 ವಿಕೆಟ್‌ಗಳಿಂದ ಸ್ನೇಹದೀಪ ಟ್ರಸ್ಟ್ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಬೆಂಗಳೂರಿನ ದೀಪ ಅಕಾಡೆಮಿ ವಿರುದ್ಧ 7 ವಿಕೆಟ್ ಅಂತರದಿಂದ ಗೆಲುವು ದಾಖಲಿಸಿತು.


ಅರ್ಧಶತಕ (52) ದಾಖಲಿಸಿದ ಬೆಂಗಳೂರಿನ ವಿನ್ಯಾಸ್ ಟ್ರಸ್ಟ್‌ನ ರಂಗಸ್ವಾಮಿ ಬ್ಯಾಟಿಂಗ್ ವೈಖರಿ – ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಅಂಧರ ಶಾಲೆಗೆ ಜಯ: ಬಲಗೈ ಬ್ಯಾಟರ್‌ಗಳಾದ ಸುಬ್ರಮಣಿ (36) ಹಾಗೂ ಎ.ಎಸ್. ಅಭಿ ಅವರ ಆಟದ ನೆರವಿನಿಂದ ಮೈಸೂರು ಅಂಧರ ಶಾಲೆ ತಂಡವು ಚಿಕ್ಕಬಳ್ಳಾಪುರದ ಆಶಾಕಿರಣ ತಂಡದ ವಿರುದ್ಧ 10 ವಿಕೆಟ್ ಅಂತರದಿಂದ ಗೆಲುವು ದಾಖಲಿಸಿತು.

ಹಾವೇರಿಯ ಕುಮಾರೇಶ್ವರ ಟ್ರಸ್ಟ್ ಬೆಳಗಾವಿಯ ಸಮೃದ್ಧ ಟ್ರಸ್ಟ್ ತಂಡವನ್ನು 10 ವಿಕೆಟ್ ಅಂತರದಿಂದ ಮಣಿಸಿತು. ವಿಜೇತ ತಂಡದ ಪರ ರವಿ ಅಜೇಯ ಅರ್ಧಶತಕ (51) ದಾಖಲಿಸಿದರು.

ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ (ಕೆಸಿಎಬಿ) ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆಯು ಟೂರ್ನಿ ಆಯೋಜಿಸಿದ್ದು, ಒಟ್ಟು 12 ತಂಡಗಳು ಪಾಲ್ಗೊಂಡಿವೆ.

ಇತರ ಪಂದ್ಯಗಳ ಫಲಿತಾಂಶ: ಬೆಂಗಳೂರಿನ ದೀಪಾ ಅಕಾಡೆಮಿಗೆ ಸ್ನೇಹದೀಪ ಟ್ರಸ್ಟ್ ವಿರುದ್ಧ 10 ವಿಕೆಟ್ ಅಂತರದ ಜಯ; ಚಿಕ್ಕಬಳ್ಳಾಪುರದ ಆಶಾಕಿರಣ ಟ್ರಸ್ಟ್‌ಗೆ 69 ರನ್‌ಗಳಿಂದ ಬೆಂಗಳೂರಿನ ಸ್ನೇಹಜೀವಿ ಟ್ರಸ್ಟ್ ವಿರುದ್ಧ ಗೆಲುವು; ಬೆಳಗಾವಿಯ ಸಮೃದ್ಧ ಟ್ರಸ್ಟ್‌ಗೆ ಶಿವಮೊಗ್ಗದ ಎಸ್‌ವಿಕೆ ವಿರುದ್ಧ 49 ರನ್‌ಗಳ ಜಯ.

3ಂಗಳ ಕೊನೆಯಲ್ಲಿ ಐಪಿಎಲ್‌ಗೆ ಹರಾಜು ಪ್ರಕ್ರಿಯೆ

ನವದೆಹಲಿ (ಪಿಟಿಐ): ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಆಟಗಾರರ ಹರಾಜು ಪ್ರಕ್ರಿಯೆ ಈ ತಿಂಗಳ ಅಂತ್ಯದಲ್ಲಿ ಸೌದಿ ಅರೇಬಿಯಾದ ರಾಜ ಧಾನಿ ರಿಯಾದ್‌ನಲ್ಲಿ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮೂಲಗಳು ಸೋಮವಾರ ಖಚಿತಪಡಿಸಿವೆ.

ಐಪಿಎಲ್‌ಗೆ ಆಟಗಾರರ ಹರಾಜು ಪ್ರಕ್ರಿಯೆ ರಿಯಾದ್‌ನಲ್ಲಿ ನಡೆಯಲಿದ್ದು, ಫ್ರಾಂಚೈಸಿಗಳಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆ. ನವೆಂಬರ್ 24 ಮತ್ತು 25ರಂದು ಈ ಪ್ರಕ್ರಿಯೆ ನಡೆಯುವ ಸಾಧ್ಯತೆಯಿದೆ ಎಂದು ಬಿಸಿಸಿಐನ ಮೂಲವೊಂದು ಪಿಟಿಐಗೆ ತಿಳಿಸಿದೆ.

ಈ ಬಾರಿಯ ಹರಾಜು ಪ್ರಕ್ರಿಯೆಗೆ ಹೆಚ್ಚಿನ ಮಹತ್ವ ಬಂದಿದ್ದು, ಭಾರತ ತಂಡದಲ್ಲಿ ಆಡಿರುವ ರಿಷಭ್ ಪಂತ್, ಕೆ.ಎಲ್.ರಾಹುಲ್, ಶ್ರೇಯಸ್ ಅಯ್ಯರ್, ಅರ್ಷದೀಪ್ ಸಿಂಗ್ ಅಂಥ ಆಟಗಾರರನ್ನು ಖರೀದಿಸಲು ಫ್ರಾಂಚೈಸಿಗಳಿಗೆ ಅವಕಾಶವಿದೆ. ಒಟ್ಟು 10 ಫ್ರಾಂಚೈಸಿಗಳಿಗೆ ಒಟ್ಟು 641.5 ಕೋಟಿ ವೆಚ್ಚ ಮಾಡಲು ಅವಕಾಶ ವಿದೆ. ವಿವಿಧ ತಂಡಗಳಿಗೆ 204 ಆಟಗಾರರನ್ನು ಪಡೆದುಕೊಳ್ಳಲು ಅವಕಾಶವಿದೆ. 204 ಆಟಗಾರರಲ್ಲಿ ಹೊರದೇಶಗಳ 70 ಮಂದಿ ಆಟಗಾರರು ಇದ್ದಾರೆ.

ಆಟಗಾರರನ್ನು ಉಳಿಸಿಕೊಳ್ಳಲು ಅಂತಿಮ ಗಡುವು ಮುಗಿದಿದ್ದು 10 ಫ್ರಾಂಚೈಸಿಗಳು 46 ಆಟಗಾರರನ್ನು ಉಳಿಸಿಕೊಂಡಿವೆ. ಇದಕ್ಕಾಗಿ 558.5 ಕೋಟಿ ವೆಚ್ಚ ಮಾಡಿವೆ.

ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಸಂಭವನೀಯರ ಪಟ್ಟಿಯಲ್ಲಿ ಸ್ಮರಣ್

ಬೆಂಗಳೂರು: ಯುವ ಬ್ಯಾಟರ್‌ಗಳಾದ ಆರ್.ಸ್ಮರಣ್ ಮತ್ತು ಮ್ಯಾಕ್ನಿಲ್ ಎಚ್.ನೊರೊನ್ಹಾ ಅವರು ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಗೆ ಪ್ರಕಟಿಸಲಾದ 26 ಸಂಭವನೀಯ ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಈ ಆಟಗಾರರಿಗೆ ನವೆಂಬರ್ 11 ರಿಂದ ಶಿಬಿರ ನಡೆಯಲಿದೆ.

ಕಳೆದ ವರ್ಷ, 23 ವರ್ಷದೊಳಗಿನವರ ಸಿ.ಕೆ. ನಾಯ್ಡು ಟ್ರೋಫಿಯಲ್ಲಿ ಸ್ಮರಣ್ ಮತ್ತು ಮ್ಯಾಕ್ನಿಲ್ ಅಮೋಘ ಪ್ರದರ್ಶನ ನೀಡಿ ಗಮನ ಸೆಳೆದಿದ್ದರು. ಸ್ಮರಣ್ 16 ಇನ್ನಿಂಗ್ಸ್‌ಗಳಿಂದ 829 ರನ್ ಕಲೆ ಹಾಕಿ ತಂಡದ ಪರ ಎರಡನೆ ಅತಿ ಹೆಚ್ಚು ರನ್ ಹೊಡೆದ ಆಟಗಾರ ಎನಿಸಿದ್ದರು. ಇದರಲ್ಲಿ 194 ರನ್‌ಗಳ ಇನಿಂಗ್ಸ್ ಒಳಗೊಂಡಿತ್ತು. ನೊರೊನ್ಹಾ ಗರಿಷ್ಠ 117 ರನ್ ಸೇರಿದಂತೆ ಒಟ್ಟು 638 ರನ್ ಪೇರಿಸಿದ್ದರು.

ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಬಿ ಗುಂಪಿನಲ್ಲಿದೆ. ಉತ್ತರಾಖಂಡ, ತ್ರಿಪುರ, ಸೌರಾಷ್ಟ್ರ, ಸಿಕ್ಕಿಂ, ತಮಿಳುನಾಡು, ಬರೋಡಾ ಇದೇ ಗುಂಪಿನಲ್ಲಿವೆ.

ಸಂಭವನೀಯರು: ಕೆ.ಎಲ್.ರಾಹುಲ್, ಮಯಂಕ್ ಅಗರ್‌ವಾಲ್, ಮನೀಷ್ ಪಾಂಡೆ, ಪ್ರಸಿದ್ಧ ಎಂ.ಕೃಷ್ಣ, ದೇವದತ್ತ ಪಡಿಕ್ಕಲ್, ಎಲ್.ಆರ್.ಚೇತನ್, ಮ್ಯಾಕ್ನಿಲ್ ನೊರೊನ್ಹಾ, ಶ್ರೇಯಸ್ ಗೋಪಾಲ್, ಕೆ.ಎಲ್.ಶ್ರೀಜಿತ್ (ವಿಕೆಟ್ ಕೀಪರ್), ಅಭಿನವ್ ಮನೋಹರ್, ಮನೋಜ್ ಭಾಂಡಗೆ, ಹಾರ್ದಿಕ್ ರಾಜ್, ವಿ.ಕೌಶಿಕ್, ವಿದ್ಯಾಧರ ಪಾಟೀಲ, ಶುಭಾಂಗ್ ಹೆಗ್ಡೆ, ಅಭಿಲಾಷ್ ಶೆಟ್ಟಿ, ಮೊಹ್ಸಿನ್ ಖಾನ್, ಆರ್.ಸ್ಮರಣ್, ಲವನೀತ್ ಸಿಸೋಡಿಯಾ (ವಿಕೆಟ್ ಕೀಪರ್), ವೈಶಾಖ ವಿಜಯಕುಮಾರ್, ಮನ್ವಂತ್ ಕುಮಾರ್ ಎಲ್., ಯಶೋವರ್ಧನ ಪರಂತಾಪ್, ಅಧೋಕ್ಷ ಹೆಗಡೆ, ಶರತ್ ಬಿ.ಆರ್ (ವಿಕೆಟ್ ಕೀಪರ್), ಪ್ರವೀಣ್ ದುಬೆ, ವೆಂಕಟೇಶ್ ಎಂ.

ಮಹಿಳಾ ಕ್ರಿಕೆಟ್: ಆಸ್ಟ್ರೇಲಿಯಾ, ಇಂಗ್ಲೆಂಡ್ ತಂಡಗಳಿಗೆ ಭಾರತ ಆತಿಥ್ಯ

ದುಬೈ (ಪಿಟಿಐ): ಮುಂದಿನ ನಾಲ್ಕು ವರ್ಷಗಳ (2025–29) ಅವಧಿಗೆ ಮಹಿಳಾ ಕ್ರಿಕೆಟ್‌ನ ಭವಿಷ್ಯದ ಪ್ರವಾಸ ಕಾರ್ಯಕ್ರಮಗಳನ್ನು (ಎಫ್‌ಟಿಪಿ) ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೋಮವಾರ ಪ್ರಕಟಿಸಿದ್ದು, ಈ ಬಾರಿ ಟೆಸ್ಟ್ ಮತ್ತು ದ್ವಿಪಕ್ಷೀಯ ಸರಣಿಗಳಿಗೆ ಆದ್ಯತೆ ನೀಡಿದೆ.

ಭಾರತ ತಂಡವು ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳಿಗೆ ಸರಣಿಗಳಲ್ಲಿ ಆತಿಥ್ಯ ವಹಿಸಲಿದೆ. ಅದರ ಜೊತೆಗೆ ಬಾಂಗ್ಲಾದೇಶ ಮತ್ತು 11ನೇ ಸದಸ್ಯ ರಾಷ್ಟ್ರವಾದ ಜಿಂಬಾಬ್ವೆ ತಂಡಗಳನ್ನೂ ತವರಿನಲ್ಲಿ ಎದುರಿಸಲಿದೆ.

ಪ್ರತಿ ಸದಸ್ಯ ರಾಷ್ಟ್ರಗಳಿಗೆ ತಲಾ ನಾಲ್ಕು ತವರಿನಲ್ಲಿ ಮತ್ತು ಹೊರಗಡೆ ಸರಣಿಗಳನ್ನು ನಿಗದಿ ಮಾಡಲಾಗಿದೆ. ಈ ಅವಧಿಯಲ್ಲಿ ಭಾರತ ವನಿತೆಯರ ತಂಡವು ನ್ಯೂಜಿಲೆಂಡ್, ವೆಸ್ಟ್‌ಇಂಡೀಸ್, ಐರ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾಕ್ಕೂ ಪ್ರಯಾಣ ಬೆಳೆಸಲಿದೆ.

ಇದಲ್ಲದೆ, ಭಾರತವು 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ಗೆ ಮುಂಚಿತವಾಗಿ ಇಂಗ್ಲೆಂಡ್‌ನಲ್ಲಿ ತ್ರಿಕೋನ ಸರಣಿಯಲ್ಲಿ ಆಡಲಿದೆ. ನ್ಯೂಜಿಲೆಂಡ್ ಸರಣಿಯಲ್ಲಿ ಭಾಗವಹಿಸುವ ಮೂರನೇ ತಂಡವಾಗಿದೆ. 2026ರ ಮಹಿಳಾ ಟಿ20 ವಿಶ್ವಕಪ್‌ಗೆ ಇಂಗ್ಲೆಂಡ್ ಆತಿಥ್ಯ ವಹಿಸಲಿದೆ.

‘ಐಸಿಸಿ ಸದಸ್ಯ ರಾಷ್ಟ್ರಗಳು ಈ ಬಾರಿ ಹೆಚ್ಚಿನ ಟೆಸ್ಟ್ ಪಂದ್ಯಗಳನ್ನು ಆಡಲು ಒಪ್ಪಿಗೆ ನೀಡಿವೆ. ಏಕದಿನ ಮತ್ತು ಟಿ20 ಒಳಗೊಂಡಿರುವ ಬಹು ಮಾದರಿಯ ಸರಣಿಗಳನ್ನು ಆಡಲು ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಸೇರಿದಂತೆ ಎಲ್ಲ ಸದಸ್ಯ ರಾಷ್ಟ್ರಗಳು ಒಪ್ಪಿಕೊಂಡಿವೆ’ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ಹಾಕಿ: ಗೋಲುಗಳ ಸುರಿಮಳೆ




ಚೆನ್ನೈ (ಪಿಟಿಐ): ಕರ್ನಾಟಕ ತಂಡವು, ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಸೋಮವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ 10–0 ಗೋಲುಗಳಿಂದ ಉತ್ತರಾಖಂಡ ತಂಡವನ್ನು ಮಣಿಸಿತು.

ಮೊಹಮ್ಮದ್ ರಾಹೀಲ್ ಮೌಸೀನ್ ಮೂರು ಗೋಲುಗಳನ್ನು (20, 38, 53ನೇ ನಿಮಿಷ) ಗಳಿಸಿದರು. ಆಭರಣ್ ಸುದೇವ್ (16, 37) ಎರಡು ಗೋಲುಗಳಿಗೆ ಕಾರಣರಾದರು. ಸಿ.ಬಿ.ಪೂವಣ್ಣ, ರಾಹುಲ್ ಸಿ.ಜೆ. (15ನೇ ನಿಮಿಷ), ಭರತ್ ಮಹಾಲಿಂಗಪ್ಪ ಕುರ್ತಕೋಟಿ (39ನೇ), ಸೋಮಯ್ಯ ಕುಪ್ಪಂಡ (52ನೇ) ಮತ್ತು ಸೂರ್ಯ ಎನ್.ಎಂ. (55ನೇ) ಇತರ ಗೋಲುಗಳನ್ನು ತಂದಿತ್ತರು.

ಚಾಂಪಿಯನ್‌ಷಿಪ್‌ನ ಹೆಚ್ಚಿನ ಪಂದ್ಯಗಳು ಏಕಪಕ್ಷೀಯವಾದವು. ಮಧ್ಯಪ್ರದೇಶ 29–0 ಗೋಲುಗಳಿಂದ ಅಂಡಮಾನ್ ಮತ್ತು ನಿಕೋಬಾರ್ ತಂಡವನ್ನು ಸದೆಬಡಿದರೆ, ಮಣಿಪುರ ಎಚ್ ಗುಂಪಿನಲ್ಲಿ 19–1 ರಿಂದ ಬಿಹಾರ ತಂಡವನ್ನು ಸೋಲಿಸಿತು.

ಬೆಂಗಳೂರಿನಲ್ಲಿ 30ರಂದು ಪ್ರೊ ಬಾಕ್ಸಿಂಗ್



ಬೆಂಗಳೂರು: ಎಚ್‌ಎಸ್‌ಆರ್ ಬಡಾವಣೆಯ ವೈಟ್ ಹೌಸ್‌ನಲ್ಲಿ ಇದೇ 30ರಂದು ಡಬ್ಲ್ಯುಬಿಸಿ (ವಿಶ್ವ ಬಾಕ್ಸಿಂಗ್ ಕೌನ್ಸಿಲ್) ಯೂತ್ ವರ್ಲ್ಡ್ ಪ್ರೊ ಬಾಕ್ಸಿಂಗ್ ಮತ್ತು ಡಬ್ಲ್ಯುಬಿಸಿ ಇಂಡಿಯಾ ಪ್ರೊ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಉಗಾಂಡಾ, ಘಾನಾ, ಥಾಯ್ಲೆಂಡ್ ಮತ್ತು ಫಿಲಿಪೀನ್ಸ್‌ನ ಪ್ರತಿಸ್ಪರ್ಧಿಗಳ ಜೊತೆ ಭಾರತದ ಅಗ್ರ ಬಾಕ್ಸರ್‌ಗಳು ಯೂತ್ ವರ್ಲ್ಡ್ ಪ್ರಶಸ್ತಿಗಾಗಿ ಸೆಣಸಾಡುವರು. ಮಿಜೋರಾಂ ಮೂಲದ ಲಾಲ್ಡಿನ್‌ಸಂಗಾ ಮತ್ತು ಘಾನಾದ ಮೈಕೆಲ್ ನೆಲ್ಸನ್ ನಡುವಿನ ಪಂದ್ಯ ಪ್ರಮುಖ ಆಕರ್ಷಣೆಯಾಗಿದೆ. ವಿಜೇತರು ಸುಮಾರು ₹4.20 ಲಕ್ಷ ಬಹುಮಾನ ಮೊತ್ತ ಪಡೆಯುವರು.

ಡಬ್ಲ್ಯುಬಿಸಿ ಇಂಡಿಯಾ ಪ್ರಶಸ್ತಿಯಲ್ಲಿ ಉತ್ತರಾಖಂಡದ ರಿತೇಶ್ ಸಿಂಗ್ ಅವರು ಮಿಜೋರಾಂನ ಲಾಲ್ತ್ರುಯಿತ್ಲುಂಗಾ ವಿರುದ್ಧ ಸೆಣಸಲಿದ್ದಾರೆ. ಕ್ರೌನ್ ಬಾಕ್ಸಿಂಗ್ ಪ್ರಮೋಷನ್ಸ್ ಮತ್ತು ಗ್ರಾಸ್‌ರೂಟ್ ಬಾಕ್ಸಿಂಗ್ ಸಹಭಾಗಿತ್ವದಲ್ಲಿ ಬೆಂಗಳೂರು ನಗರದಲ್ಲಿ ಮೊದಲ ಬಾರಿಗೆ ಪ್ರೊ ಬಾಕ್ಸಿಂಗ್ ಆಯೋಜಿಸಲಾಗುತ್ತಿದೆ ಎಂದು ಗ್ರಾಸ್‌ರೂಟ್ ಬಾಕ್ಸಿಂಗ್‌ನ ಮುಜ್ತಬಾ ಕಮಾಲ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.